Editor: NITYANANDASWAMI Publisher: U. BASAVARAJA RNI No. KARKAN/2006/17926


# ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–44 | ಅಕ್ಟೋಬರ್ 28–ನವೆಂಬರ್ 03, 2024 | ಪುಟ 16 | ರೂ.10/–
Volume-18 | Issue-44 | October 28-November 03, 2024 | Pages:16 | Price: 10/-







98 ಜನರಿಗೆ ಜೀವಾವಧಿ ಶಿಕ್ಷೆ
3 ಜನರಿಗೆ ಕಠಿಣ ಕಾರಾಗೃಹ

## ಮರಕುಂಬಿ ಪ್ರಕರಣ: ಐತಿಹಾಸಿಕ ತೀರ್ಪು




## ಭಾರತ-ಚೀನಾ ಸಂಬಂಧಗಳನ್ನು ತಿಳಿಗೊಳಿಸುವ ಹೆಜ್ಜೆಗಳು

ಚನ್ನಪಟ್ಟಣ, ಸಂಡೂರು, ಶಿಗ್ಗಾಂವಿ

## ಉಪ ಚುನಾವಣೆಗಳು: ಮತದಾರರ ಕರ್ತವ್ಯ ಏನು?

## ಸಾಹಿತ್ಯ ಪರಿಷತ್ತು: ದಿಕ್ಕು ತಪ್ಪಿಸುವ ಪ್ರಯತ್ನಗಳು

# ಬ್ರಿಟನ್ ಮತ್ತು ಭಾರತದಲ್ಲಿ ಬಂಡವಾಳದ ಉಗಮ, ಕಾರ್ಮಿಕ ವರ್ಗದ ಉದಯ

**....1854ರಲ್ಲಿಯೇ ನಾನಾಭಾಯ್ ಕವಾಸ್ಜಿ ಎಂಬ ಟಾಟಾರಂತೆಯೇ ಚೀನಾಕ್ಕೆ ಅಫೀಮು ವ್ಯಾಪಾರ, ಹತ್ತಿ ಬೂಮ್ ಇತ್ಯಾದಿಗಳಿಂದ ಬಂಡವಾಳ ಶೇಖರಿಸಿದ್ದ ಪಾರ್ಸಿಯಿಂದ ಸ್ಥಾಪಿತವಾಗಿತ್ತು. ಟಾಟಾರವರು ತಮ್ಮ ಮೊದಲ ಹತ್ತಿ ಗಿರಣಿ ಸ್ಥಾಪಿಸುವ ಸಮಯ 1979–80ರ ವೇಳೆಗೆ ಬಾಂಬೆಯಲ್ಲಿ 58 ಹತ್ತಿ ಗಿರಣಿಗಳು ಸ್ಥಾಪಿತವಾಗಿದ್ದವು. ಹೀಗೆ ಭಾರತದಲ್ಲಿ ಕೈಗಾರಿಕಾ ಬಂಡವಾಳ ಉದ್ಭವವಾಯಿತು. ಬೆಳೆಯುತ್ತಾ ಹೋಯಿತು. ಟಾಟಾರವರಂತೆ ಮತ್ತೂ ಕೆಲವರು ಕೈಗಾರಿಕಾ ಬಂಡವಾಳಗಾರರಾದರು ಎಂಬುದೇನೋ ನಿಜ. ಆದರೆ? ಆದರೆ??**

**ಜಿ.ಎನ್. ನಾಗರಾಜ**

**ಭಾಗ 3**




ಜಮ್‌ಶೇಟ್ಜಿ ಟಾಟಾರವರು ತಮ್ಮ ಕುಟುಂಬದ ವ್ಯಾಪಾರದಿಂದ ಬೇರೆಯಾಗಿ ಕಂಪನಿಯೊಂದನ್ನು 1858ರಲ್ಲಿ ಸ್ಥಾಪಿಸಿದ ನಂತರ ಅವರು 1877ರಲ್ಲಿ ನಾಗಪುರದಲ್ಲಿ ಎಂಪ್ರೆಸ್ ಮಿಲ್ (ಚಕ್ರವರ್ತಿನಿ ಗಿರಣಿ, ಆಗ್ಗೆ ಭಾರತದ ಸಾಮ್ರಾಜ್ಞಿಯಾಗಿ ಘೋಷಿಸಿಕೊಂಡು ಈಸ್ಟ್ ಇಂಡಿಯಾ ಕಂಪನಿಯ ಆಡಳಿತಾಧಿಕಾರವನ್ನೆಲ್ಲ 1858ರಲ್ಲಿ ನೇರವಾಗಿ ತನ್ನ ಕೈಗೆ ತೆಗೆದುಕೊಂಡಿದ್ದ ಬ್ರಿಟನ್ನಿನ ರಾಣಿ ವಿಕ್ಟೋರಿಯಾರವರ ಹೆಸರಲ್ಲಿ) ಎಂಬ ಹತ್ತಿ ಗಿರಣಿಯನ್ನು ಮಹಾರಾಷ್ಟ್ರದ ನಾಗಪುರದಲ್ಲಿ ಸ್ಥಾಪಿಸಿದರು. ಆ ವೇಳೆಗಾಗಲೇ ಒಂದು ಮುಚ್ಚಿ ಹೋಗಿದ್ದ ಎಣ್ಣೆ ಗಿರಣಿಯೊಂದನ್ನು ಕೊಂಡು ಅದನ್ನು ಹತ್ತಿ ಗಿರಣಿಯನ್ನಾಗಿ ಮಾಡಿ ಕೂಡಲೇ ಮಾರಿ ಗಣನೀಯ ಲಾಭ ಮಾಡಿಕೊಂಡಿದ್ದರು. ಎಂಪ್ರೆಸ್ ಮಿಲ್ ಅನ್ನು ನಾಗಪುರದಲ್ಲಿ ಸ್ಥಾಪಿಸಿದಾಗ ಅದನ್ನು ಇತರ ಬಂಡವಾಳಶಾಹಿಗಳು ಅಪಹಾಸ್ಯ ಮಾಡಿದ್ದರಂತೆ. ಹತ್ತಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಾಂಬೆಯೇ (ಈಗ ಮುಂಬೈ) ಅತ್ಯಂತ ಪ್ರಶಸ್ತವಾದ ಸ್ಥಳ. ಅದಕ್ಕೆ ಯಥೇಚ್ಚ ಹತ್ತಿ, ಸೂಕ್ತ ಕಾರ್ಮಿಕರು ಮತ್ತು ಇತರ ಸೌಲಭ್ಯಗಳಿಗೆ ಬಾಂಬೆ ಮಾತ್ರ ಪ್ರಶಸ್ತ ಜಾಗವಾಗಿರುವಾಗ ನಾಗಪುರದಲ್ಲಿ ಮಾಡಿ ನಷ್ಟ ಅನುಭವಿಸುತ್ತಾರೆ ಎಂದವರ ಅಭಿಪ್ರಾಯ. ಇದಕ್ಕೆ ಕಾರಣವನ್ನು ಮುಂದೆ ಅವರ ಮಾತಿನಲ್ಲಿಯೇ ನೋಡೋಣ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಂತಹ ಅತಿ ಹೆಚ್ಚು ತಂತ್ರಜ್ಞಾನ ನೈಪುಣ್ಯ ಅವಶ್ಯವಾದ ಕೈಗಾರಿಕೆಯನ್ನು ದೇಶದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶ ಇಂದು ಝಾರ್ಖಂಡಕ್ಕೆ ಸೇರಿದ ಆದಿವಾಸಿ ನೆಲೆಯಲ್ಲಿ ಸ್ಥಾಪಿಸಿದ್ದರು ಎಂಬಂತಹ ಅವರ ಕೃತಿಗಳಂತೂ ಅವರ ಇಂತಹ ಜಾಗಗಳನ್ನೇ ಹುಡುಕಿ ಹೋಗುತ್ತಿದ್ದುದನ್ನು ಎತ್ತಿ ತೋರಿಸುತ್ತದೆ.

ಟಾಟಾರವರು ಒಂದಾದ ಮೇಲೊಂದರಂತೆ ಮುಂದೆ ಇನ್ನೂ ನಾಲ್ಕು ಹತ್ತಿ ಗಿರಣಿಗಳನ್ನು ಸ್ಥಾಪಿಸಿದರು. ಅದರಲ್ಲಿ ಬಾಂಬೆಯಲ್ಲೂ ಒಂದನ್ನು 1886ರಲ್ಲಿ ಸ್ಥಾಪಿಸಿ ಅದಕ್ಕೆ ಸ್ವದೇಶಿ ಮಿಲ್ ಎಂದು ಹೆಸರಿಟ್ಟರು ಎಂಬುದು ಗಮನಾರ್ಹ.

1854ರಲ್ಲಿಯೇ ನಾನಾಭಾಯ್ ಕವಾಸ್ಜಿ ಎಂಬ ಟಾಟಾರಂತೆಯೇ ಚೀನಾಕ್ಕೆ ಅಫೀಮು ವ್ಯಾಪಾರ, ಹತ್ತಿ ಬೂಮ್ ಇತ್ಯಾದಿಗಳಿಂದ ಬಂಡವಾಳ ಶೇಖರಿಸಿದ್ದ ಪಾರ್ಸಿಯಿಂದ ಸ್ಥಾಪಿತವಾಗಿತ್ತು. ಟಾಟಾರವರು ತಮ್ಮ ಮೊದಲ ಹತ್ತಿ ಗಿರಣಿ ಸ್ಥಾಪಿಸುವ ಸಮಯ 1979–80ರ ವೇಳೆಗೆ ಬಾಂಬೆಯಲ್ಲಿ 58 ಹತ್ತಿ ಗಿರಣಿಗಳು ಸ್ಥಾಪಿತವಾಗಿದ್ದವು.

ಹೀಗೆ ಭಾರತದಲ್ಲಿ ಕೈಗಾರಿಕಾ ಬಂಡವಾಳ ಉದ್ಭವವಾಯಿತು. ಬೆಳೆಯುತ್ತಾ ಹೋಯಿತು. ಟಾಟಾರವರಂತೆ ಮತ್ತೂ ಕೆಲವರು ಕೈಗಾರಿಕಾ ಬಂಡವಾಳಗಾರರಾದರು ಎಂಬುದೇನೋ ನಿಜ. ಆದರೆ? ಆದರೆ??

ಒಂದು ಬೃಹತ್ ಕೈಗಾರಿಕಾ ದೇಶವೊಂದರ ಅಧೀನವಾಗಿದ್ದ ಈ ದೇಶದಲ್ಲಿ ಉದ್ಭವವಾದ ಬಂಡವಾಳ ಎಂತಹುದು, ಯಾವ ಪ್ರಮಾಣದ್ದು?


ವಿಕ್ಟೋರಿಯಾ ರಾಣಿ


ಅದನ್ನು ಆಕ್ರಮಿಸಿದ ದೇಶ ಬ್ರಿಟನ್ ವಿಶ್ವದಲ್ಲಿ ಬಂಡವಾಳಶಾಹಿಯ ಉಗಮ, ಬಂಡವಾಳದ ಉದ್ಭವ ಮತ್ತು ಬೆಳವಣಿಗೆಯ ಟಿಪಿಕಲ್ ಮಾದರಿ. ವಸಹಾತುಶಾಹಿ ದೇಶಗಳಲ್ಲೆಲ್ಲ ಬ್ರಿಟನ್ ಬಂಡವಾಳಶಾಹಿ ಬೆಳವಣಿಗೆಯಲ್ಲಿ ಅತಿ ದೊಡ್ಡ ಪ್ರಮಾಣ ಮತ್ತು ವ್ಯಾಪ್ತಿಯನ್ನು ಮುಟ್ಟಿದ್ದರೆ, ಈ ದೇಶಗಳ ವಹಾಹತುಗಳಾಗಿದ್ದ ಇತರೆಲ್ಲ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಂಡವಾಳಶಾಹಿ ಅತಿ ಹೆಚ್ಚು ಬೆಳವಣಿಗೆಯನ್ನು ಹೊಂದಿತ್ತು. ಈ ಎರಡು ಬಂಡವಾಳಶಾಹಿಗಳ ಉಗಮದ ಬಗೆಗಿನ ಪರಸ್ಪರ ತುಲನೆ ಮಾಡಿದರೆ ನಮ್ಮ ದೇಶದಲ್ಲಿ ಉದ್ಭವವಾದ ಬಂಡವಾಳದ ಸ್ವರೂಪ ಹಾಗೂ ಬಂಡವಾಳಿಗರ ಸ್ವರೂಪ ಅಥವಾ ವಿರೂಪದ ಬಗ್ಗೆ ಮಾತ್ರವಲ್ಲ, ದೇಶದ ಮೇಲೆ ಅದರ ಪರಿಣಾಮದ ಬಗೆಗೂ ತಿಳಿಯುತ್ತದೆ.

ಬ್ರಿಟನ್‌ನಲ್ಲಿ ಕೈಗಾರಿಕಾ ಬಂಡವಾಳದ ಉದ್ಭವ ಮತ್ತು ಶೇಖರಣೆಯನ್ನೇ ಕಾರ್ಲ್ ಮಾರ್ಕ್ಸ್‌ರವರು ತಮ್ಮ ಬಂಡವಾಳ ಕೃತಿಯಲ್ಲಿ ವಿಶದವಾದ ಅಧ್ಯಯನ, ವಿಶ್ಲೇಷಣೆಗೆ ಒಳಪಡಿಸಿದ್ದು. ಅದರಲ್ಲಿ ಬ್ರಿಟನ್ನಿನ ಆದಿಮ ಬಂಡವಾಳದ ಉದ್ಭವದ ಬಗ್ಗೆ ಹೀಗೆ ಹೇಳಿದ್ದಾರೆ: ಅಂದು ಬ್ರಿಟನ್ ಮತ್ತು ಯುರೋಪಿನಲ್ಲಿ ಕೈಗಾರಿಕಾ ಬಂಡವಾಳಗಾರರು ಕುಶಲ ಕೆಲಸಗಾರರ ಕೂಟಗಳಾಗಿದ್ದ ಗಿಲ್ಡ್‌ಗಳ ಯಜಮಾನ ಕುಶಲಕರ್ಮಿಗಳ, ಅಥವಾ ಸ್ವತಂತ್ರ ಸಣ್ಣ ಕುಶಲ ಕೆಲಸಗಾರರ, ಕೇವಲ ಕೂಲಿಕಾರರ ನಡುವಿನಿಂದ ಸಣ್ಣ ಬಂಡವಾಳಗಾರರಾಗಿ ಮೂಡಿ ಬಂದರು. ಮುಂದೆ ಪೂರ್ಣ ಬಂಡವಾಳಗಾರರಾದರು.

ಇದು ಎರಡು ಮೂರು ಶತಮಾನಗಳ ಕಾಲದಲ್ಲಿ ಹಲವು ಹಂತಗಳ ಮೂಲಕ ಬಹು ದೀರ್ಘ ಕಾಲಾವಧಿಯಲ್ಲಿ ಸಾವಧಾನವಾಗಿ ನಡೆದ ಪ್ರಕ್ರಿಯೆ.

ಈ ಪ್ರಕ್ರಿಯೆ ಬಗ್ಗೆ ಅಧ್ಯಯನ ಮಾಡುವುದು ಭಾರತದಲ್ಲಿ ಬಂಡವಾಳಶಾಹಿಗಳ ಮೂಲ ಮತ್ತು ಕಾರ್ಮಿಕರ ಉಗಮದ ಬಗೆಗೂ, ಇಲ್ಲಿಯ ಕೈಗಾರಿಕೀಕರಣದ ವಿರೂಪದ ಬಗೆಗೂ ಅರ್ಥ ಮಾಡಿಕೊಳ್ಳುವುದಕ್ಕೆ ಅವಶ್ಯ. ಆದರೆ ಈ ಲೇಖನದ ಉದ್ದೇಶಕ್ಕೆ ಸೀಮಿತವಾಗಿ ಇಷ್ಟನ್ನು ತಿಳಿದುಕೊಳ್ಳಬೇಕು.

ಈ ಪ್ರಕ್ರಿಯೆಯಲ್ಲಿ ಬಂಡವಾಳಗಾರರು ವಸ್ತುಗಳ ಉತ್ಪಾದನೆಗೆ ಅಗತ್ಯವಾದ ಕೌಶಲ್ಯ ಉಳ್ಳವರಾಗಿದ್ದರು. ವಸ್ತುಗಳ ಉತ್ಪಾದನಾ ಪ್ರಕ್ರಿಯೆಯ ಅರಿವುಳ್ಳವರಾಗಿದ್ದರು. ಕಾರ್ಮಿಕರಂತೂ ಬಹು ದೊಡ್ಡ ಪ್ರಮಾಣದಲ್ಲಿ ಕುಶಲ ಕೆಲಸಗಾರರೇ ಆಗಿದ್ದರು.




ನಂತರ ಬೇರೆ ಮೂಲದಿಂದ ಬಂಡವಾಳಗಾರರು ಕೈಗಾರಿಕೆಗಳನ್ನು ಸ್ಥಾಪಿಸಿದಾಗಲೂ ಅವುಗಳ ಫೋರ್‌ಮೆನ್ (ಮೇಲ್ವಿಚಾರಕರು), ಮ್ಯಾನೇಜರ್‌ಗಳು ಕೂಡ ಗಣನೀಯ ಪ್ರಮಾಣದಲ್ಲಿ ಕುಶಲ ಕೆಲಸಗಾರ ಮೂಲದವರಾಗಿದ್ದರು.

ಆದರೆ ಭಾರತದಲ್ಲಿ ಏನಾಯಿತೆಂಬುದು ಸಾಮಾನ್ಯವಾಗಿ ಗೊತ್ತಿರುವ ಸಂಗತಿ. ಬ್ರಿಟಿಷ್ ವಸಾಹತಾಗುವ ಮೊದಲು ವಿಶ್ವದಲ್ಲೇ ಅತ್ಯುತ್ತಮ ಗುಣಮಟ್ಟದ ಬಟ್ಟೆಗಳನ್ನು ತಯಾರಿಸುತ್ತಿದ್ದ ಕುಶಲ ಕೆಲಸಗಾರರು ಬ್ರಿಟಿಷ್ ಬಟ್ಟೆಗಳ ಅಗ್ಗದ ಆಮದುಗಳಿಂದ ಕೆಲಸ ಕಳೆದುಕೊಂಡು ಹಳ್ಳಿಗಳಲ್ಲಿ ಕೂಲಿಕಾರರಾದರು, ಗೇಣಿದಾರರಾದರು. ಮುಂದಿನ ಎರಡು ಮೂರು ತಲೆಮಾರುಗಳಲ್ಲಿ ಅವರ ಎಲ್ಲ ಕೌಶಲ್ಯವೂ ನಾಶವಾಗಿ ಹೋಯಿತು. ಈ ಕೃಷಿ ಕೂಲಿಕಾರರ ಮೂಲದಿಂದ ಭಾರತದ ಕಾರ್ಮಿಕ ವರ್ಗ ಉದಯಿಸಿತು. ನೂರು ನೂರೈವತ್ತು ವರ್ಷಗಳ ನಂತರ ಬಟ್ಟೆ ಗಿರಣಿ ಸ್ಥಾಪನೆ ಮಾಡಿದ ಬಂಡವಾಳಗಾರರೂ ಕುಶಲ ಕೆಲಸಗಾರ ಮೂಲದವರಲ್ಲ. ಅವರು ಬ್ರಿಟನ್ನಿನಂತೆ ಹಲವು ಸಾವಿರ ಸಣ್ಣ ಸಣ್ಣ ಬಂಡವಾಳಶಾಹಿಗಳಲ್ಲ.

1640 ರಿಂದ ಆರಂಭಿಸಿ ಬ್ರಿಟನ್‌ನಲ್ಲಿ ಪಾಳೆಯಗಾರಿ ವ್ಯವಸ್ಥೆಯನ್ನು ಕಿತ್ತೊಗೆಯುವ ಪ್ರಯತ್ನಗಳು ಆರಂಭವಾದಾಗಲಿಂದ ಮುಂದೆ ಪ್ರಜಾಪ್ರಭುತ್ವ ಕ್ರಾಂತಿ ಯಶಸ್ವಿಯಾದ ನಂತರ ಈ ಕುಶಲ ಕೆಲಸಗಾರರ ಮೇಲೆ ರಾಜರು, ಸಾಮಂತರುಗಳ ಹಿಡಿತ ಇಲ್ಲವಾಗಿದ್ದು ಈ ಬೆಳವಣಿಗೆಗಳಿಗೆ ಅಡಿಪಾಯವಾಗಿತ್ತು.

ಈ ಕೈಗಾರಿಕೆಗಳ ಉಪಕರಣಗಳೂ ಕೂಡಾ ಸಾವಿರಾರು ವರ್ಷಗಳಿಂದ ಕುಶಲಕರ್ಮಿಗಳ ವೈಯುಕ್ತಿಕ ಉಪಕರಣಗಳಾಗಿದ್ದು ನಿಧಾನವಾಗಿ ಉತ್ತಮಗೊಳ್ಳುತ್ತಾ ಹೋದುವಲ್ಲ. ಇಂತಹ ಕುಶಲಕರ್ಮಿಗಳು 17ನೇ ಶತಮಾನದಿಂದಲೇ ತಂತ್ರಜ್ಞರು ಆಧುನಿಕ ನೂಲು, ನೇಯ್ಗೆ ಯಂತ್ರಗಳನ್ನು, ಉಗಿ ಯಂತ್ರಗಳನ್ನು ರೂಪಿಸಿದರು. ಈ ಶತಮಾನಗಳ ಕಾಲದಲ್ಲಿ ವಿಜ್ಞಾನದ ಸಂಶೋಧನೆಗಳ ಪಸರಿಸುವಿಕೆ ಒಂದು ಕಡೆ ಕಬ್ಬಿಣ, ಉಕ್ಕು ತಯಾರಿಕೆ, ಕಲ್ಲಿದ್ದಲುಗಳ ಉಪಯೋಗ, ಆಧುನಿಕ ಯಂತ್ರಗಳ ದೊಡ್ಡ ಪ್ರಮಾಣದ ತಯಾರಿಕೆ, ವಿದ್ಯುತ್ ತಯಾರಿಕೆಯನ್ನು ಬೆಳೆಸಿ ವಿಜ್ಞಾನದ ಅರಿವಿನ ಪಸರಿಸುವಿಕೆಯ ಫಲವಾಗಿ ರೂಪಿಸಿದವಲ್ಲ. ಇವೆಲ್ಲವೂ ಬಂಡವಾಳಗಾರರ ಹಾಗೂ ಕಾರ್ಮಿಕರ ಕೆಲ ವಿಭಾಗಗಳ ಮೇಲೆ ಪರಿಣಾಮ ಬೀರಿದವು. ಸಾವಿರಾರು ವರ್ಷಗಳ ಕಾಲದ ಮೂಢನಂಬಿಕೆ, ಕಂದಾಚಾರಗಳು ಮರೆಯಾಗತೊಡಗಿದವು. ಪ್ರಜಾಸತ್ತಾತ್ಮಕ ವಿಚಾರಗಳು ಕಾರ್ಮಿಕರಲ್ಲೂ ಮೂಡಿದವು. ಭಾರತದಲ್ಲಿ ಈ ಗಿರಣಿಗಳು ಸ್ಥಾಪಿನೆಗೊಳ್ಳುವ ಎರಡು ದಶಕಗಳ ಮೊದಲೇ

ಪುಟ 4 ಕ್ಕೆ



# ಮಳೆ ಹಾನಿ: ಸಮಗ್ರ ಯೋಜನೆ, ಜಾರಿಯ ಬದ್ಧತೆ ಅಗತ್ಯ

ಸಂಪಾದಕೀಯ

ವಾಡಿಕೆಯ ಹಿಂಗಾರು ಮಳೆ ಹಾಗೂ ವಾಯುಭಾರ ಕುಸಿತ ಇವುಗಳಿಂದ ರಾಜ್ಯದಲ್ಲಿ ಇತ್ತೀಚೆಗೆ ಸುರಿದಿರುವ ನಿರಂತರ ಮಳೆಯಿಂದ ರಾಜ್ಯದ ಉದ್ದಗಲ ವ್ಯಾಪಕವಾಗಿ ಕೃಷಿ ಬೆಳೆ, ಮನೆ ಇತ್ಯಾದಿಗಳಿಗೆ ಸಾಕಷ್ಟು ಹಾನಿ ಸಂಭವಿಸಿ ರಾಜ್ಯದ ಜನತೆ ಗಂಭೀರ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ರಾಜ್ಯದಲ್ಲಿ ಈ ವರ್ಷ ಅತಿವೃಷ್ಟಿಯಿಂದ 25 ಜನರ ಸಾವು ಸಂಭವಿಸಿದ್ದು, ಒಟ್ಟಾರೆ 1,05,937 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಆಗಿದೆ ಎಂಬುದನ್ನು ಸರಕಾರದ ಅಂಕಿ–ಸಂಖ್ಯೆಗಳು ಹೇಳುತ್ತಿವೆ.

ಹಾನಿಗೀಡಾಗಿರುವುದರಲ್ಲಿ ಒಟ್ಟು 74,993 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿ ಆಗಿದೆಯೆಂದು, ಒಟ್ಟಾರೆ 30,941 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆ ಹಾನಿ ಆಗಿದೆಯೆಂದೂ ಅಂದಾಜಿಸಲಾಗಿದೆ. ಮಳೆಯಿಂದಾಗಿ 84 ಮನೆಗಳು ಸಂಪೂರ್ಣ ಹಾನಿಗೀಡಾಗಿದ್ದು, 2,077ಮನೆಗಳು ಭಾಗಶಃ ಹಾನಿಗೀಡಾಗಿವೆ ಎಂದೂ ಇದೇ ಅಂಕಿ ಸಂಖ್ಯೆಗಳು ಹೇಳುತ್ತವೆ. ಇತ್ತೀಚಿನ ಮಳೆಯಿಂದ ಆಗಿರುವ ಹಾನಿಯ ಬಗೆಗೆ ಇನ್ನೂ ಸಮೀಕ್ಷೆ ಪ್ರಗತಿಯಲ್ಲಿದೆ.

ಮನೆಯು ಪೂರ್ತಿ ಕುಸಿದು ಹಾಳಾಗಿದ್ದಲ್ಲಿ 1.20 ಲಕ್ಷ ರೂ. ಪರಿಹಾರ ನೀಡಲಾಗುವುದೆಂದು ಹಾಗೂ ಮನೆ ಕಟ್ಟಿಸಿ ಕೊಡಲು ಆದೇಶಿಸಲಾಗಿದೆ ಎಂದೂ, ಭಾಗಶಃ ಹಾನಿಗೀಡಾದ ಮನೆಗಳಿಗೆ ಮುಂಗಾರು ಹಂಗಾಮಿನಲ್ಲಿ ಸೂಚಿಸಿರುವಂತೆ ರೂ.50 ಸಾವಿರದವರೆಗೆ ಪರಿಹಾರ ಒದಗಿಸಲು ಆದೇಶಿಸಲಾಗಿದೆ ಎಂದೂ, ಪ್ರಾಣ ಹಾನಿ ಪ್ರಕರಣಗಳಲ್ಲಿ 48 ಗಂಟೆಗಳ ಒಳಗಾಗಿ ಪರಿಹಾರವನ್ನು ಒದಗಿಸಬೇಕೆಂದು ಆದೇಶಿಸಿರುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಮಳೆ ಹಾನಿ ಕುರಿತು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅಧಿಕಾರಿಗಳು ಮತ್ತು ಸಂಪುಟ ಸಹೋದ್ಯೋಗಿಗಳೊಂದಿಗಿನ ಪರಿಶೀಲನಾ ಸಭೆಯನ್ನು ನಡೆಸಿರುವುದು, ಬೆಳೆ ಹಾನಿ ಕುರಿತು ಸ್ಥಳ ಪರಿಶೀಲನೆ ನಡೆಸಿದ ಆಧಾರದಲ್ಲಿ ಪ್ರಾಥಮಿಕ ವರದಿಯನ್ನು ಪಡೆದಿರುವುದಾಗಿಯೂ ಮಾಧ್ಯಮಗಳಲ್ಲಿ ವರದಿಯಾಗಿದೆ. ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅನುದಾನ ಲಭ್ಯವಿದ್ದು, ಅನುದಾನ ಕೊರತೆ ಇರುವುದಿಲ್ಲ ಎಂದೂ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ರೂ.55,1.25 ಕೋಟಿ ಹಾಗೂ ತಹಶೀಲ್ದಾರ್ ಅವರ ಖಾತೆಯಲ್ಲಿ ರೂ.115.71 ಕೋಟಿ ಸೇರಿದಂತೆ ಒಟ್ಟು ರೂ.66,6.96 ಕೋಟಿ ಹಣ ಲಭ್ಯವಿದೆ ಎಂದೂ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಮಳೆ, ಪ್ರವಾಹಗಳಿಂದ ಉಂಟಾಗಿರುವ ಒಟ್ಟು ಹಾನಿಯ ಬಗೆಗೆ ತುರ್ತು ಗಮನ ನೀಡಿ ಸಮಗ್ರವಾದ ಮತ್ತು ಸಮರ್ಥವಾದ ರೀತಿಯಲ್ಲಿ ಪರಿಹಾರ ಕಾರ್ಯವನ್ನು ಕೈಗೊಳ್ಳಬೇಕಾದ ಜವಾಬ್ದಾರಿ ಸರಕಾರ ಮತ್ತು ಆಡಳಿತ ಯಂತ್ರದ ಮೇಲಿದೆ. ನಡೆಯುತ್ತಿರುವ ಸಮೀಕ್ಷೆಯನ್ನು ಸರಿಯಾಗಿ ಮತ್ತು ಶೀಘ್ರವಾಗಿ ಮುಗಿಸಿ ಸಂತ್ರಸ್ತರಿಗೆ ಪರಿಹಾರ ಮತ್ತು ಸಾಂತ್ವನ ನೀಡಬೇಕಾದದ್ದು ಒಂದು ತುರ್ತು ಅವಶ್ಯಕತೆ. ಆದರೆ ಕೇಂದ್ರದ ಒಕ್ಕೂಟ ಸರ್ಕಾರ, ರಾಜ್ಯ ಸರ್ಕಾರಗಳು ವಿಳಂಬ ನೀತಿ ಅನುಸರಿಸುತ್ತಾ ವಂಚಿಸುವುದು ಖಂಡನೀಯ.

ಮಳೆ, ಪ್ರವಾಹ, ಬರ ಮುಂತಾದ ಯಾವುದೇ ಸಮಸ್ಯೆಗಳಿರಲಿ, ಸಮೀಕ್ಷೆಯ ಮಾಹಿತಿಗಾಗಿಯಾದರೂ ಆಡಳಿತ ಯಂತ್ರವು ಎಲ್ಲ ಪ್ರದೇಶಗಳನ್ನು, ಎಲ್ಲ ಸಂತ್ರಸ್ತರನ್ನು ತಲುಪುವುದಿಲ್ಲ, ಇನ್ನು ಎಲ್ಲ ಸಂತ್ರಸ್ತರಿಗೂ ಪರಿಹಾರ ದೊರೆಯುವುದು ಬಹಳ ದೂರದ ಮಾತು ಎಂಬುದು ನಮ್ಮ ಮುಂದಿರುವ ವಾಸ್ತವ. ಇನ್ನು ಈ ವಿಷಯಗಳಲ್ಲಿ ಸರಕಾರವು ನೀಡುವ ಪರಿಹಾರವು ಬಹಳಷ್ಟು ಸಂದರ್ಭಗಳಲ್ಲಿ ಸಾಂಕೇತಿಕ ಸ್ವರೂಪದಲ್ಲಿರುತ್ತದೆ ಹೊರತು ನೊಂದವರಿಗೆ ಆಗಿರುವ ನಷ್ಟವನ್ನು ತುಂಬುವಷ್ಟಿರುವುದಿಲ್ಲ. ಈ ಬಗೆಗೂ ಸರಕಾರ ಗಂಭೀರವಾದ ಗಮನ ನೀಡಿ ನಿಜಕ್ಕೂ ಪರಿಹಾರದ ನೆರವು ನೀಡುವುದು ಅವಶ್ಯಕ.

ಒಂದಷ್ಟು ಮಳೆ ಸುರಿದ ಕೂಡಲೇ ಬೆಂಗಳೂರಿನಂತಹ ಮಹಾನಗರದ ಸಂಚಾರ, ಜನಜೀವನ ಅಸ್ತವ್ಯಸ್ತವಾಗುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಇತ್ತೀಚಿನ ಮಳೆಯಲ್ಲೂ ವಸತಿ ಪ್ರದೇಶಗಳು, ವಸತಿ ಸಂಕೀರ್ಣಗಳ ಸುತ್ತ, ರಸ್ತೆಗಳಲ್ಲಿ ಮಳೆ ನೀರು ನಿಂತು ನಾಗರೀಕರು ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದಕ್ಕೆ ಬೆಂಗಳೂರು ಒಂದು ದುರಂತ ಸಾಕ್ಷಿಯಾಯಿತು. ಈ ಸಮಸ್ಯೆಗೆ ವೈಜ್ಞಾನಿಕವಾದ ಮತ್ತು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಭಾರತೀಯ ವಿಜ್ಞಾನ ಸಂಸ್ಥೆಯಂತಹ ತಜ್ಞ ಸಂಸ್ಥೆಗಳ ವಿಜ್ಞಾನಿಗಳು ಈ ವಿಷಯದಲ್ಲಿ ಹಲವು ವೈಜ್ಞಾನಿಕ ಪರಿಹಾರಗಳನ್ನೂ ಸೂಚಿಸುತ್ತಲೇ ಬರುತ್ತಿದ್ದಾರೆ. ಆದರೆ ಸರಕಾರಗಳು ಅತ್ತ ಗಮನವನ್ನೇ ನೀಡುತ್ತಿಲ್ಲ.

ಸರಾಗವಾಗಿ ನೀರು ಹರಿದು ಹೋಗುವಂತೆ ವೈಜ್ಞಾನಿಕ ವಿಧಾನದಲ್ಲಿ ರಸ್ತೆ ಮತ್ತು ಒಳಚರಂಡಿಗಳನ್ನು ನಿರ್ಮಿಸುವುದು, ಸಾಧ್ಯವಾದ ಎಲ್ಲ ಕಟ್ಟಡಗಳು ಮತ್ತು ಮನೆಗಳಲ್ಲಿ ಮಳೆ ನೀರು ಸಂಗ್ರಹವನ್ನು ಮಾಡಿ, ಆ ನೀರನ್ನು ಬಳಕೆ ಮಾಡಿಕೊಳ್ಳಲು ವ್ಯವಸ್ಥೆಯನ್ನು ರೂಪಿಸುವುದು, ಭೂ ಕಬಳಿಕೆದಾರರಿಂದ ಒತ್ತುವರಿಯಾಗಿರುವ ಕೆರೆ, ರಾಜ ಕಾಲುವೆ ಮುಂತಾದ ನೀರು ಹರಿವಿನ ಮತ್ತು ನೀರು ಸಂಗ್ರಹದ ಜಾಗಗಳನ್ನು ಮರು ವಶಕ್ಕೆ ಪಡೆದು ನೀರು ಹರಿಯಲು–ನಿಲ್ಲಲು ವ್ಯವಸ್ಥೆ ಮಾಡುವುದು, ಕೆರೆಗಳ ಹೂಳು ತೆಗೆದು ನೀರು ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವುದು, ಇಂತಹ ಪ್ರದೇಶಗಳಲ್ಲಿ ಕಟ್ಟಲಾಗಿರುವ ಅಕ್ರಮ ಕಟ್ಟಡಗಳನ್ನು ತೆರವು ಮಾಡುವುದು ಮುಂತಾದ ಪರಿಹಾರಗಳು ಇವುಗಳಲ್ಲಿ ಸೇರಿವೆ.

ಬೆಂಗಳೂರಿನಂತಹ ನಗರಗಳಲ್ಲಿ ಮನೆ–ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ಮಾಡಿಕೊಳ್ಳಲು ಅಗತ್ಯವಿರುವವರಿಗೆ ಸರಕಾರ ಸಹಾಯಧನ ನೀಡಿ ಪ್ರೋತ್ಸಾಹಿಸುವುದು ಅಗತ್ಯ. ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾದರೆ ಕಾವೇರಿಯ ನೀರನ್ನು ಮತ್ತಷ್ಟು ಹಂತಗಳಲ್ಲಿ ಬೆಂಗಳೂರಿಗೆ ತರುವುದು, ನೇತ್ರಾವತಿ, ಶರಾವತಿಯಂತಹ ಬಹುದೂರದ ನದಿಗಳನ್ನು ಬೆಂಗಳೂರಿನತ್ತ ತಿರುಗಿಸುವಂತಹ ಯೋಜನೆಗಳ ಪ್ರಯಾಸಕ್ಕೆ ಒಂದಿಷ್ಟು ಪರಿಹಾರ ಸಿಗಬಹುದು ಎಂದು ತಜ್ಞರು ಸಲಹೆ ನೀಡಿದ್ದಾರೆ. ಆದರೆ ಇಂತಹ ಯೋಜನೆಗಳನ್ನು ಜಾರಿಗೆ ತರಲು ಸರಕಾರ ಬಲವಾದ ಇಚ್ಛಾಶಕ್ತಿ ತೋರಿಬೇಕಾಗುತ್ತದೆ.

ಮೊನ್ನೆ ಬೆಂಗಳೂರಿನ ಬಾಬುಸಾಪಾಳ್ಯದಲ್ಲಿ ಕೊಟ್ಟ ಅನುಮತಿಯನ್ನು ಮೀರಿ ಆರು ಅಂತಸ್ತುಗಳ ಕಳಪೆ ಕಟ್ಟಡವನ್ನು ಕಟ್ಟಲು ಹೋಗಿ ಕಟ್ಟಡ ಕುಸಿದು ಹಲವಾರು ಕಟ್ಟಡ ಕಾರ್ಮಿಕರು ಸಾವಿಗೀಡಾದ ದುರಂತ ಸಂಭವಿಸಿದೆ. ತನ್ನ ಅಸೀಮ ಭ್ರಷ್ಟಚಾರ–ಜನವಿರೋಧಿತನದಿಂದಾಗಿ, ತಡೆಯಲು ಸಾಧ್ಯವಿರುವ ದುರಂತಗಳನ್ನೇ ತಡೆಯಲು ಸಾಧ್ಯವಾಗದ ಬಿ.ಬಿ.ಎಂ.ಪಿ. ಮತ್ತು ಸರಕಾರಗಳು ಪ್ರವಾಹ, ಮಳೆ ಹಾನಿಯಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸುತ್ತವೆಯೇ ಎಂಬುದು ಒಂದು ಗಂಭೀರ ಪ್ರಶ್ನೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲರೊಂದಿಗೆ ಸಮಾಲೋಚಿಸಿ ಸಮಗ್ರ ಯೋಜನೆ ರೂಪಿಸಿ ಅದರ ಜಾರಿಗೆ ತೊಡಗಬೇಕು. ಇದಕ್ಕಾಗಿ ಪ್ರಬಲ ಒತ್ತಡವನ್ನು ಹಾಕಲು ಜನ ಎಚ್ಚೆತ್ತು ಕೊಳ್ಳಬೇಕಿದೆ.

ಈ ವಾರ

ಎಸ್.ವೈ.ಗುರುಶಾಂತ್

ಮಂಡ್ಯ ನಗರದಲ್ಲಿ ಡಿಸೆಂಬರ್ 20 ರಿಂದ 23 ರವರೆಗೆ 87 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವ ಸಿದ್ಧತೆಗಳು ನಡೆದಿವೆ. ಸಾಹಿತ್ಯ ಸಮ್ಮೇಳನದ ಚರ್ಚೆಯ ವಿಷಯ, ಆದ್ಯತೆಗಳು, ಗೋಷ್ಠಿಗಳ ಸ್ವರೂಪ, ಭವಿಷ್ಯದಲ್ಲಿ ಸಾಹಿತ್ಯ ಲೋಕಸಾಗುವ ದಿಕ್ಕು ಹಾಗೂ ಸರಕಾರಗಳ ಭಾಷಾ ಮತ್ತು ಸಾಂಸ್ಕೃತಿಕ ನೀತಿಗಳು ಹಾಗೂ ಸಾಮಾಜಿಕ ಆರ್ಥಿಕ ನೀತಿಗಳ ಮೇಲೆ ಪ್ರಭಾವ ಬೀರುವುದೆಂದು ಭಾವಿಸಲಾಗಿದೆ ಮತ್ತು ಸಕಾರಾತ್ಮಕ ಪ್ರಭಾವ ಬೀರಬೇಕೆಂದು ನಿರೀಕ್ಷಿಸಲಾಗುತ್ತದೆ. ಸಮ್ಮೇಳನದ ಚರ್ಚೆಯ ದಿಕ್ಕು–ಸಾರ–ಸ್ವರೂಪವನ್ನು ನಿರ್ಧರಿಸುವಲ್ಲಿ ಸಹಜವಾಗಿ ಸಮ್ಮೇಳನದ ಅಧ್ಯಕ್ಷತೆ ವಹಿಸುವವರ ಪಾತ್ರ ನಿರ್ಣಾಯಕವಾಗುತ್ತದೆ. ಈ ಅಧ್ಯಕ್ಷತೆಯ ಅವಕಾಶ ಎನ್ನುವುದು ಯಾವುದೇ ಸಾಹಿತಿಯು ಸಾಹಿತ್ಯಕ್ಕೆ ಹಾಗೂ ಸಮಾಜಕ್ಕೆ ಕೊಟ್ಟ ಕೊಡುಗೆಯನ್ನು ಗುರುತಿಸುವ ಮತ್ತು ಗೌರವಿಸುವ ಒಂದು ವಿಧಾನವೂ ಎಂದು ಪರಿಗಣಿಸಲಾಗಿದೆ. ಸಹಜವಾಗಿಯೇ ಕನ್ನಡ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ, ಹಿರಿಯ ಸಾಹಿತಿಗಳನ್ನು ಈ ಸ್ಥಾನಕ್ಕೆ ಆಯ್ಕೆ ಮಾಡುವುದು ನಡೆದುಕೊಂಡು ಬಂದಿರುವ ರೂಢಿ, ಸಂಪ್ರದಾಯ. ಇದು ಸರಿಯಾದ ಕ್ರಮವೂ ಹೌದು.

ಪ್ರಸಕ್ತ ಸಮ್ಮೇಳನದ ಅಧ್ಯಕ್ಷರು ಯಾರಾಗಬೇಕು? ಎಂಬ ಬಗೆಗೆ ಕ.ಸಾ.ಪ. ಕಾರ್ಯಕಾರಿ ಸಮಿತಿಯ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಲವು ಹೆಸರುಗಳನ್ನು ತೇಲಿ ಬಿಟ್ಟಿದ್ದಾರೆ. ಅಘಾತಕರ ವಿಷಯ ಎಂದರೆ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡದ ವ್ಯಕ್ತಿಗಳು ಅದರಲ್ಲೂ ಧಾರ್ಮಿಕ ಸೇವೆಯ ವೇಷದಲ್ಲಿ ಬಡ್ಡಿ ವ್ಯವಹಾರ, ರಿಯಲ್ ಎಸ್ಟೇಟ್ ನಂತಹ ಅವ್ಯವಹಾರಗಳನ್ನು ನಡೆಸುತ್ತಿರುವ ಆರೋಪ ಎದುರಿಸುತ್ತಿರುವ ಮಠಾಧೀಶರು, ರಾಜಕಾರಣಿಗಳು, ಅಷ್ಟೇನು ಗಂಭೀರ ಸಾಹಿತ್ಯವನ್ನು ನೀಡದೇ ತೆಳುವಾದ ಜನಪ್ರಿಯ ಸಾಹಿತ್ಯವನ್ನು ರಚಿಸಿರುವ ಉದ್ಯಮ–ವಾಣಿಜ್ಯದ ಹಿನ್ನೆಲೆಯವರು ಈ ಪಟ್ಟಿಯಲ್ಲಿ ಜಾಗ ಪಡೆದುಕೊಂಡಿದ್ದಾರೆ. ಕೆಲವು ಕ್ರೀಡಾಪಟುಗಳು, ವಿಜ್ಞಾನಿಗಳ ಹೆಸರುಗಳೂ ಈ ಪಟ್ಟಿಯಲ್ಲಿದ್ದರೂ ಅದು ಕೇವಲ ಕಣ್ಣೊರೆಸುವ ತಂತ್ರದ ಭಾಗ ಎಂಬಂತೆ ಕಾಣುತ್ತಿದೆ.

ಕನ್ನಡ ಸಾಹಿತ್ಯ ಸಮ್ಮೇಳನ ಎಂಬುದು ಕನ್ನಡ ಭಾಷೆ, ಸಾಹಿತ್ಯ–ಸಂಸ್ಕೃತಿ–ಕರ್ನಾಟಕದ ಜನರ ಬದುಕಿನ ಉಳಿವು ಮತ್ತು ಬೆಳವಣಿಗೆ ಹಾಗೂ ಅದಕ್ಕಿರುವ ಸವಾಲುಗಳ ಬಗೆಗೆ ಚರ್ಚಿಸುವಂತಹದ್ದು. ಇಂತಹ ಸಮ್ಮೇಳನದಲ್ಲಿ ಸಾಹಿತ್ಯಕ್ಕೆ ಕೊಡುಗೆ ನೀಡದ, ವಾಣಿಜ್ಯೋದ್ಯಮಿಗಳು, ಮಠಾಧೀಶರು, ರಾಜಕಾರಣಿಗಳು ಅಧ್ಯಕ್ಷತೆ ವಹಿಸುವುದರ ಔಚಿತ್ಯವೇನು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

# ಕನ್ನಡ ಸಾಹಿತ್ಯ ಸಮ್ಮೇಳನ: ದಿಕ್ಕು ತಪ್ಪಿಸುವ ಪ್ರಯತ್ನಗಳು



ಸದ್ಯ ಬಲಪಂಥೀಯ ರಾಜಕೀಯ ಶಕ್ತಿಗಳ ಆಡಳಿತದಲ್ಲಿ ಭಾರತದ ಒಕ್ಕೂಟ ಸ್ವರೂಪದ ಮೇಲೆ ಗಂಭೀರ ದಾಳಿ ನಡೆಯುತ್ತಿದೆ. ರಾಜ್ಯಗಳ ಅಧಿಕಾರ–ಹಕ್ಕುಗಳು ಮತ್ತು ಸಂಪನ್ಮೂಲಗಳನ್ನು ಕಸಿದುಕೊಳ್ಳಲಾಗುತ್ತಿದೆ. ಆರ್ಥಿಕವಾಗಿ–ಸಾಮಾಜಿಕವಾಗಿ ಕರ್ನಾಟಕವು ಗಂಭೀರ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ರಾಜ್ಯದಲ್ಲೂ ದೇಶದಲ್ಲೂ ಸಹಸ್ರಾರು ವರ್ಷಗಳ ಸಹಬಾಳ್ವೆ–ಸಾಮರಸ್ಯದ ಜನಜೀವನಕ್ಕೆ ಕೊಳ್ಳಿ ಇಟ್ಟು ಕೋಮುವಾದಿ ಶಕ್ತಿಗಳು ಗಹಗಹಿಸುತ್ತಿವೆ. ರೈತ–ಕಾರ್ಮಿಕರು–ದುಡಿಯುವ ಜನರ ಬದುಕಿನ ಪ್ರಶ್ನೆಗಳನ್ನು ಮೂಲೆಗೆ ತಳ್ಳಲಾಗುತ್ತಿದೆ. ದಲಿತರು, ಆದಿವಾಸಿಗಳು, ಮಹಿಳೆಯರು ಮುಂತಾದ ಚಾರಿತ್ರಿಕವಾಗಿ ಅವಕಾಶವಂಚಿತ ಸಮುದಾಯಗಳ ಮೇಲೆ ಹೊಸ ಹೊಸ ಸ್ವರೂಪದ ದಾಳಿಗಳು ನಡೆಯುತ್ತಿವೆ. ಜಾತಿವಾದ ವಿಕೃತ ರೂಪ ಪಡೆಯುತ್ತಿದೆ. ಪರಿಸರದ ಲೂಟಿ ದೈತ್ಯಾಕಾರ ಪಡೆದಿದೆ. ಸಂಸ್ಕೃತ, ಇಂಗ್ಲೀಷ್, ಹಿಂದಿ ಹೇರಿಕೆಗಳ ನಡುವೆ ಕನ್ನಡ ಭಾಷೆಯ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ಉಳಿಸಿಕೊಳ್ಳುವುದು ಹೇಗೆ?? ಕರ್ನಾಟಕವನ್ನು ಜನಪರವಾದ ಸಮಗ್ರ ಪ್ರಗತಿ ಹಾದಿಯಲ್ಲಿ ಮುನ್ನಡೆಸುವುದು ಹೇಗೆ? ಈ ನಿಟ್ಟಿನಲ್ಲಿ ಸಾಹಿತ್ಯ ಲೋಕದ ಹೊಣೆಗಾರಿಕೆ ಏನು? ಎಂಬ ಮುನ್ನಡೆಯ ದಾರಿಗಳನ್ನು ಹುಡುಕುವ ಗಂಭೀರ ಸವಾಲು ನಮ್ಮ ಮುಂದೆ ಎದುರಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನಪರ ಸಾಹಿತಿಯೊಬ್ಬರು ಅಧ್ಯಕ್ಷರ ಸ್ಥಾನದಲ್ಲಿದ್ದಲ್ಲಿ ಸಹಜವಾಗಿ ಸಾಹಿತ್ಯ ಸಮ್ಮೇಳನದಲ್ಲಿ ಇಂತಹ ಸವಾಲು–ಬಿಕ್ಕಟ್ಟುಗಳ ಕುರಿತ ಚರ್ಚೆಯ ಕೇಂದ್ರಸ್ಥಾನಕ್ಕೆ ಬರುವ ಸಾಧ್ಯತೆಗಳಿವೆ. ಇಂತಹ ಸಾಧ್ಯತೆಯನ್ನು ತಪ್ಪಿಸಿ ಸಮ್ಮೇಳನದ ಚರ್ಚೆಯ ದಿಕ್ಕು ತಪ್ಪಿಸಲು, ಕೋಮುವಾದಿ–ಜಾತಿವಾದಿ–ಕಾರ್ಪೋರೇಟ್ ಹಿತಾಸಕ್ತಿಗಳಿಗೆ ಹಾನಿ ಮಾಡದಂತಹ ನೀತಿಗಳನ್ನು ಪ್ರತಿಪಾದಿಸುವ ಬಲಪಂಥೀಯ ವ್ಯಕ್ತಿಗಳು ಅಧ್ಯಕ್ಷತೆ ವಹಿಸುವುದು ಸ್ಥಾಪಿತ ಹಿತಾಸ್ತಕಿಗಳಿಗೆ ಬೇಕಾಗಿದೆ. ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಷಿಯವರ ಬಲಪಂಥೀಯ ಒಲವು ನಾಡಿನ ಜನರಿಗೆ ತಿಳಿಯದ್ದೇನಲ್ಲ. ಹೀಗೆ

ಪುಟ 12 ಕ್ಕೆ






# ಜನ ಕೇಂದ್ರಿತ ಅಭಿವೃದ್ಧಿ ಇಂದಿನ ತುರ್ತು: ಡಾ. ಚಂದ್ರ ಪೂಜಾರಿ

ಸರ್ಕಾರಗಳು ರೂಪಿಸುತ್ತಿರುವ ಅಭಿವೃದ್ಧಿ ಯೋಜನೆ ಮತ್ತು ಬಂಡವಾಳ ವಿನಿಯೋಜನೆಯಲ್ಲಿ ಜನರು ಇಲ್ಲದಂತಾಗಿದೆ. ಇದರಿಂದ ಬಹತೇಕ ಜನರು ಅಭಿವೃದ್ಧಿಯ ಫಲಾನುಭವಿಗಳಾಗದೆ ಹೊರಗುಳಿಯುತ್ತಿದ್ದಾರೆ ಎಂದು ಕರ್ನಾಟಕ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕ ಡಾ. ಎಂ.ಚಂದ್ರಪೂಜಾರಿ ಪ್ರತಿಪಾದಿಸಿದರು.

ಹಾಸನ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಕರ್ನಾಟಕ ಪ್ರಾಂತ ರೈತ ಸಂಘ, ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ದಲಿತ ಹಕ್ಕಗಳ ಸಮಿತಿ ಮತ್ತು ಶ್ರಮ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಆಯೋಜಿಸಿದ್ದ ಹಾಸನ ಜಿಲ್ಲೆಯ ಸಮಗ್ರ ಮತ್ತು ಸಮರ್ಪಕ ಅಭಿವೃದ್ಧಿ ಕುರಿತ ವಿಚಾರ ಸಂಕಿರಣದಲ್ಲಿ ದಿಕ್ಸೂಚಿ ಭಾಷಣ ಮಾಡಿದ್ದರು.

ಭಾರತದಂತಹ ದೊಡ್ಡ ಜನಸಂಖ್ಯೆ, ವೈವಿಧ್ಯತೆ, ಸಾಂಸ್ಕೃತಿಕ ಭಿನ್ನತೆ ಇರುವ ದೇಶದಲ್ಲಿ ಈಗ ಒಂದು ಭಾಷೆ, ಒಂದು ಚುನಾವಣೆ ಮತ್ತು ಒಂದು ತೆರಿಗೆ ಮತ್ತು ಒಂದು ಅಭಿವೃದ್ಧಿ ಮಾದರಿ ಜಾರಿಯಲ್ಲಿದೆ. ಇದು ಇದು ಅಪಾಯಕಾರಿ ಮಾದರಿಯಾಗಿದೆ. ಏಕೆಂದರೆ ಹಾಸನವನ್ನೇ ಉದಾಹರಣೆಯನ್ನೇ ತೆಗೆದುಕೊಂಡರೆ ಮಲೆನಾಡು, ಅರೆಮಲೆನಾಡು ಮತ್ತು ಬಯಲು ಸೀಮೆ ಪ್ರದೇಶವಿದೆ. ಎಲ್ಲಾ ಭಾಗಕ್ಕೂ ಒಂದೇ ಮಾದರಿ ಅಭಿವೃದ್ಧಿ ಜಾರಿ ಮಾಡಿದರೆ ಉಂಟಾಗುವ ಅಸಮಾನತೆಯನ್ನು ಯೋಚಿಸಬೇಕಾಗುತ್ತಿದೆ. ಇದೇ ರಾಜ್ಯ ಮತ್ತು ದೇಶಕ್ಕೂ ಅನ್ವಯವಾಗುತ್ತದೆ. ಇಂತಹ ಏಕೀಕೃತ ಅಭಿವೃದ್ಧಿ ಮಾದರಿಗಳು ಸಾರ್ವಜನಿಕ ಸಂಪನ್ಮೂಲಗಳನ್ನು ದರೋಡೆ ಮಾಡುವ ಪ್ರವೃತ್ತಿಯನ್ನು ಹೆಚ್ಚಿಸುವ ಅಥವಾ ಸಂಪತ್ತನ್ನು ಒಂದು ಕಡೆಯಲ್ಲಿ ಕ್ರೋಢೀಕರಿಸುವ ಉದ್ದೇಶವನ್ನು ಹೊಂದಿರುತ್ತದೆಯೇ ಹೊರತು ಜನರನ್ನು ಒಳಗೊಳ್ಳುವುದಿಲ್ಲ. ಇದು ಗಣತಂತ್ರ ವ್ಯವಸ್ಥೆಯಲ್ಲಿ ಬಿಕ್ಕಟ್ಟು ಉಂಟಾಗುತ್ತದೆ. ಇದು ಈಗಾಗಲೇ ಭಾರತದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾಗಿದೆ ಎಂದು ಚಂದ್ರಪೂಜಾರಿ ಆತಂಕ ವ್ಯಕ್ತಪಡಿಸಿದರು.

ಭಾರತದಲ್ಲಿ ತಲಾ ಆದಾಯ ಹೆಚ್ಚುತ್ತಿರುವಂತೆಯೇ 80 ಕೋಟಿ ಜನರಿಗೆ ತಲಾ 5 ಕೆಜಿಯಂತೆ ಉಚಿತ ಪಡಿತರವನ್ನು ನೀಡಲಾಗುತ್ತಿದೆ. ಇದು ಯೋಜನೆಗಳನ್ನು ರೂಪಿಸುವಾಗ ಪೂರ್ವತಯಾರಿ ಮಾಡಿಕೊಳ್ಳದಿರುವುದು ಇಂತಹ ವೈರುಧ್ಯಗಳ ಸೃಷ್ಟಿಗೆ ಕಾರಣವಾಗುತ್ತದೆ. ತಲಾ ಆದಾಯ ಹೆಚ್ಚುತ್ತಿರುವ ಸಂದರ್ಭದಲ್ಲಿ ಉದ್ಯೋಗ ನಷ್ಟ, ಬಡತನ ಹೆಚ್ಚಳ, ಹಸಿವಿನ ಸೂಚ್ಯಂಕದಲ್ಲಿ ಏರುಗತಿ ಮುಂತಾದ ಅಂಶಗಳು ಅಭಿವೃದ್ಧಿಯ ವ್ಯಾಖ್ಯೆಯಲ್ಲಿನ ದೋಷಗಳನ್ನು ಎತ್ತಿ ತೋರಿಸುತ್ತಿದೆ. ಭಾರತದಲ್ಲಿ ಅಭಿವೃದ್ಧಿ ಪರಿಧಿಯೊಳಗೆ ಜನರು ಮುಕ್ತವಾಗಿ ಪಾಲ್ಗೊಳ್ಳಲಾಗುತ್ತಿಲ್ಲ. ಇದಕ್ಕೆ ಜಾತಿ ಮತ್ತು ಲಿಂಗ ತಾರತಮ್ಯವೂ ಒಂದು ಕಾರಣ. ಜಾತಿಯ ಕಾರಣಕ್ಕೆ ಒಂದು ಬೃಹತ್ ದುಡಿಯುವ ಸಮುದಾಯ ಅಭಿವೃದ್ಧಿಯ ವ್ಯಾಖ್ಯೆಯೊಳಗೆ ಪ್ರವೇಶದಿಂದ ವಂಚಿತವಾಗುತ್ತಿದೆ. ಹಾಗೆಯೇ ಮಹಿಳೆಯರೂ ಕೂಡ ಪುರುಷ ಪ್ರಧಾನ ಸಮಾಜದ ನಿಬಂಧನೆಗಳ ಕಾರಣಕ್ಕೆ ಅಭಿವೃದ್ಧಿಯ ಫಲಾನುಭವಿಗಳಾಗುತ್ತಿಲ್ಲ. ಇದರ ಜೊತೆಗೆ ಇನ್ನೂ ಒಂದು ಆತಂಕದ ವಿಷಯವೆಂದರೆ ಕೋಮುವಾದದ ಕಾರಣಕ್ಕೆ ಅಲ್ಪಸಂಖ್ಯಾತ ಸಮುದಾಯ ಕೂಡ ಸಾಮಾಜಿಕ ಅಭದ್ರತೆ ಎದುರಿಸುತ್ತಿದ್ದು, ಅಭಿವೃದ್ಧಿಯ ಪಾಲುದಾರರಾಗಲು ಕೋಮುವಾದ ಅಡ್ಡಿಯುಂಟು ಮಾಡುತ್ತಿದೆ. ಹೀಗಾಗಿ ಅಭಿವೃದ್ಧಿಯು ವಿವಿದ ಕಾರಣಗಳಿಂದಾಗಿ ಜನರಿಂದ ಹೊರತಾಗಿ ಜಾರಿಯಾಗುತ್ತಿದೆ. ಹೀಗಾಗಿ ಅಭಿವೃದ್ಧಿಯು ಜನರಿಗಾಗಿ ಜಾರಿಯಾಗದೆ ಕೇವಲ ಕೆಲವರಿಗೆ ಸಂಪತ್ತನ್ನು ಕ್ರೋಢೀಕರಿಸಲು ಸಾಧನವಾಗಿ ಬಳಕೆಯಾಗುತ್ತಿದೆ. ಇದರಿಂದ ಸಮಾಜದಲ್ಲಿ ಅಸಮಾನತೆ ಹೆಚ್ಚುತ್ತಿದೆ. ಇದು ಅಪರಾಧ ಹೆಚ್ಚಳಕ್ಕೂ ಕಾರಣವಾಗುತ್ತಿದೆ ಎಂದು ಪ್ರತಿಪಾದಿಸಿದರು.

ಸಂಸದ ಶ್ರೇಯಸ್ ಪಟೇಲ್, ನಗರಸಭೆ ಅಧ್ಯಕ್ಷ ಎಂ.ಚಂದ್ರೇಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು. ಹಾಸನ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅಸಮನತೆಯ ಸ್ವರೂಪ ಕುರಿತು ಹೊಳೆನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ತಿಪ್ಪೇಸ್ವಾಮಿ, ಹಾಸನ ಜಿಲ್ಲೆಯ ಕೃಷಿ ಸಮಾಜದಲ್ಲಿನ ಸ್ಥಿತ್ಯಂತರಗಳು, ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ ಕುರಿತು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಎಚ್.ಡಿ.ಪ್ರಶಾಂತ್, ಹಾಸನ ಜಿಲ್ಲೆಯ ಭೂಮಿ–ಕೈಗಾರಿಕೆ–ವಾಣಿಜ್ಯೋದ್ಯಮ ಹಾಗೂ ಉದ್ಯೋಗ ಸೃಷ್ಟಿಯ ಪ್ರಶ್ನೆಗಳು ಕುರಿತು ಬೆಂಗಳೂರಿನ ರಾಷ್ಟ್ರೀಯ ಕಾನೂನುಶಾಲೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಆರ್.ವಿ.ಚಂದ್ರಶೇಖರ್ ಮತ್ತು ಹಾಸನ ಜಿಲ್ಲೆಯ ಪರಿಸರಾತ್ಮಕ ಬಿಕ್ಕಟ್ಟುಗಳು ಮತ್ತು ಅಭಿವೃದ್ಧಿ ಕುರಿತು ಸಕಲೇಶಪುರದ ಪರಿಸರವಾದಿ ಪ್ರಸಾದ್ ರಕ್ಷಿದಿ ವಿಷಯ ಮಂಡಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು. ಕೆಪಿಆರ್ಎಸ್ ಜಿಲ್ಲಾಧ್ಯಕ್ಷ ಎಚ್. ಆರ್.ನವೀನ್‌ಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿದರು. ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಕಾರ್ಯಕ್ರಮ ನಿರ್ವಹಿಸಿದರು. ❑

## ಬ್ರಿಟನ್ ಮತ್ತು ಭಾರತದಲ್ಲಿ ಬಂಡವಾಳದ ಉಗಮ, ಕಾರ್ಮಿಕ ವರ್ಗದ ಉದಯ.......... ಪುಟ 2 ರಿಂದ

ಕಾರ್ಮಿಕರು ತಮಗೆ ಮತದಾನದ ಹಕ್ಕು, ಉತ್ತಮ ಬದುಕಿಗಾಗಿ ಚಾರ್ಟಿಸ್ಟ್ ಎಂಬ ಮಹಾ ಚಳುವಳಿ ಆರಂಭಿಸಿದ್ದರು.

ಆದರೆ ಭಾರತದಲ್ಲಿ ಈ ಎಲ್ಲ ಹಂತಗಳನ್ನೂ ಬದಿಗೆ ತಳ್ಳಿ ಕುಶಲಕರ್ಮಿಗಳ ಗಿಲ್ಡ್ ಅಥವಾ ಗೊತ್ತಳಿಗಳ (ನೇಕಾರ ಜೇಡರ ದಾಸಿಮಯ್ಯನ ಕಾಲದ ಪದ) ನಾಶವಾದ ನಂತರ ಹಠಾತ್ತನೆ ನೇರವಾಗಿ ಆಧುನಿಕ ಯಂತ್ರಗಳನ್ನು ಆಮದು ಮಾಡಿ, ಫ್ಯಾಕ್ಟರಿಗಳ ಹಂತದ ಹತ್ತಿ ಗಿರಣಿಗಳನ್ನು ಸ್ಥಾಪಿಸಲಾಯಿತು. ಸಣ್ಣ ಸಣ್ಣ ಉದ್ಯಮಗಳ ನಡುವಿನಿಂದ ಮಧ್ಯಮ, ದೊಡ್ಡ ಬಂಡವಾಳಶಾಹಿಗಳ ಬೆಳವಣಿಗೆಗೆ ಬದಲಾಗಿ ನೇರವಾಗಿ ದೊಡ್ಡ ಬಂಡವಾಳಶಾಹಿಗಳ ಬೆಳವಣಿಗೆಯಾಯಿತು. ಅದರ ಪರಿಣಾಮವಾಗಿ ಹಲವು ಭಾರತೀಯ ಮಾಲೀಕತ್ವದ ಗಿರಣಿಗಳಲ್ಲಿ ಕೂಡಾ ಬ್ರಿಟನ್ನಿನಿಂದ ಆಮದು ಮಾಡಿದ ತಂತ್ರಜ್ಞರಿಗೆ ಉತ್ಪಾದನೆಯ ಹೊಣೆ ನೀಡಲಾಗಿತ್ತು. ಇದು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಬ್ರಿಟಿಷ್ ಏಜೆನ್ಸಿಗಳಿಗೆ ಇಡೀ ಗಿರಣಿಯ ಉಸ್ತುವಾರಿ ನೀಡಲಾಗುತ್ತಿತ್ತು. ಇಂತಹ ಬ್ರಿಟಿಷ್ ಏಜೆನ್ಸಿಗಳ ಹೆಸರು ಕಂಡರೆ ಮಾತ್ರ ಭಾರತೀಯರು ಆ ಗಿರಣಿಗಳಲ್ಲಿ ಹಣ ಹೂಡುತ್ತಿದ್ದರು. ಈ ಬ್ರಿಟನ್ ಅಧಿಕಾರಿಗಳು, ಏಜೆನ್ಸಿಗಳಿಗೆ ಗಿರಣಿಗಳ ಬಹಳಷ್ಟು ಆದಾಯ ಸೋರಿ ಹೋಗುತ್ತಿತ್ತು.

ಇನ್ನು ಕಾರ್ಮಿಕರ ವಿಷಯದಲ್ಲಿ ಹೇಳುವುದಾದರೆ ಅವರು ನೇರವಾಗಿ ಹಳ್ಳಿಗಳಿಂದ ಬಂದವರು. ತಕ್ಷಣದ ಸಾಲ ತೀರಿಸುವುದಕ್ಕೆ ಒಂದಿಷ್ಟು ಹಣ ಸಂಪಾದಿಸಿ ಮತ್ತೆ ಹಳ್ಳಿಗೆ ಹೋಗಿ ಒತ್ತೆಯಿಟ್ಟ ಭೂಮಿ ವಾಪಸ್ ಪಡೆದು ಅಥವಾ ಭೂಮಿ ಕೊಂಡು ರೈತರಾಗಿ ಬದುಕುವ ಕನಸು ಹೊತ್ತವರು. ಇದನ್ನು ಕೆಜಿಎಫ್ ಚಿನ್ನದ ಗಣಿ, ಬೆಂಗಳೂರಿನ ಹತ್ತಿ ಗಿರಣಿಗಳು, ಕಾಫಿ, ಟೀ ಪ್ಲಾಂಟೇಷನ್‌ಗಳು ಮುಂತಾದ ಕರ್ನಾಟಕದ ಮೊದಲ ಉದ್ಯಮಗಳಲ್ಲೆಲ್ಲ ಕಾಣಬಹುದು. ಕೆಜಿಎಫ್, ಪ್ಲಾಂಟೇಷನ್‌ಗಳಲ್ಲಂತೂ ಕಾರ್ಮಿಕರು ಪದೇ ಪದೇ ಓಡಿ ಹೋಗುತ್ತಿದ್ದರು. ಅವರನ್ನು ಉಳಿಸಿಕೊಳ್ಳುವುದೇ ಒಂದು ಸಮಸ್ಯೆಯಾಗಿತ್ತು. ಆದ್ದರಿಂದ ಗಣಿ ಮತ್ತು ಪ್ಲಾಂಟೇಷನ್‌ನ ಐರೋಪ್ಯ ಮಾಲೀಕರುಗಳು ಮೈಸೂರು ರಾಜರ ಮೇಲೆ ಒತ್ತಾಯ ಮಾಡಿ ಒಂದು ಹೊಸ ಕಾಯಿದೆಯನ್ನೇ ಜಾರಿಗೆ ತರುವಂತೆ ಮಾಡಿದರು. ಕೆಜಿಎಫ್ ಅಥವಾ ಪ್ಲಾಂಟೇಷನ್‌ಗಳ ಕಾರ್ಮಿಕರು ಎಲ್ಲಿಯಾದರೂ ದಾರಿಯಲ್ಲಿ ಸಿಕ್ಕರೆ ಆಯಾ ಹಳ್ಳಿಗಳ ಪಟೇಲರು ಅವರನ್ನು ಹಿಡಿದುಕೊಂಡು ಬಂದು ಗಣಿ, ಪ್ಲಾಂಟೇಷನ್‌ಗಳ ಮಾಲೀಕರಿಗೆ ಒಪ್ಪಿಸಬೇಕೆಂಬುದು ಆ ಕಾನೂನು. ಅಷ್ಟೇ ಅಲ್ಲ ತಮ್ಮ ಕಾರ್ಮಿಕರನ್ನು ಗುರುತಿಸಲು ಕೆಜಿಎಫ್ ಗಣಿ ಮಾಲೀಕರು ಅವರ ಕೈಗಳಿಗೆ ತೆಗೆದು ಹಾಕಲಾಗದ ಬಿಗಿಯಾ? ಒಂದು ಕಬ್ಬಿಣದ ಬಳೆಯನ್ನೂ ಹಾಕಿದ್ದರು. ಆ ಬಳೆಯ ಮೇಲೆ ಇವರು ಕೆಜಿಎಫ್ ಕಾರ್ಮಿಕರು ಎಂದು ಬರೆಯಲಾಗಿತ್ತು. ಅಷ್ಟೇ ಅಲ್ಲ ಅವರುಗಳನ್ನು ಖಾಯಂ ಮಾಡಲು ಪ್ರಯತ್ನಿಸಿ ಹೆಸರುಗಳನ್ನು ದಾಖಲು ಮಾಡಿಕೊಳ್ಳ ಹೋದರೆ ಅವರಲ್ಲಿ ಬಹಳಷ್ಟು ಜನರ ಹೆಸರು ಒಂದೇ ರೀತಿ ಇರುವುದು ತಿಳಿಯಿತು. ಆದ್ದರಿಂದ ಅವರ ಕೈ ಬೆರಳ ಗುರುತನ್ನು ತೆಗೆದುಕೊಂಡು ಖಾಯಂ ದಾಖಲೆಗೆ ಸೇರಿಸಲು ಪ್ರಯತ್ನಿಸಿದರು. ಆದರೆ ಕಾರ್ಮಿಕರು ಇದನ್ನು ಒಪ್ಪದೆ ದೀರ್ಘ ಕಾಲ ಮುಷ್ಕರವನ್ನೇ ಮಾಡಿದರು.

ಈ ಕಾರ್ಮಿಕರು ವಿಜ್ಞಾನ ತಂತ್ರಜ್ಞಾನದ, ಪಾಳೆಯಗಾರಿ ವ್ಯವಸ್ಥೆಯ ನಾಶ, ಪ್ರಜಾಪ್ರಭುತ್ವದ ವಿಚಾರಗಳ ಅರಿವಿನ ಲೇಶವೂ ಇಲ್ಲದವರು. ಪಾಳೆಯಗಾರಿ ಹಿಡಿತದ ಹಳ್ಳಿಗಳ ಎಲ್ಲ ಮೂಢ ನಂಬಿಕೆ, ಕಂದಾಚಾರಗಳನ್ನು ತಲೆಯ ತುಂಬಾ ತುಂಬಿಕೊಂಡವರು. ಇನ್ನು ಜಾತಿ ಜಾತಿಗಳಾಗಿ ವಿಭಜಿತರಾದವರು. ಭಾರತವೆಂಬ ಬೃಹತ್ ದೇಶದಲ್ಲಿ ಅಸ್ತಿತ್ವದಲ್ಲಿರುವ ಆದಿವಾಸಿ ಹಂತದಿಂದ ಆರಂಭಿಸಿ ಹಲವು ಹಂತಗಳ ಸಮಾಜದ ರಚನೆಗಳಿಂದ ಬಂದವರು. ಹಲವು ಭಾಷೆ, ಧರ್ಮಗಳ ಮೂಲದವರು. ಅವರು ತಮ್ಮ ಮೂಲದ ಹಳ್ಳಿಗಳಲ್ಲಿಯೂ ಗುಡಿಸಲು, ಜೋಪಡಿಗಳ ಮಟ್ಟದ ಬದುಕನ್ನೇ ಕಂಡವರು. ಕೈಗಾರಿಕೆಗಳ ಕಾರ್ಮಿಕರಾಗಿ ಜೀವನ ನಡೆಸುವಾಗಲೂ ಇದಕ್ಕಿಂತ ಬಹಳ ಹೆಚ್ಚಿನ ಜೀವನಕ್ಕೇನೂ ಆಸೆ ಪಡದೆ ಅತಿ ಕಡಿಮೆ ಕೂಲಿಗೆ ದುಡಿಯಲು ಸಿದ್ಧರಾಗಿದ್ದರು. ಈ ರೀತಿ ಉಗಮವಾದ ಜಾತಿ, ಭಾಷೆ, ಧರ್ಮ ವಿಭಜಿತ ಕಾರ್ಮಿಕರಲ್ಲಿ ಒಗ್ಗಟ್ಟು ಮೂಡುವುದು ದುಸ್ತರವೇ ಆಗಿತ್ತು. ಬದುಕಿನ ದುಸ್ಥಿತಿ ಸಹಿಸಲಾರದೆ ಬಂಡೆದ್ದರೆ ಅದನ್ನು ಒಡೆಯಲು ಟಾಟಾಗಳು, ಅವರ ಜೊತೆಗಾರರು ಇವುಗಳನ್ನೆಲ್ಲ ಬಳಸುತ್ತಿದ್ದರು.

ಕರ್ನಾಟಕದಲ್ಲಿ ಮೇಲೆ ಹೇಳಿದ ಮೊದಲ ಕಾರ್ಮಿಕ ವರ್ಗದವರು ದೊಡ್ಡ ಪ್ರಮಾಣದಲ್ಲಿ ಭೂಹೀನ ದಲಿತ ಕೂಲಿಕಾರರ ಮೂಲದವರು.

ಬ್ರಿಟನ್‌ನಂತೆ ಬಹುತೇಕ ಒಂದೇ ಭಾಷೆ, ಒಂದೇ ಧರ್ಮದವರಲ್ಲ. ಸಮಾಜದಲ್ಲಿದ್ದ ಪಾಳೆಯಗಾರಿ ಶ್ರೇಷ್ಠತೆ ಮತ್ತು ಕನಿಷ್ಟತೆಯ ಸ್ತರಗಳು ನಾಶವಾಗುತ್ತಿದ್ದ ಕಾಲದವರಲ್ಲ.

ಹೀಗೆ ಬ್ರಿಟನ್‌ನ ಬಂಡವಾಳಶಾಹಿ ಮತ್ತು ಭಾರತದ ಬಂಡವಾಳಶಾಹಿಗಳ, ಬ್ರಿಟನ್ ಮತ್ತು ಭಾರತದ ಕಾರ್ಮಿಕ ವರ್ಗದ ಉಗಮದ ಸ್ವರೂಪದ ಮುಖ್ಯ ವ್ಯತ್ಯಾಸಗಳು ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ನಂತರ ಇಲ್ಲಿಯವರೆಗೂ ಆರ್ಥಿಕ, ಸಾಮಾಜಿಕ, ರಾಜಕೀಯ, ಕಾರ್ಮಿಕ, ರೈತ ರಂಗಗಳ ಮೇಲೆ ಪರಿಣಾಮ ಬೀರುತ್ತಲೇ ಇವೆ. ❑

# ಕೋಮುವಾದಿ ಬಿಜೆಪಿ–ಜೆಡಿ(ಎಸ್) ಕೂಟವನ್ನು ಸೋಲಿಸಬೇಕಾದ ಹೊಣೆ ಹಾಗೂ ಮತದಾರರ ಕರ್ತವ್ಯಗಳು

**ಲೋಕಸಭಾ ಚುನಾವಣೆಯಲ್ಲಿ ಸಂಸದರಾಗಿ ಆಯ್ಕೆಗೊಂಡವರ ಸ್ಥಾನಗಳಿಗೆ ಶಾಸಕರನ್ನು ಆರಿಸುವ ಉಪ ಚುನಾವಣೆಗಳು ನಡೆಯುತ್ತಿವೆ. ಸ್ಪರ್ಧಿಸಿರುವ ಮೂರು ಪ್ರಧಾನ ಪಕ್ಷಗಳಿಗೆ ಹಿಂದೆ ಗೆದಿದ್ದ ನಾಯಕರಿಗೆ ಇವು ಪ್ರತಿಷ್ಟೆಯ ಕಣಗಳಾಗಿವೆ. ಈ ತುರುಸಿ ಸ್ಪರ್ದೆಯಲ್ಲಿ ಜನ ತೆಗೆದುಕೊಳ್ಳಬೇಕಾದ ತೀಮಾನವೇನಿರಬೇಕು? ಈ ಕುರಿತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿಯ ಸದಸ್ಯರಾಗಿರುವ ಕಾಂ. ಯು.ಬಸವರಾಜ್ ರವರ ವಿಶ್ಲೇಷಣೆ ಇಲ್ಲಿದೆ.**

**ಯು.ಬಸವರಾಜ**

ಕಳೆದ ಲೋಕಸಭಾ ಚುನಾವಣೆಯು ಮುಖ್ಯವಾಗಿ ಪ್ರಜಾಪ್ರಭುತ್ವದ ಉಳಿವಿಗಾಗಿ ಮತ್ತು ಸರ್ವಾಧಿಕಾರ ಹಾಗೂ ಹಿಂದುತ್ವ ರಾಷ್ಟ್ರದ ಹೇರಿಕೆಯ ಅಪಾಯವನ್ನು ತಪ್ಪಿಸಲು ಜಿದ್ದಾ ಜಿದ್ದಿಯಾಗಿ ನಡೆಯಿತೆಂಬುದನ್ನು ನಾವು ನೋಡಿದ್ದೇವೆ. ಒಂದೆಡೆ 'ಎನ್.ಡಿ.ಎ.' ಕೂಟವಿದ್ದರೆ ಇನ್ನೊಂದೆಡೆ 'ಇಂಡಿಯಾ' ಕೂಟ. ಇವುಗಳ ನಡುವೆ ತುರುಸಿನ ಸ್ಪರ್ಧೆ ನಡೆಯಿತು.

ಈ ಜಿದ್ದಾ ಜಿದ್ದಿ ಚುನಾವಣೆಯನ್ನು ಗೆಲ್ಲಲು ಬಿಜೆಪಿ/ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳು ರಾಜ್ಯದಲ್ಲಿ ಘಟಾನುಘಟಿಗಳಾದ ಮಾಜಿ ಮುಖ್ಯಮಂತ್ರಿಗಳು, ಹಾಲಿ ಶಾಸಕರನ್ನು ಅಭ್ಯರ್ಥಿಗಳನ್ನಾಗಿಸಿ ಸ್ಪರ್ಧೆಗಿಳಿಸಿದ್ದವು. ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿಯವರು ಸಂಸದರಾಗಿ ಚುನಾಯಿತರಾಗಿದ್ದು ಮಾತ್ರವಲ್ಲ, ಕೈಗಾರಿಕಾ ಸಚಿವರೂ ಆಗಿದ್ದಾರೆ. ಈ ಕಾರಣದಿಂದ


> **ರಾಜ್ಯದಲ್ಲಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಗಳಿಗೆ ಮತದಾರರು ತಮಗೆ ವಿರೋಧ ಪಕ್ಷದಲ್ಲಿದ್ದು ಕಾರ್ಯನಿರ್ವಹಿಸಲು ಅವಕಾಶ ನೀಡಿದ್ದರೂ, ರಾಜ್ಯದ ಜನತೆಯ ರಕ್ಷಣೆಗಾಗಿ ಒಂದು ನೈಜ ರಚನಾತ್ಮಕ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವ ಬದಲು, ಇವು ಒಟ್ಟಾಗಿ ಜನರ ಹಿತಾಸಕ್ತಿಗಳನ್ನು ಮರೆತು ಅಧಿಕಾರ ಹಿಡಿಯುವ ಕುತಂತ್ರದ ರಾಜಕಾರಣದ ಮೇಲಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.**

## ಉಪ ಚುನಾವಣೆಗಳು

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ. ಅದೇ ರೀತಿ, ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರದಿಂದ ಶಾಸಕರಾಗಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರು ಕ್ಷೇತ್ರದ ಶಾಸಕರಾಗಿದ್ದ ಇ.ತುಕಾರಾಮ್ ಅವರುಗಳು ಸಂಸದರುಗಳಾಗಿ ಆಯ್ಕೆಯಾದ್ದರಿಂದ ತಮ್ಮ ತಮ್ಮ ಕ್ಷೇತ್ರಗಳಿಗೆ ರಾಜಿನಾಮೆ ನೀಡಿದ್ದಾರೆ. ಹೀಗಾಗಿ ಒಟ್ಟು ಈ ಮೂರು ಕ್ಷೇತ್ರಗಳಿಗೆ ಉಪಚುನಾವಣೆ ನಡೆಸ ಬೇಕಾಗಿ ಬಂದಿದೆ.

**ಪ್ರತಿಷ್ಠೆಯ ಕಣಗಳು**

ಈ ಮೂರು ಕ್ಷೇತ್ರಗಳು ಒಂದೆಡೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಮಿತ್ರ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿ(ಎಸ್) ಪಕ್ಷಗಳಿಗೆ ತೀರಾ ಪ್ರತಿಷ್ಠೆಯ ಕ್ಷೇತ್ರಗಳಾಗಿವೆ. ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರವು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರುಗಳಿಗೆ ವೈಯುಕ್ತಿಕ ಪ್ರತಿಷ್ಠೆಯ ಕಣಗಳಾಗಿ ಮಾರ್ಪಟ್ಟಿದೆ. ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ತಮ್ಮ ಮಗ ಭರತ್ ಬೊಮ್ಮಾಯಿಯನ್ನೆ ಕಣಕ್ಕಿಳಿಸಿದ ಬಸವರಾಜ ಬೊಮ್ಮಾಯಿಯವರಿಗೆ ಅದು ವೈಯುಕ್ತಿಕ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಹಾಗೆಯೇ ಸಂಡೂರು ವಿಧಾನಸಭಾ ಕ್ಷೇತ್ರವು ಕಾರ್ಮಿಕ ಸಚಿವರಾದ ಸಂತೋಷ ಲಾಡ್‌ರವರಿಗೆ, ಅವರಿಗೆ ಎದುರಾಗಿ ಬಿಜೆಪಿ ಗೆಲ್ಲಿಸಲು ಸಂಡೂರಿನಲ್ಲಿ ಮನೆ ಮಾಡಿ ಈಚೆಗೆ ಬಿಜೆಪಿ ಸೇರಿದ ಜನಾರ್ಧನರೆಡ್ಡಿಯವರಿಗೆ ವೈಯುಕ್ತಿಕ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಹೀಗಾಗಿ ಈ ಕ್ಷೇತ್ರಗಳು ರಾಜ್ಯದ ಗಮನ ಸೆಳೆದಿವೆ.



**ಬಿಜೆಪಿ/ಜೆಡಿಎಸ್ ಗೆಲ್ಲಲು ಬಿಡುವುದು ಮತ್ತಷ್ಟು ಅಪಾಯವನ್ನು ಮೈಮೇಲೆ ಎಳೆದುಕೊಂಡಂತೆ**

ದೇಶದ ಜಾಗೃತ ಮತದಾರರು ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಕೇಂದ್ರದಲ್ಲಿ ಸ್ವತಂತ್ರವಾಗಿ ಅಧಿಕಾರ ನಡೆಸಲು ಅವಕಾಶ ನೀಡಲಿಲ್ಲ. ಹೀಗಾಗಿ ಬಿಜೆಪಿ ತನಗೆ ಹಿನ್ನಡೆಯಾದರೂ, ತಾನು ಎನ್.ಡಿ.ಎ. ಕೂಟದ ನಾಯಕನಾಗಿ, ಅದಕ್ಕೆ ದೊರೆತ ಬಹುಮತದ ಆಧಾರದಲ್ಲಿ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದೆ.

ಬಿಜೆಪಿ ನಾಲ್ಕು ನೂರು ಸ್ಥಾನಗಳನ್ನು ಪಡೆದು ಭಾರತ ಸಂವಿಧಾನವನ್ನೇ ಬದಲಾಯಿಸುವ ಮತ್ತು ದೇಶವನ್ನು ಹಿಂದುತ್ವವಾದಿ ರಾಷ್ಟ್ರವಾಗಿಸುವ ಉದ್ದೇಶ ಹೊಂದಿತ್ತು. ಆದರೆ ಫಲಿತಾಂಶದಿಂದ ಬಿಜೆಪಿಯ ಈ ಕನಸಿಗೆ ಭಂಗ ಉಂಟಾಯಿತು.

ಇದರಿಂದ ಕಂಗೆಟ್ಟ ಬಿಜೆಪಿ ಹೇಗಾದರೂ ಮಾಡಿ ತನ್ನ ಹವಣಿಕೆ ಜಾರಿಮಾಡಲು ಅಗತ್ಯವಾದ ಸ್ಥಾನಗಳನ್ನು ಪಡೆಯಲು ಹೊಂಚು ಹಾಕಿ ಕೂತಿದೆ. ಚುನಾವಣೆಯ ನಂತರ ತಾನು ಅಧಿಕಾರದಲ್ಲಿರುವ ಬಹುತೇಕ ರಾಜ್ಯಗಳಲ್ಲಿ ನೇರವಾಗಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳನ್ನು ಎಸಗುತ್ತಾ ಮತ್ತು ತಾರತಮ್ಯ ಎಸಗುವ ಕಾನೂನು ರೂಪಿಸುವ ಮೂಲಕ ಹಿಂದುಗಳನ್ನು ಕೋಮುವಾದಿ ನೆಲೆಯಲ್ಲಿ ಒಂದುಗೂಡಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದೆ. ಅದೇ ರೀತಿ, ಕೇಂದ್ರ ಸರಕಾರದ ಅಧಿಕಾರಗಳನ್ನು ಮತ್ತು ಸ್ವಾಯತ್ತ ತನಿಖಾ ಸಂಸ್ಥೆಗಳು ಹಾಗು ರಾಜ್ಯಪಾಲರ ಕಛೇರಿಯ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯ ಸರಕಾರಗಳಿಗೆ ಅನುದಾನದ ಹಂಚಿಕೆಯಲ್ಲಿ ವಂಚನೆ ಮಾಡಿ ತೊಂದರೆ ನೀಡುವ ಮೂಲಕ ಅವುಗಳನ್ನು ದುರ್ಬಲಗೊಳಿಸಲು, ಆ ಮೂಲಕ ತಾನು ಮುನ್ನಡೆ ಸಾಧಿಸಲು ಯತ್ನಿಸುತ್ತಿದೆ.

'ಒಂದು ದೇಶ ಒಂದು ಚುನಾವಣೆ'ಯ ಹೆಸರಿನಲ್ಲಿ ಭಾರತದ ಒಕ್ಕೂಟ ಸ್ವರೂಪಕ್ಕೆ ಹಾಗು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವ ಕೆಲಸವನ್ನು ಬಿಜೆಪಿಯು ಈಗಲೂ ಮುಂದೊತ್ತುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಸಂಸದರ ಸಂಖ್ಯೆಯ ಆಧಾರದಲ್ಲಿ ಮಿತ್ರ ಪಕ್ಷಗಳಾದ ಬಿಜೆಪಿ ಹಾಗು ಜೆಡಿ(ಎಸ್)ಗಳಿಗೆ ಹಿನ್ನಡೆಯಾದರೂ ಅವುಗಳು ಗಳಿಸಿದ ಒಟ್ಟು ಮತಗಳು ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಪಡೆದುದಕ್ಕಿಂತಲೂ ಹೆಚ್ಚಾಗಿದೆ. ಅದು ಶೇ. 51.73ಕ್ಕೆ ಏರಿದೆ. ಈ ಬೆಳವಣಿಗೆಯು ಬಿಜೆಪಿ ಹಾಗು ಜೆಡಿ(ಎಸ್) ಪಕ್ಷಗಳಿಗೆ ಬಲವನ್ನು ತಂದಿದೆ. ಹೀಗಾಗಿ ಈ ಬಲದ ಆಧಾರದಲ್ಲಿ ಮಿತ್ರ ಪಕ್ಷಗಳ ರಾಜ್ಯ ನಾಯಕತ್ವ ಮತ್ತು ಹಿಂದುತ್ವವಾದಿ ಶಕ್ತಿಗಳು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಕಾಂಗ್ರೆಸ್ ಪಕ್ಷವನ್ನು ರಾಜ್ಯ ಸರಕಾರದ ಅಧಿಕಾರದಿಂದ ಕೆಳಗೆಳೆಯುವ ಸಂಚಿನ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

ರಾಜ್ಯದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಗಳಿಗೆ ಮತದಾರರು ತಮಗೆ ವಿರೋಧ ಪಕ್ಷದಲ್ಲಿದ್ದು ಕಾರ್ಯನಿರ್ವಹಿಸಲು ಅವಕಾಶ ನೀಡಿದ್ದರೂ, ರಾಜ್ಯದ ಜನತೆಯ ರಕ್ಷಣೆಗಾಗಿ ಒಂದು ನೈಜ ರಚನಾತ್ಮಕ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವ ಬದಲು, ಇವು ಒಟ್ಟಾಗಿ ಜನರ ಹಿತಾಸಕ್ತಿಗಳನ್ನು ಮರೆತು ಅಧಿಕಾರ ಹಿಡಿಯುವ ಕುತಂತ್ರದ ರಾಜಕಾರಣದ ಮೇಲಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಪಕ್ಷಗಳು ಕೇಂದ್ರ ಸರಕಾರದ ಅಧಿಕಾರ ಬಳಸಿ ರಾಜ್ಯಕ್ಕೆ ಬರಬೇಕಾದ ನ್ಯಾಯಬದ್ದ ತೆರಿಗೆ ಪಾಲು, ಬಾಕಿ ತೆರಿಗೆ ಮತ್ತು ಅನುದಾನ ಹಾಗು ಬರ ಪರಿಹಾರ ತಂದು ರಾಜ್ಯದ ಜನತೆಯ ವಿಶ್ವಾಸಗಳಿಸುವ ಕೆಲಸಕ್ಕೆ ಎಳ್ಳು ನೀರು ಬಿಟ್ಟು ರಾಜ್ಯದ ನೈಜ ಅಭಿವೃದ್ಧಿಯ ಹಾಗೂ ಜನತೆಯ ವಿರೋಧಿಗಳು ತಾವೆಂಬುದನ್ನು ಮರಳಿ ಸಾಬೀತುಪಡಿಸುತ್ತಿವೆ.

ಇದೇ ಸಂದರ್ಭದಲ್ಲಿ ರಾಜ್ಯ ಸರಕಾರದ ವಾಲ್ಮೀಕಿ ಅಭಿವೃದ್ಧಿ ನಿಗಮದ ನೂರಾರು ಕೋಟಿ ರೂ.ಗಳನ್ನು ಅಕ್ರಮವಾಗಿ ವರ್ಗಾಯಿಸಿ ಬಡ ವಾಲ್ಮೀಕಿ ಸಮುದಾಯವನ್ನು ವಂಚಿಸಿದ ಭ್ರಷ್ಟಾಚಾರದ ಹಗರಣ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ 'ಮೂಡಾ' ಹಗರಣಗಳು ಬಯಲಾದುದನ್ನು ಅಸ್ತ್ರವಾಗಿ ಉಪಯೋಗಿಸಿಕೊಳ್ಳುತ್ತಿವೆ. ವಾಲ್ಮೀಕಿ ಹಗರಣದಲ್ಲಿ ಹಲವರನ್ನು ಬಂಧಿಸಲಾಗಿದೆ ಮತ್ತು ಮಂತ್ರಿ ರಾಜಿನಾಮೆ ನೀಡಿ ಬಂಧನಕ್ಕೊಳಗಾಗಿ ಜೈಲಿಗೆ ತಳ್ಳಲ್ಪಟ್ಟರು. ಮೂಡಾ ಹಗರಣವನ್ನು ಜನತೆಯ ಒತ್ತಾಯದ ಮೇರೆಗೆ ನ್ಯಾಯಾಂಗ ತನಿಖೆಗೆ ವಹಿಸಲಾಗಿದೆ. ಇದೇ ಸಂದರ್ಭದಲ್ಲಿ ರಾಮನಗರದಿಂದ ಮೈಸೂರಿಗೆ ನಡೆದ ಬಿಜೆಪಿ–ಜೆಡಿ(ಎಸ್) ಪಾದಯಾತ್ರೆ ಹಾಗೂ ಕಾಂಗ್ರೆಸ್ ಸಮಾವೇಶಗಳ ಸಂದರ್ಭದಲ್ಲಿ ಈ ಎಲ್ಲರ ಹಗರಣಗಳು ಆರೋಪ, ಪ್ರತ್ಯಾರೋಪಗಳ ಮೂಲಕ ಬಯಲಾಗಿ ಎಲ್ಲವು ತನಿಖೆಗೊಳಪಡಿಸುವ ಒತ್ತಾಯದಿಂದ ತಣ್ಣಗಾಗಿವೆ.

> **ಪ್ರಜಾಪ್ರಭುತ್ವ ವಿರೋಧಿ, ಕೋಮುವಾದಿ ಬಿಜೆಪಿ ಹಾಗೂ ಅದರ ಮಿತ್ರರನ್ನು ಸೋಲಿಸಲು ಸಾಧನವಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕಾದ ಅನಿವಾರ್ಯ ಮತ್ತು ಸಂಕಷ್ಟಕರ ಒತ್ತಡದಲ್ಲಿ ಮತದಾರನಿದ್ದಾನೆ.**

ಕೇಂದ್ರ ಬಿಜೆಪಿ, ಆರ್.ಎಸ್.ಎಸ್.ಗಳು ಅಧಿಕಾರ ಹಾಗು ತನಿಖಾ ಸಂಸ್ಥೆಗಳ ಮತ್ತು ರಾಜ್ಯಪಾಲರ ಕಛೇರಿಗಳನ್ನು ದುರುಪಯೋಗ ಮಾಡಿಕೊಳ್ಳುವುದು ಈ ಪ್ರಕರಣದಲ್ಲೂ ಬಯಲಾಗಿದೆ. ರಾಜ್ಯಪಾಲರು ಆರ್.ಟಿ.ಐ. ಕಾರ್ಯಕರ್ತರೊಬ್ಬರ ಮನವಿಗೆ, ಮನವಿ ನೀಡಿದ ದಿನದಂದೇ ಸ್ಪಂದಿಸಿ ಮುಖ್ಯಮಂತ್ರಿಗಳ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದರು. ಆದರೆ ರಾಜ್ಯಪಾಲರು ಕೇಂದ್ರ ಸಚಿವ ಕುಮಾರಸ್ವಾಮಿಯವರ ಮೇಲಿನ ಗಣಿ ಹಗರಣದ ಕುರಿತ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡದೆ ತಡೆ ಹಿಡಿಯುವ ಮೂಲಕ ತಾರತಮ್ಯ ನೀತಿ ಅನುಸರಿಸುತ್ತಾ ಕೇಂದ್ರ ಸರಕಾರದ ಅಧಿಕಾರ ದುರುಪಯೋಗವನ್ನು ಬಯಲುಗೊಳಿಸಿದರು.

ವಾಲ್ಮೀಕಿ ಹಗರಣದ ತನಿಖೆಯಲ್ಲಿಯೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರನ್ನು ಹಿಂಸಿಸಿ ಹಗರಣದಲ್ಲಿ ಉನ್ನತ ಸಚಿವರಿದ್ದಾರೆಂದು ಹೇಳುವಂತೆ ಒತ್ತಾಯಿಸಿದ ಬಗೆಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವ ಮೂಲಕ ಕೇಂದ್ರದ ತನಿಖಾ ಸಂಸ್ಥೆ ಜಾರಿ ನಿರ್ದೇಶನಾಲಯವೂ ಕೂಡಾ ಕೇಂದ್ರದ ಅಧಿಕಾರ ದುರುಪಯೋಗವನ್ನು ಸಾಬೀತು ಪಡಿಸಿದೆ.

ಹಿಂದುತ್ವವಾದಿಗಳು ಬಿಜೆಪಿ ಪಕ್ಷ ಕೋಮುವಾದಿ ರಾಜಕಾರಣವನ್ನು ಬಿಟ್ಟು ಕೇಂದ್ರ ಸರಕಾರದ ಅಧಿಕಾರವನ್ನು ಜನಪರವಾಗಿ ಬಳಸಿಕೊಳ್ಳುವ ಹಾಗು ರಾಜ್ಯಕ್ಕೆ ನ್ಯಾಯಬದ್ಧವಾಗಿ ನೆರವು ನೀಡುವ ಮೂಲಕ ಜನರ ವಿಶ್ವಾಸ ಗಳಿಸಿಕೊಳ್ಳಬಹುದಾದ ಅವಕಾಶವಿತ್ತು. ಆದರೆ ಅವರು ಅದು ಹಾಗೆ ಮಾಡದೆ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಚುನಾಯಿತ ರಾಜ್ಯ ಸರಕಾರವನ್ನು ಅಸ್ಥಿರಗೊಳಿಸಲು ಹಾಗೂ ದುರ್ಬಲಗೊಳಿಸಲು ಪ್ರಯತ್ನಿಸುವುದರ ಮೂಲಕ ಮತ್ತೊಮ್ಮೆ ತಾನು ಪ್ರಜಾಪ್ರಭುತ್ವ ವಿರೋಧಿಯಾಗಿದ್ದೇನೆಂದು ಸಾಬೀತು ಪಡಿಸಿದೆ. ಇದರ ಜೊತೆ ನವ ಉದಾರೀಕರಣದ ನೀತಿಗಳನ್ನು ನಗ್ನವಾಗಿ ಜಾರಿಗೊಳಿಸುವ ಮೂಲಕ, ಕಾರ್ಪೋರೇಟ್ ಸಂಸ್ಥೆಗಳ ಲೂಟಿಗೆ ಅನುವು ಮಾಡಿ ಜನತೆಯ ಮೇಲೆ ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಂಕಷ್ಟಗಳನ್ನು ಹೇರುತ್ತಿದೆ. ಹೀಗಾಗಿ ಮತದಾರರು ಪ್ರಜಾಪ್ರಭುತ್ವ ರಕ್ಷಣೆಗಾಗಿ ಈ ಉಪ ಚುನಾವಣೆಯಲ್ಲಿಯೂ ಕೋಮುವಾದಿ ಬಿಜೆಪಿ ಹಾಗು ಜೆಡಿ(ಎಸ್) ಮೈತ್ರಿಕೂಟವನ್ನು ಸೋಲಿಸುವುದನ್ನು ಆದ್ಯತೆಯಾಗಿ ಪರಿಗಣಿಸಬೇಕು. ಈ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ಮತದಾರರು ಅಪಾಯವನ್ನು ಮೈ ಮೇಲೆಳೆದು ಕೊಂಡಂತೆಯೆ ಸರಿ! ಗೆಲುವನ್ನು ಬಳಸಿ ಅದು ಮತ್ತಷ್ಟು ಕ್ರೂರ ವ್ಯಾಘ್ರವಾಗಿ ಪ್ರಜಾಪ್ರಭುತ್ವ ವಿರೋಧಿ ಹಾಗು ಜನವಿರೋಧಿ ವಿಭಜನಕಾರಿ ಕೆಲಸಗಳಿಗೆ ತೊಡಗಲು ಅನುವು ಮಾಡಿದಂತಾಗುತ್ತದೆ. ಈ ಎಲ್ಲ ಎಚ್ಚರಿಕೆ ಅಗತ್ಯವಿದೆ.

**ಕಾಂಗ್ರೆಸ್ ಬಗ್ಗೆ ಎಚ್ಚರವನ್ನೂ ವಹಿಸಬೇಕು**

ಕಾಂಗ್ರೆಸ್ ಮೇಲೆ ವಿಶ್ವಾಸವಿರಿಸುವುದು ನಮಗೆ ನಾವು ಮೋಸ ಮಾಡಿಕೊಂಡಂತೆ ಎಂಬುದನ್ನು ನಾವು ಮರೆಯಬಾರದು. ರಾಜ್ಯದಲ್ಲಿ ಕಾಂಗ್ರೆಸ್ ಹಾಗು ಬಿಜೆಪಿ, ಜೆಡಿ(ಎಸ್)

ಪುಟ 14 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ ಅಕ್ಟೋಬರ್ 28–ನವೆಂಬರ್ 3, 2024 5 October 28-November 3, 2024 JANASHAKTHI KANNADA VARA PATRIKE


ಭಾಗ 1

**ಸಿಪಿಐ(ಎಂ) ಪಕ್ಷದ ಸಮ್ಮೇಳನಗಳ ಸಂದರ್ಭದಲ್ಲಿ ಕಳೆದ 3 ವರ್ಷಗಳಲ್ಲಿ ಪಕ್ಷದ ಕಾರ್ಯಾಚರಣೆಗಳ ವಿಮರ್ಶೆ ಮತ್ತು ಮುಂದಿನ 3 ವರ್ಷಗಳ ಕಾರ್ಯಾಚರಣೆಗಳ ಯೋಜನೆಗಳನ್ನು ಮಾಡಲಾಗುತ್ತದೆ. ಇದಕ್ಕೆ ನಮ್ಮ ದೇಶದ, ರಾಜ್ಯದ ಕಳೆದ 3 ವರ್ಷಗಳ ಒಟ್ಟಾರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ, ಪರಿಸ್ಥಿತಿಯ ಸಿಂಹಾವಲೋಕನ ಅಗತ್ಯವಾಗುತ್ತದೆ. ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳ, ಪರಿಸ್ಥಿತಿಯ ಪರಿಶೀಲನೆ ಇದರ ಭಾಗವಾಗಿದೆ. ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿ, ಸಮಾಜದಲ್ಲಿ ಅದು ವಹಿಸುತ್ತಿರುವ ಪಾತ್ರ, ಮಾಧ್ಯಮದ ಜತೆ ಜನತೆಯ ವ್ಯವಹಾರ–ಇವೆಲ್ಲವನ್ನು ಪರಿಶೀಲಿಸಬೇಕಾಗುತ್ತದೆ. ಮಾಧ್ಯಮ ಪರಿಸ್ಥಿತಿಯ ಅವಲೋಕನವನ್ನು ಈ ಲೇಖನ ಮಾಲೆಯ ಮೂರು ಲೇಖನಗಳಲ್ಲಿ ಮಾಡಲಾಗುತ್ತದೆ. ಮೊದಲಿನ ಈ ಭಾಗದಲ್ಲಿ ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದೆ.**

# ಮಾಧ್ಯಮ ಪರಿಸ್ಥಿತಿ


**ವಸಂತರಾಜ ಎನ್.ಕೆ.**

ಮಾಧ್ಯಮ ಭಾರೀ ಉದ್ಯಮವಾಗಿ ಅಪಾರವಾಗಿ ಬೆಳೆಯುತ್ತಿದ್ದು, ಈ ಅವಧಿಯಲ್ಲಿ ಅದರ ಒಡೆತನ ಇನ್ನಷ್ಟು ಹೆಚ್ಚು ಗಾಢವಾಗಿ ಕೆಲವೇ ದೈತ್ಯ ಗುಂಪುಗಳಲ್ಲಿ ಸಾಂದ್ರೀಕರಣಗೊಂಡಿದೆ. ಮಾತ್ರವಲ್ಲ ಈ ಗುಂಪುಗಳು (ಏಕಸ್ವಾಮ್ಯ ತಡೆಗಟ್ಟಲು ವಿವಿಧ ಮಾಧ್ಯಮಗಳ ಒಡೆತನಕ್ಕೆ ಯಾವುದೇ ನಿರ್ಬಂಧ ಈಗ ಇಲ್ಲದಿರುವುದರಿಂದ) ಟಿವಿ, ಪತ್ರಿಕೆ, ರೇಡಿಯೊ, ಡಿಜಿಟಲ್ ಹೀಗೆ ಎಲ್ಲಾ ಉದ್ಯಮಗಳಿಗೂ ವ್ಯಾಪಿಸಿವೆ. ಎಲ್ಲ ಮಾಧ್ಯಮ ಕ್ಷೇತ್ರಗಳಲ್ಲಿ ದೊಡ್ಡ ಪಾಲಿರುವ ಕೆಲವೇ ಬೆರಳೆಣಿಕೆಯ ಕುಟುಂಬ/ಕಾರ್ಪೊರೆಟ್ ಸಮೂಹಗಳು ತಲೆ ಎತ್ತಿವೆ. ಅಂಬಾನಿ ಒಡೆತನದ ನೆಟ್‌ವರ್ಕ್ 18, ಝೀ, ಸೋನಿ, ಸ್ಟಾರ್, ಸನ್ (ಮಾರನ್), ಜೈನ್ (ಟೈಮ್ಸ್ ಆಫ್ ಇಂಡಿಯಾ), ಇಂಡಿಯಾ ಟುಡೆ, ರಿಪಬ್ಲಿಕ್, ಬಿರ್ಲಾ(ಹಿಂದುಸ್ತಾನ್ ಟೈಮ್ಸ್), ಆನಂದ ಬಜಾರ್ ಪತ್ರಿಕಾ, ಅಗರ್ವಾಲ್ (ದೈನಿಕ್ ಭಾಸ್ಕರ್)– ಇವೇ ಅಂತಹ ಕಾರ್ಪೊರೆಟ್ ಸಮೂಹಗಳು. ಅದಾನಿ ಅವರು ಎನ್‌ಡಿಟಿವಿ ವಶಪಡಿಸಿಕೊಂಡ ನಂತರ ಅವರ ಮಾಧ್ಯಮ ಸಮೂಹ ವಿಸ್ತಾರವಾಗ ಹತ್ತಿದೆ. ಇವುಗಳಲ್ಲಿ ಹೆಚ್ಚಿನ ಗುಂಪುಗಳು (ಒಂದೆರಡು ಅಪವಾದ ಬಿಟ್ಟರೆ) ಆಳುವ ಪಕ್ಷ ಬಿಜೆಪಿಯನ್ನು ಖುಲ್ಲಂ ಖುಲ್ಲಾ ಬೆಂಬಲಿಸುತ್ತವೆ. ಇವುಗಳಲ್ಲಿ ಹೆಚ್ಚಿನವು ಮನೋರಂಜನೆ (ಫಿಲಂ, ಒಟಿಟಿ, ಆನ್‌ಲೈನ್ ಗೇಮ್. ಅನಿಮೇಶನ್ ಇತ್ಯಾದಿ) ಕ್ಷೇತ್ರದಲ್ಲೂ ಹೂಡಿಕೆ ಮಾಡಿದ್ದು 'ಮಾಧ್ಯಮ ಮತ್ತು ಮನೋರಂಜನಾ' ಕ್ಷೇತ್ರಗಳು ಈ ಅವಧಿಯಲ್ಲಿ ಹೆಚ್ಚು ಕಡಿಮೆ ಒಂದಾಗಿವೆ. ಎರಡಕ್ಕೂ ಜಾಹೀರಾತುಗಳು ಮೂಲಾಧಾರವಾಗಿದ್ದು, ಆ ಉದ್ಯಮವೂ ಇದರೊಂದಿಗೆ ಬೆರೆತುಕೊಂಡಿರುತ್ತದೆ. ಜಾಹೀರಾತು ಉತ್ಪಾದನೆ, ಹಂಚಿಕೆಗಳ ಕಂಪನಿಗಳು ಸಹ ಈ ಗುಂಪುಗಳ ಭಾಗವಾಗಿರುತ್ತವೆ.




2023ರಲ್ಲಿ 'ಮಾಧ್ಯಮ ಮತ್ತು ಮನೋರಂಜನಾ' ಉದ್ಯಮ ಕ್ಷೇತ್ರದ ಗಾತ್ರ ಬೆಳೆದಿದೆ. ಇದರಲ್ಲಿ 880 ಟಿವಿ ಚಾನೆಲುಗಳು, 380 ಸುದ್ದಿ ಚಾನೆಲ್ ಗಳು, 550 ರೇಡಿಯೋ ಸ್ಟೇಶನ್‌ಗಳು, 17,160 ದೈನಿಕಗಳು, 38,933 ನಿಯತಕಾಲಿಕಗಳು ಇವೆ. ಇವುಗಳ ಒಟ್ಟು ವಹಿವಾಟು 231.7 ಸಾವಿರ ಕೋಟಿ ರೂ. ಆಗಿತ್ತು. ಇದು 2024ರಲ್ಲಿ ಶೇ. 10ರಷ್ಟು ಬೆಳೆದು 253.3 ಸಾವಿರ ಕೋಟಿ ರೂ. ಮತ್ತು 2026ರ ಹೊತ್ತಿಗೆ 308.1 ಸಾವಿರ ಕೋಟಿ ರೂ. ಆಗಲಿದೆ ಎಂದು ಅಂದಾಜಿಸಲಾಗಿದೆ. 2019ರ (ಕೋವಿಡ್ ಅವಧಿಯ ಇಳಿಕೆ ಬಿಟ್ಟು ಹಿಂದಿನ ಸಹಜ) ವಹಿವಾಟಿಗೆ ಹೋಲಿಸಿದರೆ 2024ರ ಒಟ್ಟು ವಹಿವಾಟು ಶೇ. 33ರಷ್ಟು ಏರಿದೆ. ಬರಿಯ ಮಾಧ್ಯಮದ್ದೇ (ಅಂದರೆ, ಟಿವಿ, ಪ್ರಿಂಟ್, ರೇಡಿಯೊ, ಡಿಜಿಟಲ್ ವಹಿವಾಟು) 162.3 ಸಾವಿರ ಕೋಟಿ ರೂ. ಇದೆ, 2024ರಲ್ಲಿ ರೂ. 176.3 ಸಾವಿರ ಕೋಟಿ ರೂ. ಆಗಲಿದೆ. 2019ರ (ಕೋವಿಡ್ ಅವಧಿಯ ಇಳಿಕೆ ಬಿಟ್ಟು ಹಿಂದಿನ ಸಹಜ) ವಹಿವಾಟಿಗೆ ಹೋಲಿಸಿದರೆ 2024ರ ಬರಿಯ ಮಾಧ್ಯಮ ಕ್ಷೇತ್ರದ ಒಟ್ಟು ವಹಿವಾಟು ಶೇ. 25.4ರಷ್ಟು ಏರಿದೆ.

ವಿಸ್ತರಣೆಯ ಜತೆಗೆ ಒಡೆತನ ಮತ್ತು ನೋಡುಗ/ಕೇಳುಗ/ಓದುಗರ ಸಾಂದ್ರೀಕರಣವೂ ನಡೆದಿದೆ. ಉದಾಹರಣೆಗೆ ಅಂಬಾನಿ ಅವರ ಒಡೆತನದ ನೆಟ್‌ವರ್ಕ್ 18 ಒಂದೇ, 72 ಟಿವಿ ಚಾನೆಲುಗಳು ಮತ್ತು 80 ಕೋಟಿ ನೋಡುಗರನ್ನು ಹೊಂದಿದೆ. ಹಿಂದಿ ದೈನಿಕಗಳಲ್ಲಿ ಕೇವಲ ನಾಲ್ಕು (ದೈನಿಕ ಜಾಗರಣ್, ಹಿಂದೂಸ್ತಾನ್, ಅಮರ್ ಉಜಾಲಾ, ದೈನಿಕ್ ಭಾಸ್ಕರ್) ಮುಕ್ಕಾಲು ಪಾಲು ಓದುಗರನ್ನು ಬಾಚಿಕೊಂಡಿವೆ. ಸ್ಟಾರ್ ಅನ್ನು ಝೀ ಖರೀದಿಸುವ ಮತ್ತು ಝೀ ಅನ್ನು ಸೋನಿ ಖರೀದಿಸುವ ಮಾತುಕತೆ ಅಂತಿಮ ಹಂತದಲ್ಲಿ ಮುರಿದು ಬಿದ್ದಿತ್ತು. ಇಲ್ಲದಿದ್ದರೆ, ಟಿವಿ ಕ್ಷೇತ್ರದಲ್ಲಿ ಸಾಂದ್ರೀಕರಣ ಇನ್ನಷ್ಟು ಗಾಢವಾಗುತ್ತಿತ್ತು. ಈ ಸಾಂದ್ರೀಕರಣ ಸ್ವತಂತ್ರ ಮಧ್ಯಮ ಮತ್ತು ಸಣ್ಣ ಗಾತ್ರದ ಮಾಧ್ಯಮ ಉದ್ಯಮಕ್ಕೆ ಅವಕಾಶ




ಕೊಡುವುದಿಲ್ಲ. ಇದು ಬಹುತ್ವ, ವೈವಿಧ್ಯತೆ ಮತ್ತು ಸ್ವಾತಂತ್ರ್ಯಕ್ಕೂ ಕುತ್ತು ತರುವ ಬೆಳವಣಿಗೆ.

**ಮಾಧ್ಯಮಗಳ ಮೇಲೆ ದಾಳಿ**

ಬಿಜೆಪಿ ಪಕ್ಷ/ಸರಕಾರಗಳ ಒತ್ತಡಕ್ಕೆ ತಲೆಬಾಗದ, ಅವನ್ನು ನಿರ್ದಾಕ್ಷಿಣ್ಯವಾಗಿ ಟೀಕೆ ಮಾಡುವ, ಮುಜುಗರ ತರುವ ವರದಿಗಳನ್ನು ಮಾಡುವ, ಸತ್ಯವನ್ನು ಹೇಳುವ ಮಾಧ್ಯಮಗಳ ಮೇಲೆ ಕೇಂದ್ರೀಯ ಸಂಸ್ಥೆಗಳನ್ನು ದುರ್ಬಳಕೆ ಮಾಡಿ (ಹೆಚ್ಚಾಗಿ ಕಾನೂನುಬಾಹಿರವಾಗಿ ಅಥವಾ ಕಾನೂನಿನ ಅಂಚಿನ ವಿಕೃತ ಅನ್ವಯದ ಮೂಲಕ) ದಾಳಿ ಮಾಡುವುದು ಹಿಂದಿನ ಅವಧಿಯಲ್ಲೇ ಆರಂಭವಾಗಿದ್ದು, ಕಚೇರಿಗಳ ಅಥವಾ ಒಡೆಯರ ಅಥವಾ ನಿರ್ದೇಶಕರ ಮನೆಗಳ ಮೇಲೆ ಇಡಿ ದಾಳಿ/ತಪಾಸಣೆ ಮಾಡಿ ಕಿರುಕುಳ ಕೊಡುವುದು ಮುಂದುವರೆದಿದೆ. ಹವಾಲಾ, ವಿದೇಶಿ ವಿನಿಮಯ ನಿಯಮಗಳ ಉಲ್ಲಂಘನೆ, ಕಪ್ಪು ಹಣದ ಚಲಾವಣೆ ಮುಂತಾದ "ಆರ್ಥಿಕ ಅಪರಾಧ"ಗಳನ್ನು ಮಾಡಿವೆ ಎಂದು ಈ ಕೇಂದ್ರೀಯ ಸಂಸ್ಥೆಗಳು ಹಾಗೂ ಸದಾ ಸರಕಾರದ ಬೋಪರಾಕು ಹೇಳುವ ಮಾಧ್ಯಮಗಳು ಯಾವುದೇ ಪುರಾವೆ ಇಲ್ಲದೆ ಅಪಪ್ರಚಾರ ಮಾಡುವುದೂ ಮುಂದುವರೆದಿದೆ. ಮಾಧ್ಯಮಗಳ ಮೇಲೆ ದಾಳಿ ನಡೆಸಲು ತಿದ್ದುಪಡಿಯಾದ ಟೆಲಿಕಮ್ಯುನಿಕೇಶನ್ಸ್ ಕಾಯಿದೆ, ಐಟಿ ಕಾಯಿದೆಯ ನಿಬಂಧನೆಗಳು ಮತ್ತು ಬ್ರಾಡ್‌ಕಾಸ್ಟಿಂಗ್ ಮಸೂದೆಗಳನ್ನು ಬಳಸಲಾಗುತ್ತಿದೆ.

ಆದರೆ ಇಂತಹ ಬೆದರಿಕೆಗಳು ಕೆಲಸ ಮಾಡದಿದ್ದಾಗ, ಈ ಹುಸಿ ಆಪಾದನೆಗಳನ್ನು ರುಜುವಾತು ಮಾಡುವುದು ಕಷ್ಟವಾದಾಗ, ಮಾಧ್ಯಮ ಸಂಸ್ಥೆಗಳ ಮೇಲೆ ಹೊಸ ಅಸ್ತ್ರ ಬಳಸಲು ಆರಂಭವಾಗಿದೆ. 'ನ್ಯೂಸ್‌ಕ್ಲಿಕ್' ಮೇಲೆ ಇಡಿ ಅಸ್ತ್ರ ವಿಫಲವಾದಾಗ ಚೀನಾದ ಪರವಾಗಿ ಭಾರತ–ವಿರೋಧ ಪ್ರಚಾರ ಮಾಡಿದ 'ರಾಷ್ಟ್ರ ಸುರಕ್ಷತೆಗೆ ಅಪಾಯ'ದ ಆಪಾದನೆಯ ಮೇಲೆ ಯುಎಪಿಎ ಬಳಸಿ, ಸ್ಥಾಪಕ ಮುಖ್ಯ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರನ್ನು ಬಂಧಿಸಲಾಯಿತು. ಮಾತ್ರವಲ್ಲ 'ನ್ಯೂಸ್‌ಕ್ಲಿಕ್' ಕಚೇರಿಗೆ ಬೀಗ ಜಡಿದು, ಸಂಸ್ಥೆಯ ಮತ್ತು ಅದರ ಉದ್ಯೋಗಿಗಳಾದ ಪತ್ರಕರ್ತರ ಮತ್ತು ಅವರ ಮನೆಯವರ ಇಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಯಿತು. ಸಂಸ್ಥೆಯ ಬ್ಯಾಂಕ್ ಅಕೌಂಟನ್ನೂ ಸ್ಥಗಿತಗೊಳಿಸಿ ಸಂಸ್ಥೆ ಕೆಲಸ ಮಾಡದಂತೆ ಮಾಡಲಾಯಿತು. ಪ್ರಬೀರ್ ಪುರಕಾಯಸ್ಥ ಅವರನ್ನು ಬಂಧಿಸಿ ಹಲವು ತಿಂಗಳುಗಳ ಕಾಲ, ಜಾಮೀನು ಪಡೆಯಲು ಹಲವು ಪ್ರಯತ್ನಗಳ ನಂತರ ಸುಪ್ರೀಂ ಕೋರ್ಟು ಜಾಮೀನು ಕೊಡುವವರೆಗೆ, ಜೈಲಿನಲ್ಲಿ ಇಡಲಾಯಿತು. ಉತ್ತರ ಪ್ರದೇಶದ ಹಥರಸ್‌ನ ದಲಿತ ಹುಡುಗಿಯ ಗ್ಯಾಂಗ್ ರೇಪ್ ಕುರಿತು ವರದಿ ಮಾಡಲು ತೆರಳುತ್ತಿದ್ದಾಗ ಕೇರಳದ ಪತ್ರಕರ್ತ ಕಪ್ಪನ್ ಅವರನ್ನು ಸಹ ಯುಎಪಿಎ ಅಡಿ ಬಂಧಿಸಲಾಯಿತು. ಅವರು ನಿಷೇಧಿತ ಪಿಎಫ್‌ಐ ಸದಸ್ಯರೆಂಬ ಸುಳ್ಳು ಆಪಾದನೆ ಹಾಕಲಾಯಿತು. ಅವರಿಗೂ ಸುಪ್ರೀಂ ಕೋರ್ಟು ಜಾಮೀನು ಕೊಡುವವರೆಗೆ 2 ವರ್ಷಕ್ಕಿಂತಲೂ ಹೆಚ್ಚಿನ ಕಾಲ ಜೈಲಿನಲ್ಲಿದ್ದರು. ದೊಡ್ಡ ಇಂಗ್ಲಿಷ್ ಸುದ್ದಿ ಟಿವಿ ಚಾನೆಲುಗಳಲ್ಲಿ ಬಿಜೆಪಿ ಪಕ್ಷ/ಸರಕಾರಗಳ 'ಗೋದಿ' (ಮುದ್ದಿನ ಮಡಿಲ ಕೂಸು) ಆಗದೆ ಸ್ವತಂತ್ರ ಮಾಧ್ಯಮವಾಗಿದ್ದ ಎನ್‌ಡಿಟಿವಿಯನ್ನು ಅದರ ಮಾಲಿಕರಾಗಿದ್ದ ಪ್ರಣಯ್ ರಾಯ್ ದಂಪತಿಗಳ ಮೇಲೆ ಹಲವು ಕೇಸು ಜಡಿಯುವುದರ ಜತೆಗೆ, ಶೇರು ಮಾರುಕಟ್ಟೆಯ ನಿಯಮಗಳಲ್ಲಿನ ತೂತುಗಳನ್ನು ಬಳಸಿ, ಕಾನೂನುಬಾಹಿರತೆಯ ಅಂಚಿನಲ್ಲಿರುವ ಪರೋಕ್ಷ ವಿಧಾನಗಳ ಮೂಲಕ ಅದಾನಿ ಖರೀದಿಸಿ, ಈಗ ಅದೂ 'ಗೋದಿ' ಮೀಡಿಯಾವಾಗಿದ್ದು ಈ ಅವಧಿಯ ಇನ್ನೊಂದು ಕಳವಳಕಾರಿ ಬೆಳವಣಿಗೆ. ಇತೀಚೆಗೆ ಪ್ರಣಯ್ ರಾಯ್ ದಂಪತಿಗಳ ಮೇಲೆ ಹಲವು ವರ್ಷಗಳಿಂದ ನಡೆಯುತ್ತಿದ್ದ ಎಲ್ಲ ಕೇಸುಗಳಿಗೆ ಪುರಾವೆಯಿಲ್ಲವೆಂದು ಅವುಗಳನ್ನು ಹಿಂತೆಗೆದುಕೊಳ್ಳಲಾಯಿತು. ಎನ್‌ಡಿಟಿವಿಯ ಒಡೆತನವನ್ನು ಪ್ರಣಯ್ ರಾಯ್ ದಂಪತಿಗಳಿಂದ ಕಿತ್ತುಕೊಂಡು ಅದಾನಿಗೆ ಕೊಡುವುದಷ್ಟೇ ಈ ಪ್ರಕರಣದ ಮುಖ್ಯ ಉದ್ದೇಶವಾಗಿತ್ತು ಎಂದು ಇದರಿಂದ ಸ್ಪಷ್ಟವಾಗಿದೆ.

ಒಟ್ಟು 114 ಕೋಟಿ ವೀಕ್ಷಣೆ ಪ್ರಸಾರ ಕಂಡಿರುವ 85 ಲಕ್ಷ ಬಳಕೆದಾರರು ಚಾನೆಲ್‌ಗಳಿಗೆ ಚಂದಾದಾರರಾಗಿದ್ದ ಎಂಟು ಯೂಟ್ಯೂಬ್ ಚಾನೆಲ್‌ಗಳನ್ನು ಅಗಸ್ಟ್ 2022ರಲ್ಲಿ 'ಸುಳ್ಳು ಸುದ್ದಿ ಪ್ರಸಾರ' ಮಾಡುತ್ತಿದ್ದ ಕಾರಣಕ್ಕೆ ಕೇಂದ್ರ ಸರ್ಕಾರವು ನಿಷೇಧಗೊಳಿಸಿದೆ. ಭಾರತದ ರಾಷ್ಟ್ರೀಯ ಭದ್ರತೆ, ವಿದೇಶಿ ಸಂಬಂಧಗಳು ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದಂತೆ ತಪ್ಪು ಮಾಹಿತಿ ಹರಡಲಾಗಿದೆ ಎಂದು ಆರೋಪ ಮಾಡಿ ಯೂಟ್ಯೂಬ್ ಚಾನೆಲ್‌ಗಳನ್ನು ನಿರ್ಬಂಧಿಸಲು ಕೇಂದ್ರ ಸರ್ಕಾರ ಆದೇಶಿಸಿದೆ. ನಿಷೇಧಿತ ಚಾನೆಲ್ ಗಳಲ್ಲಿ ಲೋಕತಂತ್ರ ಟಿವಿ, ಯು ಆಂಡ್ ವಿ ಟಿವಿ, ಎಎಂ ರಜ್ವಿ, ಗೌರವಶಾಲಿ ಪವನ್ ಮಿಥಿಲಾಂಚಲ್, ಸೀ ಟಾಪ್ 5 ಟಿಎಚ್, ಸರ್ಕಾರಿ ಅಪ್ ಡೇಟ್, ಸಬ್ ಕುಚ್ ದೇಕೋ ಸೇರಿವೆ.

ಬಿಜೆಪಿಗೆ ಲೋಕಸಭಾ ಚುನಾವಣೆಗಳಲ್ಲಿ ಹಲವು ಪ್ರಮುಖ ಹಿಂದಿ ಪತ್ರಕರ್ತರ ಅಥವಾ ಸುದ್ದಿಸಂಸ್ಥೆಗಳ ಸ್ವತಂತ್ರ ಯೂಟ್ಯೂಬ್ ಗಳ ಅಪಾಯಗಳನ್ನು ಗ್ರಹಿಸಿ ಚುನಾವಣೆಯ ಮೊದಲು ಬೋಲ್ತಾ ಹಿಂದುಸ್ತಾನ್, ನೇಶನಲ್ ದಸ್ತಕ್ ನಂತಹ ಹಲವು ಯೂಟ್ಯೂಬ್ ಚಾನೆಲುಗಳನ್ನು ವಾರ್ತಾ–ಪ್ರಚಾರ ಇಲಾಖೆ ಬ್ಲಾಕ್ ಮಾಡಿತು. ಲೋಕಹಿತ ಮುಂತಾದ ಹಲವು ಚಾನೆಲುಗಳಿಗೆ ಸರಕಾರದ ಒತ್ತಡದಿಂದಾಗಿ ಯೂಟ್ಯೂಬ್, ಅವುಗಳ ಪ್ರಸಾರ ಸಂಖ್ಯೆಗೆ ಅನುಸಾರವಾಗಿ ಹಣ ಕೊಡಲು ನಿರಾಕರಿಸಿತು. ಪುಟ 12 ಕ್ಕೆ






# ಭಾರತ–ಚೀನಾ ಸಂಬಂಧಗಳನ್ನು ಸಾಮಾನ್ಯೀಕರಣಗೊಳಿಸಲು–ಪ್ರಮುಖ ಹೆಜ್ಜೆ

**ಪ್ರಕಾಶ್ ಕಾರತ್**

ನೈಜ ಗಡಿ ರೇಖಾ ನಿಯಂತ್ರಣ, ಅಂದರೆ ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (LAC) ಉದ್ದಕ್ಕೂ ಗಸ್ತು ತಿರುಗುವ ವ್ಯವಸ್ಥೆಗಳ ಕುರಿತು ಭಾರತ ಮತ್ತು ಚೀನಾ ನಡುವೆ ಒಂದು ಒಪ್ಪಂದಕ್ಕೆ ಬರಲಾಗಿದೆ ಎಂದು ಭಾರತ ಸರ್ಕಾರವು ಅಕ್ಟೋಬರ್ 21 ರಂದು ಘೋಷಿಸಿದೆ. ಇದು ಸ್ವಾಗತಾರ್ಹ ಬೆಳವಣಿಗೆಯಾಗಿದ್ದು, ಆಶಾದಾಯಕವಾಗಿದೆ. ಇದು ಎರಡು ನೆರೆಯ ದೇಶಗಳ ನಡುವಿನ ವಾತ್ಸಲ್ಯಪೂರ್ವ ಸಂಬಂಧಗಳನ್ನು ಸಾಮಾನ್ಯಗೊಳಿಸಲು ಉತ್ತಮ ಬೆಳವಣಿಗೆ ಎಂದು ಪರಿಗಣಿಸಬಹುದು.

2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ನಡೆದ ಗಡಿ ಘರ್ಷಣೆಯ ನಂತರ ಭಾರತ ಮತ್ತು ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧಗಳು ಹದಗೆಟ್ಟಿದ್ದವು. ಈ ಘರ್ಷಣೆಗಳು ಪೂರ್ಣ ಪ್ರಮಾಣದ ಯುದ್ಧಕ್ಕೆ ಕಾರಣವಾಗದಂತೆ ನೋಡಿಕೊಳ್ಳಲು ಎರಡೂ ದೇಶಗಳು ಕಾರ್ಯನಿರ್ವಹಿಸಿದ್ದವು. 2020ರಿಂದ ಮಿಲಿಟರಿ ಮತ್ತು ರಾಜತಾಂತ್ರಿಕ ಮಟ್ಟದಲ್ಲಿ 31 ಸುತ್ತಿನ ಮಾತುಕತೆಗಳನ್ನು ನಡೆಸಲಾಯಿತು. ಎರಡು ಕಡೆಯ ಕಾರ್ಪ್ಸ್ ಕಮಾಂಡರ್‌ಗಳು ಮಿಲಿಟರಿ ಮಟ್ಟದ ಮಾತುಕತೆಗಳನ್ನು ನಡೆಸಿದರೆ, ರಾಜತಾಂತ್ರಿಕ ಮಟ್ಟದ ಮಾತುಕತೆಗಳು ಭಾರತ–ಚೀನಾ ಗಡಿ ವ್ಯವಹಾರಗಳ ಕುರಿತು ಸಮಾಲೋಚನೆ ಮತ್ತು ಸಮನ್ವಯಕ್ಕಾಗಿ ವರ್ಕಿಂಗ್ ಮೆಕ್ಯಾನಿಸಂ (ಡಬ್ಲ್ಯುಎಂಸಿಸಿ) ಅಡಿಯಲ್ಲಿ ನಡೆದವು.

ಸಾಮಾನ್ಯ ಸಂಬಂಧಗಳನ್ನು ಮರುಸ್ಥಾಪಿಸುವ ಅಗತ್ಯವನ್ನು ಅರಿತುಕೊಂಡ ರಾಜಕೀಯ ನಾಯಕತ್ವವು, ಮಧ್ಯಸ್ಥಿಕೆಯೊಂದಿಗೆ ಮಾತುಕತೆಗಳು ನಿರ್ಣಾಯಕ ಹಂತಕ್ಕೆ ತಂದರು. 'ಭಾರತ ಮತ್ತು ಚೀನಾ ನಡುವಿನ ಸ್ಥಿರ ಮತ್ತು ಶಾಂತಿಯುತ ಸಂಬಂಧಗಳು ಕೇವಲ ನಮ್ಮ ಎರಡು ದೇಶಗಳಿಗೆ ಮಾತ್ರವಲ್ಲದೆ ಇಡೀ ಪ್ರದೇಶ ಮತ್ತು ಜಗತ್ತಿಗೆ ಮುಖ್ಯವಾಗಿದೆ' ಎಂದು ಏಪ್ರಿಲ್ ನಲ್ಲಿ ಪ್ರಧಾನಿ ಮೋದಿ ಹೇಳಿದ್ದ ತಮ್ಮ ನಿಲುವನ್ನು ಇದೀಗ ಪುನರ್ ಪ್ರತಿಬಿಂಬಿಸಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ತಮ್ಮ ಚೀನಾದ ಸಹವರ್ತಿ ವಾಂಗ್ ಯಿ ಅವರನ್ನು ಜುಲೈ ಮತ್ತು ಆಗಸ್ಟ್ ಎರಡು ತಿಂಗಳ ಅಂತರದಲ್ಲಿ ಎರಡು ಬಾರಿ ಭೇಟಿಯಾದರು. ಸೆಪ್ಟೆಂಬರ್ ನಲ್ಲಿ, NSA ( ನ್ಯಾಷನಲ್ ಸೆಕ್ಯೂರಿಟಿ ಎಜೆನ್ಸಿ), ಅಜಿತ್ ದೋವಲ್ ರವರೊಂದಿಗೆ BRICS (ಬ್ರೆಜಿಲ್, ರಷ್ಯಾ, ಇಂಡಿಯಾ, ಚೀನಾ ಮತ್ತು ಸೌತ್ ಆಫ್ರಿಕಾ) ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯ ಬದಿಯಲ್ಲಿ ರಷ್ಯಾದ ಸೇಂಟ್ ಪೀಟರ್ಸ್ ಬರ್ಗ್ ನಲ್ಲಿ ವಾಂಗ್ ಯಿ ಅವರನ್ನು ಭೇಟಿಯಾದರು. ಇದರ ನಂತರ ಗಡಿ ಸಂಬಂಧಿತ WMCC (ವರ್ಕಿಂಗ್ ಮ್ಯಾಕಾನಿಸಂ ಪಾರ್ ಕನ್ಸಲ್ಟೇಷನ್ ಅಂಡ್ ಕೋಆರ್ಡಿನೇಷನ್)ನ ಮೂಲಕ ಬ್ಯಾಕ್–ಟು–ಬ್ಯಾಕ್ ಎರಡು ಸಭೆಗಳು ನಡೆದವು. ಈ ಹಿನ್ನೆಲೆಯಲ್ಲಿ ಜೈಶಂಕರ್ ಹೇಳಿಕೆಯಂತೆ, ಪ್ರಸ್ತುತ ಒಪ್ಪಂದವು "ಅತ್ಯಂತ ತಾಳ್ಮೆಯ ಮತ್ತು ಅತ್ಯಂತ ಪರಿಶ್ರಮದ ರಾಜತಾಂತ್ರಿಕತೆಯ ಉತ್ಪನ್ನ ಇದಾಗಿದೆ", ಇದು ದೇಶಗಳ ನಡುವಿನ ವಿವಾದಗಳ ಪರಿಹಾರಕ್ಕೆ ಸರಿಯಾದ ಮಾರ್ಗವಾಗಿದೆ ಎಂದಿರುವುದು ಪ್ರಸ್ತುತವಾಗಿದೆ.

ಈ ಎಲ್ಲಾ ರಾಜತಾಂತ್ರಿಕ ಪ್ರಯತ್ನಗಳು ರಷ್ಯಾದ ಕಜಾನ್ ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ಪಿಂಗ್ ನಡುವಿನ ದ್ವಿಪಕ್ಷೀಯ ಸಭೆಗೆ ದಾರಿ ಮಾಡಿಕೊಟ್ಟಿವೆ. ಈ ಸಭೆಯು ಮಹತ್ವದ್ದಾಗಿದೆ ಏಕೆಂದರೆ 2020ರಲ್ಲಿ ಗಡಿ ಬಿಕ್ಕಟ್ಟಿನ ನಂತರ ಉಭಯ ನಾಯಕರು ದ್ವಿಪಕ್ಷೀಯ ಸಭೆಯನ್ನು ನಡೆಸುತ್ತಿರುವುದು ಇದೇ ಮೊದಲ ಬಾರಿಯಾದ್ದರಿಂದ ಇದೊಂದು ಆಶಾದಾಯಕ ಬೆಳವಣಿಗೆ ಎನ್ನಬಹುದು.

ಭಾರತೀಯ ಬೂರ್ಜ್ವಾಗಳನ್ನು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು ಚೀನಾದೊಂದಿಗೆ ವ್ಯಾಪಾರ ಮಾಡುವ ಸಾಮರ್ಥ್ಯವನ್ನು ಸರಾಗಗೊಳಿಸುವ ಲಾಬಿಗೆ ಒತ್ತಾಯಿಸಿದೆ. ವಾಣಿಜ್ಯ ಸಚಿವಾಲಯದ ಮಾಹಿತಿಯ ಪ್ರಕಾರ, ಈ ಆರ್ಥಿಕ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 56.29 ಶತಕೋಟಿ ಡಾಲರ್ ಮೌಲ್ಯದ ಒಳಬರುವ ಸಾಗಣೆಗಳೊಂದಿಗೆ ಚೀನಾ ಭಾರತದ ಅಗ್ರ ಆಮದು ಮೂಲವಾಗಿ ಹೊರಹೊಮ್ಮಿದೆ. ಜಾಗತೀಕರಣಗೊಂಡ ಆರ್ಥಿಕ ಜಗತ್ತಿನ ಕ್ರಮದಲ್ಲಿ, ಆರ್ಥಿಕ ಸಹಕಾರವನ್ನು ಹೆಚ್ಚಿಸುವುದು ಎರಡೂ ದೇಶಗಳಿಗೆ ಪ್ರಯೋಜನಕಾರಿ ಎಂದು ಹೆಚ್ಚು ಗುರುತಿಸಲ್ಪಡಲಾಗಿದೆ. ಎಲೆಕ್ಟ್ರಿಕ್ ವಾಹನಗಳು (EV"ಗಳು), ಸ್ಮಾರ್ಟ್ ಫೋನ್ ಗಳು, ಸೌರ ಫಲಕಗಳು ಮತ್ತು ಔಷಧಗಳಂತಹ ಸರಕುಗಳ ಉತ್ಪಾದನೆಗೆ ಕೆಲವು ಕೈಗಾರಿಕೆಗಳನ್ನು ಭಾರತ ಸರ್ಕಾರವು ಉತ್ಪಾದನಾ ಕೇಂದ್ರವಾಗಿ ಪರಿವರ್ತಿಸಲು ಗುರುತಿಸಿದೆ. ಈ ಕೈಗಾರಿಕೆಗಳಲ್ಲಿ ಹೆಚ್ಚಿನವುಗಳಿಗೆ ಚೀನಾದೊಂದಿಗೆ ಆರ್ಥಿಕ ಸಂಬಂಧಗಳ ಮರುಸ್ಥಾಪನೆ ಅಗತ್ಯವಿರುತ್ತದೆ ಎಂಬುದು ಪ್ರಮುಖ ಅಂಶವಾಗಿದೆ.

ಜಂಟಿ ಉದ್ಯಮಗಳ ಮೂಲಕ ಉತ್ಪಾದನಾ ವಲಯದಲ್ಲಿ ಚೀನಾದ ಹೂಡಿಕೆಗಳಿಗೆ ಪ್ರಸ್ತುತ ನಕಾರಾತ್ಮಕ ನಿಲುವು ಬದಲಾಗಬೇಕು. 2023ರಲ್ಲಿ ಭಾರತೀಯ ಕಂಪನಿಯೊಂದಿಗೆ ಜಂಟಿ ಉದ್ಯಮದ ಮೂಲಕ ವಿಶ್ವದ ಅತಿದೊಡ್ಡ ಎಲೆಕ್ಟ್ರಿಕಲ್ ವಾಹನಗಳನ್ನು ಉತ್ಪಾದಿಸುವ ಚೀನಾದ ದೈತ್ಯ ಕಂಪನಿ ಬಿಲ್ಡ್ ಇವರ್ ಡ್ರೀಮ್(BYD) ನಿಂದ ಒಂದು ಶತಕೋಟಿ ಡಾಲರ್ ಹೂಡಿಕೆಯನ್ನು ತಿರಸ್ಕರಿಸಲಾಗಿತ್ತು. ಎಲೆಕ್ಟ್ರಿಕ್ ವಾಹನಗಳು ಮತ್ತು ಬ್ಯಾಟರಿಗಳನ್ನು ತಯಾರಿಸಲು ಸ್ಥಾವರವನ್ನು ಸ್ಥಾಪಿಸುವುದರಿಂದ ಭಾರತವು ಇತ್ತೀಚಿನ ತಂತ್ರಜ್ಞಾನ ಮತ್ತು ಉತ್ಪಾದನಾ ಪ್ರಕ್ರಿಯೆಗಳನ್ನು ಪ್ರವೇಶಿಸಲು ಇದು ಸಹಾಯ ಮಾಡುತ್ತಿತ್ತು. ಇದರ ಕುರಿತಂತೆ ಭಾರತ ತೆಗೆದುಕೊಂಡಿದ್ದ ನಕಾರಾತ್ಮಕ ನಿಲುವನ್ನು ಇದೀಗ ಬದಲಾಯಿಸಿಕೊಳ್ಳುವುದು ಸಾಧ್ಯವಿದೆ.

ವೇಗವಾಗಿ ಬದಲಾಗುತ್ತಿರುವ ಭೌಗೋಳಿಕ–ರಾಜಕೀಯ ಪರಿಸ್ಥಿತಿಯಿಂದಾಗಿ ಉಭಯ ದೇಶಗಳ ನಡುವಿನ ಸಂಬಂಧಗಳ ಸಾಮಾನ್ಯೀಕರಣದ ಅಗತ್ಯವನ್ನು ಸಹ ಅರ್ಥೈಸಿಕೊಳ್ಳಲಾಗಿದೆ. ಉಕ್ರೇನ್ ನಲ್ಲಿನ ಯುದ್ಧ ಮತ್ತು ಗಾಜಾ ಮತ್ತು ಪಶ್ಚಿಮ ಏಷ್ಯಾದ ಮೇಲಿನ ಇಸ್ರೇಲಿ ಆಕ್ರಮಣವು ಸಂಪನ್ಮೂಲಗಳ ಪೂರೈಕೆ, ವ್ಯಾಪಾರ ಮಾರ್ಗಗಳು ಮತ್ತು ದೇಶಗಳ ನಡುವಿನ ಸಂಬಂಧಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅನೇಕ ದೇಶಗಳು ತಮ್ಮ ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ (ಯುಎಸ್) ಹಾಕುವ ವಿಷತ್ವವನ್ನು ಅರಿತುಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ BRICS+ನಂತಹ ಬ್ಲಾಕ್ ಗಳು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ ಮತ್ತು ಅನೇಕ ದೇಶಗಳು ಅಂತಹ ಗುಂಪುಗಳಿಗೆ ಸೇರಲು ತಮ್ಮ ಇಚ್ಛೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿವೆ. ಸೌದಿ ಅರೇಬಿಯಾ ಮತ್ತು ಇರಾನ್, ಪಶ್ಚಿಮ ಏಷ್ಯಾದ ಪ್ರಾದೇಶಿಕ ಶಕ್ತಿ ಕೇಂದ್ರಗಳನ್ನು ಇತ್ತೀಚೆಗೆ ಈ ಗುಂಪಿನ ಸದಸ್ಯರನ್ನಾಗಿ ಮಾಡಲಾಗಿದೆ. ಭಾರತವು ಈ ಗುಂಪಿನಲ್ಲಿ ಹೊರಗಿನವರಾಗಲು ಸಾಧ್ಯವಿಲ್ಲ. ಅದರ ಸುತ್ತಲೂ ನಡೆಯುತ್ತಿರುವ ಈ ಭೌಗೋಳಿಕ–ರಾಜಕೀಯ ಬದಲಾವಣೆಗಳು. ಆದ್ದರಿಂದ ವಿರೋಧಿ ಸಂಬಂಧವನ್ನು ಹೊಂದಿರುವುದಕ್ಕಿಂತ ಹೆಚ್ಚಾಗಿ ಬಣದ ಸ್ಥಾಪಕ ಸದಸ್ಯರೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳುವುದು ಸಹಜ.

2020ರಲ್ಲಿ ಗಡಿ ಘರ್ಷಣೆಯ ನಂತರ, ಭಾರತ ಸರ್ಕಾರವು ಯುಎಸ್ ಜೊತೆಗಿನ ತನ್ನ ಸಂಬಂಧವನ್ನು ಮತ್ತಷ್ಟು ಬಲಪಡಿಸಿತು. ಭಾರತ–ಚೀನಾ ವಿವಾದಿತ ಗಡಿಗೆ ಸಂಬಂಧಿಸಿದಂತೆ ನೈಜ–ಸಮಯದ ಗುಪ್ತಚರ ಹಂಚಿಕೆ ಸೇರಿದಂತೆ ವಿವಿಧ ರಕ್ಷಣಾ ಸಹಕಾರ ಒಪ್ಪಂದಗಳಿಗೆ ಸಹಿ ಹಾಕಿದೆ. ನಮ್ಮ ಹಿಮಾಲಯದ ಗಡಿಯಲ್ಲಿ ಸೈನಿಕರ ಚಲನವಲನಗಳನ್ನು ಪತ್ತೆಹಚ್ಚಲು 31 ಸಶಸ್ತ್ರ ಗಾರ್ಡಿಯನ್ ಡ್ರೋನ್‌ಗಳನ್ನು ಖರೀದಿಸಲು ಭಾರತಕ್ಕೆ 3 ಶತಕೋಟಿ ಡಾಲರ್‌ಗಿಂತ ಹೆಚ್ಚಿನ ಒಪ್ಪಂದವನ್ನು ಅದು ಒಳಗೊಂಡಿದೆ. ಭಾರತವು ಆಸ್ಟ್ರೇಲಿಯಾ ಮತ್ತು ಜಪಾನ್ ಅನ್ನು ಒಳಗೊಂಡಿರುವ ಅಮೆರಿಕಾ ನೇತೃತ್ವದ ಕ್ವಾಡ್ ಗುಂಪಿನ ಸದಸ್ಯ ರಾಷ್ಟ್ರವಾಗಿದೆ. ಆರ್‌ಎಸ್‌ಎಸ್ ಪತ್ರಿಕೆ 'ದಿ ಆರ್ಗನೈಸರ್' (ಸೆಪ್ಟೆಂಬರ್ 22, 2024), ಅಫ್ಘಾನಿಸ್ತಾನದಿಂದ ಯುಎಸ್ ವಾಪಸಾತಿ ಮತ್ತು ಅದರ ನೀತಿ ನಿಲುವುಗಳ ವಿಶ್ವಾಸಾರ್ಹತೆಯ ಹಿನ್ನೆಲೆಯಲ್ಲಿ, ವಿಶೇಷವಾಗಿ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಅಧ್ಯಕ್ಷರಾದರೆ, ಸರ್ಕಾರವು ವಿವೇಕಯುತವಾಗಿ, ಈ ಗಡಿ ವಿವಾದವನ್ನು ಯಥಾಸ್ಥಿಗೆ ತರಬಹುದು ಎಂದು ಕಾಮೆಂಟ್ ಮಾಡಿತ್ತು. ಇದು ವಿವಾದವನ್ನು ಮತ್ತಷ್ಟು ಜಟಿಲಗೊಳಿಸಿತ್ತು.

ಭಾರತ ಮತ್ತು ಚೀನಾ 3,400 ಕಿಲೋಮೀಟರ್‌ಗಿಂತಲೂ ಹೆಚ್ಚು ಉದ್ದದ ಗಡಿಯನ್ನು ಹಂಚಿಕೊಂಡಿವೆ. ಗಡಿಯ ಹೆಚ್ಚಿನ ಭಾಗವು ಸರಿಯಾಗಿ ಗುರುತಿಸಲ್ಪಟ್ಟಿಲ್ಲ ಮತ್ತು ಎರಡು ದೇಶಗಳ ನಡುವಿನ ದೀರ್ಘಕಾಲದ ವಿವಾದಕ್ಕೆ ಕಾರಣವಾಗಿದೆ. ಭಾರತ–ಚೀನಾ ಗಡಿಯಲ್ಲಿನ ವಿವಾದಗಳ ಹರವುಗಳನ್ನು ಪರಿಹರಿಸಲು ಕಾರ್ಯವಿಧಾನಗಳನ್ನು ಪುನರುಜ್ಜೀವನಗೊಳಿಸುವುದು ಈಗ ಅಗತ್ಯವಾಗಿದೆ. 1993ರ ಗಡಿ ಶಾಂತಿ ಮತ್ತು ನೆಮ್ಮದಿ ಒಪ್ಪಂದ ಮತ್ತು 2013ರ ಗಡಿ ರಕ್ಷಣಾ ಸಹಕಾರ ಒಪ್ಪಂದವನ್ನು ನಿರ್ಮಿಸಬೇಕು. ಅದೇ ಸಮಯದಲ್ಲಿ, ಮೋದಿ ಸರ್ಕಾರವು ಆರ್ಥಿಕ ಸಂಬಂಧಗಳನ್ನು ಮತ್ತು ಜನರಿಗೆ ವಿಸ್ತರಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು–ಜನರ ವಿನಿಮಯ, ಉತ್ಪಾದನಾ ವಲಯದಲ್ಲಿ ಹೂಡಿಕೆಗಳನ್ನು ಪಡೆಯಲು ನಿರ್ದಿಷ್ಟ ಗಮನವನ್ನು ನೀಡುವುದು ನಮ್ಮ ತಂತ್ರಜ್ಞಾನ ಮತ್ತು ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ.



***ಅನು:ನಾಗರಾಜ ನಂಜುಂಡಯ್ಯ***

ಮರಕುಂಬಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ, ಕೊಪ್ಪಳದ ಜಿಲ್ಲಾ ಸೆಷನ್ಸ್ ನ್ಯಾಯಾಲಯ 2024ರ ಅಕ್ಟೋಬರ್ 24ರಂದು ಪ್ರಕಟಿಸಿದ ಮಹತ್ವದ ತೀರ್ಪಿನಲ್ಲಿ 101 ಅಪರಾಧಿಗಳಲ್ಲಿ 98 ಜನರಿಗೆ ಜೀವಾವಧಿ ಶಿಕ್ಷೆ, 3 ಜನರಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗಿದೆ. ಈ ತೀರ್ಪು ಚರಿತ್ರಾರ್ಹವಾದುದು. ಇದು ರಾಜ್ಯದ ಎಲ್ಲ ದಲಿತರಿಗೂ, ಸಾಮಾಜಿಕ ತಾರತಮ್ಯದ ವಿರುದ್ಧ ಧ್ವನಿ ಎತ್ತುತ್ತಿರುವ ಎಲ್ಲ ಎಡ ಮತ್ತು ಪ್ರಗತಿಪರ ಶಕ್ತಿಗಳಿಗೆ ಮತ್ತಷ್ಟು ಬಲವನ್ನು ತಂದು ಕೊಟ್ಟಿದೆ. ಮಾತ್ರವಲ್ಲ, ಜಾತಿ ದೌರ್ಜನ್ಯದಲ್ಲಿ ತೊಡಗಿರುವವರಿಗೆ ಎಚ್ಚರಿಕೆಯ ಘಂಟೆಯಾಗಿದೆ. ಈ ಪ್ರಕರಣವನ್ನು 'ಚಿತ್ರಮಂದಿರದಲ್ಲಿ ನಡೆದ ಸವರ್ಣೀಯ ಮತ್ತು ದಲಿತ ಯುವಕರ ನಡುವಿನ ಗಲಾಟೆ, ಇದಕ್ಕೆ ಪ್ರತೀಕಾರವಾಗಿ ದಲಿತರ ಮೇಲಿನ ದಾಳಿ' ಎಂಬಷ್ಟಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಸಾವಿರಾರು ವರ್ಷಗಳಿಂದ ಹಳ್ಳಿಗಳಲ್ಲಿ ಮಡುಗಟ್ಟಿರುವ ಕ್ರೂರ ಮತ್ತು ಅನಿಷ್ಟ ಜಾತಿ ಪದ್ಧತಿಯ ಕರಾಳ ರೂಪವಾಗಿ ಇದು ವ್ಯಕ್ತವಾಗಿದೆ ಎಂಬುದನ್ನು ಗುರುತಿಸಬೇಕು.



# 98 ಜನರಿಗೆ ಜೀವಾವಧಿ ಶಿಕ್ಷೆ 3 ಜನರಿಗೆ ಕಠಿಣ ಕಾರಾಗೃಹ
# 'ಮರಕುಂಬಿ' ಪ್ರಕರಣ: ಐತಿಹಾಸಿಕ ತೀರ್ಪು

ಎಚ್.ಆರ್. ನವೀನ್‌ಕುಮಾರ್, ಹಾಸನ



ಮರಕುಂಬಿ ಗ್ರಾಮದಲ್ಲಿ 2014ರ ಆಗಸ್ಟ್ 28ರಂದು ದಲಿತರ ಮೇಲೆ ಸಾಮೂಹಿಕ ಹಲ್ಲೆ ಹಾಗೂ ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಪ್ರಕರಣ

ಕೊಪ್ಪಳ ಜಿಲ್ಲೆಯ ಮರಕುಂಬಿ ಗ್ರಾಮದಲ್ಲಿ 2014ರ ಆಗಸ್ಟ್ 28ರಂದು ನಡೆದಿದ್ದ ದಲಿತರು ಮತ್ತು ದಲಿತ ಕೇರಿಯ ಮೇಲೆ ಸಾಮೂಹಿಕ ಹಲ್ಲೆ ಹಾಗೂ ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ, 10 ವರ್ಷಗಳ ಕಾನೂನು ಹೋರಾಟದ ನಂತರ 101 ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಇವರಲ್ಲಿ 98 ಜನರಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ 5000 ರೂ. ದಂಡ ವಿಧಿಸಲಾಗಿದೆ. 3 ಜನರಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 2000 ರೂ. ದಂಡ ವಿಧಿಸಲಾಗಿದೆ. ಕೊಪ್ಪಳದ ಜಿಲ್ಲಾ ಸೆಷನ್ಸ್ ನ್ಯಾಯಾಲಯ 2024ರ ಅಕ್ಟೋಬರ್ 24ರಂದು ಪ್ರಕಟಿಸಿದ ಮಹತ್ವದ ಈ ತೀರ್ಪು ಚರಿತ್ರಾರ್ಹವಾದುದು. ದಲಿತರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಕರ್ನಾಟಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ಇಷ್ಟು ದೊಡ್ಡ ಸಂಖ್ಯೆಯ ಜನರಿಗೆ ಜೀವಾವಧಿ ಶಿಕ್ಷೆಯನ್ನು ನೀಡಿರುವುದು ಇದೇ ಮೊದಲು ಎಂಬ ಸುದ್ದಿಗಳು ಎಲ್ಲೆಡೆ ಹರಿದಾಡುತ್ತಿವೆ.

**ಏನೀ ಮರಕುಂಬಿ ಪ್ರಕರಣ?**

ಏನೀ ಮರಕುಂಬಿ ಪ್ರಕರಣ? ಇಂತಹ ತೀರ್ಪು ಬರಲು ಕಾರಣವೇನು? ಇದರ ಹಿಂದೆ ಏನೆಲ್ಲಾ ನಡೆದಿತ್ತು? ಇವುಗಳ ಕುರಿತು ಸ್ವಲ್ಪ ಬೆಳಕು ಚೆಲ್ಲುವ ಪ್ರಯತ್ನದ ಭಾಗವಾಗಿ ಈ ಬರಹ. ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿರುವಂತೆ ಈ ಪ್ರಕರಣದ ಮೂಲ 2014ರಲ್ಲಿ ಗಂಗಾವತಿಯ ಚಿತ್ರಮಂದಿರ ಒಂದರಲ್ಲಿ ಪುನಿತ್ ರಾಜ್ ಕುಮಾರ್ ಅವರ 'ಪವರ್' ಸಿನಿಮಾ ವೀಕ್ಷಣೆಗೆಂದು ಮರಕುಂಬಿಯ ದಲಿತ ಯುವಕರು ಹೋಗಿದ್ದಾಗ, ಅಲ್ಲಿ ದಲಿತ ಯುವಕರು ಹಾಗೂ ಸವರ್ಣೀಯ ಯುವಕರ ನಡುವೆ ಗಲಾಟೆ ನಡೆಯಿತು. ಈ ಗಲಾಟೆ ವಿಭಿನ್ನ ತಿರುವು ತೆಗೆದುಕೊಂಡಿತು. ಇದು ಊರಿನ ಸವರ್ಣೀಯರ ನಡುವೆ ಸುದ್ದಿಯಾಯಿತು. ಸುಮಾರು 150 ಜನ ಸವರ್ಣೀಯರು ಮರಕುಂಬಿಯ ದಲಿತ ಕಾಲೋನಿಗೆ ನುಗ್ಗಿದರು. ಮಹಿಳೆಯರು, ಮಕ್ಕಳು ವೃದ್ಧರೆನ್ನದೆ ಕೈಗೆ ಸಿಕ್ಕ ಎಲ್ಲರ ಮೇಲೂ ಮಾರಣಾಂತಿಕ ಹಲ್ಲೆ ಮಾಡಿದರು. ಗುಡಿಸಲುಗಳಿಗೆ ಬೆಂಕಿಯಿಟ್ಟು ಸುಟ್ಟು ಬೂದಿ ಮಾಡಿದರು. ಆಗ ಸವರ್ಣೀಯರ ಮೇಲೆ ಧಾಖಲಾಗಿದ್ದ ಈ ಪ್ರಕರಣಕ್ಕೆ ಸಂಬಂಧಿಸಿ 10 ವರ್ಷಗಳ ನಂತರ ಇಂತಹದೊಂದು ಮಹತ್ತರ ತೀರ್ಪನ್ನು ನೀಡಿದೆ ಎಂಬುದು ಈಗ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸುದ್ದಿ.

**ಸಾವಿರಾರು ವರ್ಷಗಳಿಂದ ಮಡುಗಟ್ಟಿರುವ ಕ್ರೂರ ಮತ್ತು ಅನಿಷ್ಟ ಜಾತಿ ಪದ್ಧತಿ**

ಈ ಪ್ರಕರಣವನ್ನು 'ಚಿತ್ರಮಂದಿರದಲ್ಲಿ ನಡೆದ ಸವರ್ಣೀಯ ಮತ್ತು ದಲಿತ ಯುವಕರ ನಡುವಿನ ಗಲಾಟೆ, ಇದಕ್ಕೆ ಪ್ರತೀಕಾರವಾಗಿ ದಲಿತರ ಮೇಲಿನ ದಾಳಿ' ಎಂಬಷ್ಟಕ್ಕೆ ಈ ಪ್ರಕರಣವನ್ನು ಸೀಮಿತಗೊಳಿಸುವುದು ಸರಿಯಲ್ಲ. ಸಾವಿರಾರು ವರ್ಷಗಳಿಂದ ಹಳ್ಳಿಗಳಲ್ಲಿ ಮಡುಗಟ್ಟಿರುವ ಕ್ರೂರ ಮತ್ತು ಅನಿಷ್ಟ ಜಾತಿ ಪದ್ಧತಿಯ ಕರಾಳ ರೂಪವಾಗಿ ಇದು ವ್ಯಕ್ತವಾಗಿದೆ ಎಂಬುದನ್ನು ಗುರುತಿಸಬೇಕು. ಅವಿಭಜಿತ ರಾಯಚೂರು ಜಿಲ್ಲೆಯಲ್ಲಿದ್ದ ಗಂಗಾವತಿ ತಾಲ್ಲೂಕು (ಈಗ ಕೊಪ್ಪಳ ಜಿಲ್ಲೆ) ಅತಿ ಹೆಚ್ಚು ದಲಿತರಿರುವ ಮತ್ತು ಬಡ ಭೂಹೀನ ಕೂಲಿಕಾರರಿರುವ ಮತ್ತು ಪಾಳೇಗಾರಿ ಮೌಲ್ಯಗಳನ್ನು ಮೈತುಂಬ ಹೊದ್ದು ಮಲಗಿರುವ ತಾಲ್ಲೂಕು. ಇಲ್ಲಿ ದಲಿತರ ಮೇಲಿನ ದೌರ್ಜನ್ಯ, ಹಲ್ಲೆ, ಜಾತಿ ನಿಂದನೆ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ.

**21 ವರ್ಷಗಳ ಹಿಂದೆಯೂ ನಡೆದಿತ್ತು ಜಾತಿ ದೌರ್ಜನ್ಯ**

ಸುಮಾರು 400 ಕುಟುಂಬಗಳಿರುವ ಮರಕುಂಬಿ ಗ್ರಾಮದಲ್ಲಿ 60 ದಲಿತ ಕುಟುಂಬಗಳಿವೆ. ಇನ್ನುಳಿದಂತೆ ಎಲ್ಲಾ ಜಾತಿಗಳಿಗೆ ಸೇರಿದ ಸವರ್ಣೀಯರೂ ಈ ಗ್ರಾಮದಲ್ಲಿದ್ದಾರೆ. ದಲಿತರ ಬದುಕನ್ನು ಹಸನು ಮಾಡುವ ಉದ್ದೇಶದಿಂದ ವಿವಿಧ ಸರ್ಕಾರಗಳು ದಲಿತರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳಲ್ಲಿ ದಲಿತ ಕೇರಿಗಳಲ್ಲಿ ಮದುವೆ, ಮತ್ತಿತರೆ ಸಮಾರಂಭಗಳನ್ನು ನಡೆಸಿಕೊಳ್ಳಲು ಅನುಕೂಲವಾಗುವಂತೆ, ಸಮಾಜ ಕಲ್ಯಾಣ ಇಲಾಖೆಯಿಂದ ಮರಕುಂಬಿಯ ದಲಿತ ಕೇರಿಯಲ್ಲಿ ಸರ್ಕಾರಿ ಸಮುದಾಯ ಭವನವನ್ನು ನಿರ್ಮಿಸಲಾಗಿತ್ತು. ಆದರೆ ಈ ಸಮುದಾಯ ಭವನವನ್ನು ದಲಿತರು ಬಳಕೆ ಮಾಡುವ ಮೊದಲೇ ಊರಿನ ಸಾಹುಕಾರ (ಸವರ್ಣೀಯ ಜಮೀನ್ದಾರ) ಊರಿಗೆ ಏನೇ ಬಂದರೂ ಅದನ್ನು ಮೊದಲು ನಾನೇ ಅನುಭವಿಸಬೇಕು ಎಂಬ ದೃಷ್ಟಿಯವನು. ಆ ಸಾಹುಕಾರ ತನ್ನ ಜಮೀನಿನಲ್ಲಿ ಬೆಳೆದಿದ್ದ ಸುಮಾರು 713 ಚೀಲ ನೆಲ್ಲನ್ನು (ಭತ್ತ) ಸಮುದಾಯ ಭವನದಲ್ಲಿ ತುಂಬಿಸಿ ಇಟ್ಟಿದ್ದ. ವರ್ಷಾನುಗಟ್ಟಲೆ ಈ ದಾಸ್ತಾನನ್ನು ಖಾಲಿ ಮಾಡುವ ಯಾವ ಯೋಚನೆಯನ್ನೂ ಸಾಹುಕಾರ ಮಾಡಲೇ ಇಲ್ಲ.

ಇದೇ ಸಂದರ್ಭದಲ್ಲಿ ಊರಿನ ದಲಿತ ಯುವಕರು ಒಂದೆಡೆ ಸೇರಿ ಸಭೆ ಮಾಡಿದರು. ನಂತರ ಊರಿನ ಹಿರಿಯರೊಂದಿಗೆ ಚರ್ಚಿಸಿ, ಸಮುದಾಯ ಭವನದಲ್ಲಿರುವ ಭತ್ತದ ಚೀಲಗಳನ್ನು ಖಾಲಿ ಮಾಡಿ ಸಮುದಾಯದ ಮದುವೆಯಂತಹ ಶುಭ ಕಾರ್ಯಕ್ರಮಗಳನ್ನು ನಡೆಸಲು ಅನುವು ಮಾಡಿಕೊಡಲು ಸಾಹುಕಾರರಿಗೆ ಮನವಿ ಮಾಡುವಂತೆ ಹಿರಿಯರಿಗೆ ಹೇಳಿದರು. ಇವರುಗಳ ನಡುವೆ ಚರ್ಚೆಯಾದ ಈ ಸುದ್ದಿ ಸಾಹುಕಾರನ ಕಿವಿಗೆ ಮುಟ್ಟಿತು. ಇದರಿಂದ ಕೋಪಗೊಂಡ ಸಾಹುಕಾರನ ಮನಸ್ಸಿನಲ್ಲಿ ಜಾತಿ ಪ್ರಜ್ಞೆ ಜಾಗೃತವಾಯಿತು. ಇದಕ್ಕೆ ಏನಾದರೂ ಮಾಡಬೇಕೆಂದು ಯೋಚಿಸಿದ ಪಾಳೇಗಾರಿ ಮನಸ್ಥಿತಿಯ ಸಾಹುಕಾರ, ಸಮುದಾಯ ಭವನದಲ್ಲಿರುವ ಭತ್ತದ ಮೂಟೆಗಳು ಕಳವಾಗಿವೆ ಎಂದು ಐವರು ದಲಿತ ಯುವಕರ ಮೇಲೆ ಸುಳ್ಳು ಆರೋಪವನ್ನು ಮಾಡಿದ. ತನ್ನ ಆಳುಗಳನ್ನು ಕಳುಹಿಸಿ ಪಾಂಡುರಂಗ, ಭೀಮೇಶ, ಬಸವರಾಜ, ಹನುಮೇಶ ಮತ್ತು ಗೌರೀಶ ಎಂಬ ಐವರು ದಲಿತ ಯುವಕರನ್ನು ತನ್ನ ಮನೆಯ ಬಳಿ ಕರೆಸಿಕೊಂಡರು. ಐವರನ್ನೂ ವಿದ್ಯುತ್ ಕಂಬಕ್ಕೆ ಕಟ್ಟಿ ಮಾರಣಾಂತಿಕವಾಗಿ ಹಲ್ಲೆ ಮಾಡಿದ. ಜಾತಿ ನಿಂದನೆ ಮಾಡಿದ್ದು ಮಾತ್ರವಲ್ಲದೆ, ಭತ್ತದ ಮೂಟೆಗಳನ್ನು ಇವರೇ ಕಳ್ಳತನ ಮಾಡಿದ್ದಾರೆ ಎಂದು ಆರೋಪ ಹೊರಿಸಿದರು. ಇದನ್ನು ಪ್ರಶ್ನಿಸಿದ ಯುವಕರ ತಾಯಂದಿರ ಮೇಲೆ ಹಲ್ಲೆ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ತೀವ್ರ ಗಾಯಗೊಂಡಿದ್ದ ಐವರು ಯುವಕರನ್ನೂ ಆಸ್ಪತ್ರೆಗೆ ಧಾಖಲಿಸಲಾಗುತ್ತದೆ. ಈ ಪ್ರಕರಣ




ವಿರೇಶ ಕೊಲೆ ಕೇಸ್, ಉನ್ನತ ಮಟ್ಟದ ತನಿಖೆಗಾಗಿ ಗಂಗಾವತಿಯಲ್ಲಿ ಪ್ರತಿಭಟನೆ

ಮರಕುಂಬಿ ಗ್ರಾಮದಲ್ಲಿ ಶಾಂತಿ ಹಾಗೂ ದಲಿತರ ರಕ್ಷಣೆಗಾಗಿ ಆಗ್ರಹಿಸಿ ಗಂಗಾವತಿಯಲ್ಲಿ 2015ರ ಜುಲೈ 25ರಂದು ಗಂಗಾವತಿ ಪೊಲೀಸ್ ಠಾಣೆಯ ಎದುರು ಸುರಿಯುವ ಮಳೆಯ ನಡುವೆಯೇ ಪ್ರತಿಭಟನೆ, ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಎಂ.ಎ.ಬೇಬಿ ಮತ್ತು ದಲಿತ ಶೋಷಣ್ ಮುಕ್ತಿ ಮಂಚ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕೆ.ರಾಧಕೃಷ್ಣನ್‌ರವರು ಭಾಗವಹಿಸಿದ್ದರು



ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿರುವ ಸಿಪಿಐ(ಎಂ), "ಸಿಪಿಐ(ಎಂ) ಎಲ್ಲಾ ದಮನಿತ ಹಾಗೂ ಶೋಷಿತ ಸಮುದಾಯಗಳ ಜಾಗೃತಿಗಾಗಿ ಮತ್ತು ಮಾನವ ಘನತೆಗಾಗಿ ಶೋಷಕ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುತ್ತದೆಯೇ ಹೊರತು, ವ್ಯಕ್ತಿಗಳ ವಿರುದ್ದವಲ್ಲ ಎಂಬುದನ್ನು ಈ ಮೂಲಕ ಸ್ವಷ್ಟಪಡಿಸುತ್ತದೆ" ಎಂದು ಹೇಳಿದೆ. ಅಪರಾದಿಗಳು ಶಿಕ್ಷೆಗೆ ಅರ್ಹರಿದ್ದು, ಶಿಕ್ಷಿಸುವುದು ನ್ಯಾಯವಿದೆ. ಆದರೆ ಅಪರಾದಿಗಳನ್ನು ನೆಚ್ಚಿಕೊಂಡು ಬಾಳುವ ಅವರ ನಿರಪರಾದಿ ಕುಟುಂಬದ ಸದಸ್ಯರು ಜಾತಿ ಪದ್ದತಿ ಹಾಗೂ ಸಾಮಾಜಿಕ ತಾರತಮ್ಯದ ಕಾರಣಕ್ಕೆ ತೊಂದರೆ ಅನುಭವಿಸುತ್ತಿದ್ದಾರೆ ಮತ್ತು ಬದುಕಿನ ಅನಿಶ್ಚಿತತೆ ಹಾಗು ಭಯದಿಂದ ಗೋಳಾಡುವ ಸಂಕಟಕ್ಕೂ ಸಿಲುಕಲಿದ್ದಾರೆ. ಇಂತಹ ಎಲ್ಲರ ಸಂಕಟಕ್ಕೆ ಮರುಕ ವ್ಯಕ್ತಪಡಿಸಿರುವ ಸಿಪಿಐ(ಎಂ), ದಲಿತರ ಮೇಲೆ ಜಾತಿ ದ್ವೇಷದಿಂದ ಸಾಮೂಹಿಕ ಹಲ್ಲೆ ನಡೆಸಿದಾಗ ದಲಿತ ಕುಟುಂಬಗಳು ಅನುಭವಿಸಿದ ಜೀವ ಭಯವನ್ನು ಅರ್ಥೈಸಿಕೊಳ್ಳಬೇಕು ಮತ್ತು ಎಲ್ಲರೂ ಜಾತಿ ವೈಷಮ್ಯ ಬಿಟ್ಟು ಸಾಮರಸ್ಯದಿಂದ ಬಾಳಬೇಕು ಎಂದು ಈ ಕುಟುಂಬಗಳ ಸದಸ್ಯರಲ್ಲಿ ಮನವಿ ಮಾಡಿದೆ. ದಲಿತರ ಜೊತೆ ಧೈರ್ಯವಾಗಿ ನಿಂತು ನ್ಯಾಯ ಕೊಡಿಸಲು ಮುಂದಾದ ಸಿಪಿಐ(ಎಂ)ನ ಅಂದಿನ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗಂಗಾಧರ ಸ್ವಾಮಿ ಹಾಗೂ ಅವರ ಪತ್ನಿಯೂ ಸೇರಿದಂತೆ ಕೊಪ್ಪಳ ಜಿಲ್ಲಾ ಸಮಿತಿ ಮತ್ತಿತರೆ ಸಂಘಗಳ ನಾಯಕತ್ವವನ್ನು ಪಕ್ಷದ ರಾಜ್ಯ ಸಮಿತಿ ಅಭಿನಂದಿಸಿದೆ.

ನಡೆದದ್ದು 2003ರಲ್ಲಿ, ಅಂದರೆ ಈಗ ತೀರ್ಪು ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದ ಘಟನೆ ನಡೆಯುವ 11 ವರ್ಷಗಳ ಮೊದಲೇ ಇಲ್ಲಿ ಜಾತಿ ದೌರ್ಜನ್ಯ, ಸವರ್ಣಿಯರ ದಬ್ಬಾಳಿಕೆಗಳು ಹೆಗ್ಗಿಲ್ಲದೆ ನಡೆದಿದ್ದವು.

**ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸಂಪರ್ಕ**

ಸವರ್ಣೀಯ ಸಾಹುಕಾರನ ಸುಳ್ಳು ಆರೋಪ, ಹಲ್ಲೆ ಮತ್ತು ಅವಮಾನವನ್ನು ಮರಕುಂಬಿಯ ದಲಿತರು ಗಂಭೀರವಾಗಿ ತೆಗೆದುಕೊಂಡರು. ಜಿಲ್ಲೆಯಲ್ಲಿ ಬಡ ಮತ್ತು ದಲಿತ ಕೂಲಿಕಾರರ ನಡುವೆ ಕೆಲಸ ಮಾಡುತ್ತಿದ್ದ ಕೆಂಬಾವುಟದ 'ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ'(ಎಐಎಡ್ಬ್ಲ್ಯುಯು)ದ ಮುಖಂಡರನ್ನು ಅವರು ಸಂಪರ್ಕಿಸಿದರು. ಸಂಘದ ಮುಖಂಡರು ಮರಕುಂಬಿಗೆ ಭೇಟಿ ನೀಡಿ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಊರಿನ ಹಿರಿಯರು "ಇದನ್ನೇ ದೊಡ್ಡದು ಮಾಡುವುದು ಬೇಡ, ಹೇಗೋ ಅನುಸರಿಸಿಕೊಂಡು ಹೋಗೋಣ" ಎಂದು ಸಲಹೆ ನೀಡುತ್ತಾರೆ. ಆದರೆ ಈ ಸಲಹೆಯನ್ನು ಒಪ್ಪದ ಯುವಕರು, ಇಂತಹ ದೌರ್ಜನ್ಯಗಳನ್ನು ಸಹಿಸಿಕೊಂಡು ಇರಲು ಸಾಧ್ಯವಿಲ್ಲ, ಇದರ ವಿರುದ್ಧ ಪ್ರಕರಣ ದಾಖಲು ಮಾಡಲೇಬೇಕು, ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇಬೇಕು ಎಂದು ಪಟ್ಟು ಹಿಡಿಯುತ್ತಾರೆ. ಆಗ ಪೊಲೀಸ್ ಠಾಣೆಯಲ್ಲಿ ದೂರು ಕೊಡಲಾಗುತ್ತದೆ. ಪ್ರಕರಣವನ್ನು ದಾಖಲಿಸಿಕೊಂಡ ಪೊಲೀಸರು 14 ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲು ಮಾಡುತ್ತಾರೆ. ಆರೋಪಿಗಳ ಬಂಧನಕ್ಕಾಗಿ ಪೊಲೀಸರು ಹುಡುಕಾಟ ನಡೆಸುತ್ತಾರೆ, ಪ್ರಮುಖ ಆರೋಪಿ ಸಾಹುಕಾರ ತಲೆಮರೆಸಿಕೊಳ್ಳುತ್ತಾನೆ.



ಕೊಲೆಯಾದ ಸಿಪಿಐ(ಎಂ) ನಾಯಕ ವಿರೇಶ ರವರ ಮನೆಗೆ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಎಂ.ಎ.ಬೇಬಿ ಭೇಟಿ ನೀಡಿ ಸಾಂತ್ವಾನ ಹೇಳುತ್ತಿರುವುದು

ಇದೇ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳಾಗಿದ್ದ ನಾಗಲಾಂಬಿಕ ದೇವಿಯವರು ಮರುಕುಂಬಿಗೆ ಭೇಟಿ ನೀಡಿ, ಗ್ರಾಮ ಸಭೆ ನಡೆಸುತ್ತಾರೆ. ಸರ್ಕಾರಿ ಸಮುದಾಯ ಭವನದಲ್ಲಿ ಅಕ್ರಮವಾಗಿ ತುಂಬಿದ್ದ 713 ಚೀಲ ಭತ್ತವನ್ನು ವಶಪಡಿಸಿಕೊಂಡು ಎಪಿಎಂಸಿಗೆ ಕಳುಹಿಸುತ್ತಾರೆ. ಹಾಗೂ ಊರಿನಲ್ಲಿ ಮತ್ತೆ ಜಾತಿ ದೌರ್ಜನ್ಯ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿ ಬಿಗಿ ಪೊಲೀಸ್ ಬಂದೂಬಸ್ತ್ ಮಾಡುತ್ತಾರೆ. ಈ ಪ್ರಕರಣದಲ್ಲಿ ಸಾಹುಕಾರ ಜಾಮೀನು ಪಡೆದು ಮರಳಿ ಊರಿಗೆ ಬರುತ್ತಾನೆ.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುತ್ತದೆ. ಅಷ್ಟರಲ್ಲಿ ಸಂಘಟಿತರಾಗಿದ್ದ ದಲಿತರು ಕೂಲಿಕಾರರ ಸಂಘದ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಇಬ್ಬರು ಸದಸ್ಯರು ಗೆಲುವು ಪಡೆಯುತ್ತಾರೆ. ಪ´ ಂ ಚಾ ಯಿ ು ತಿ ಂ ು´ ು ಅಧ್ಯಕ್ಷರ ಎರಡನೇ ಅವಧಿಯ ಚುನಾವಣೆಯ ಸಂದರ್ಭದಲ್ಲಿ ದಲಿತ ಸಮುದಾಯದಿಂದ ಆಯ್ಕೆಯಾಗಿದ್ದ ದೇವದಾಸಿ ಹೆಣ್ಣುಮಗಳು ಅಧ್ಯಕ್ಷರಾಗುವ ಸಂದರ್ಭ ಬಂದಾಗ, ಕಾಂಗ್ರೆಸ್ ಪಕ್ಷದಲ್ಲಿದ್ದ ಸಾಹುಕಾರ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಸಲುವಾಗಿ ಕೂಲಿಕಾರ ದಲಿತರಿಗೆ ಬೆಂಬಲಿಸಿ 2 ವರ್ಷಗಳ ಅವಧಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. 2013 ರವರೆಗೂ ಪರಿಸ್ಥಿತಿ ತಿಳಿಗೊಳ್ಳುತ್ತಿರುವಂತೆ ಕಂಡರೂ, ಜಾತಿಯ ವೈಷಮ್ಯ ಒಳಗೆ ಬೂದಿ ಮುಚ್ಚಿದ ಕೆಂಡದಂತಿತ್ತು.

**ಹೋಟೆಲ್ ಮತ್ತು ಕ್ಷೌರದ ಅಂಗಡಿಯನ್ನೇ ಮುಚ್ಚಿದರು**

2014ರಲ್ಲಿ ಮರಕುಂಬಿಯಲ್ಲಿ ಹೋಟೆಲ್‌ಗಳಲ್ಲಿ ಪ್ರತ್ಯೇಕ ಲೋಟದ ವ್ಯವಸ್ಥೆ ಮತ್ತು ಕ್ಷೌರದ ಅಂಗಡಿಗಳಲ್ಲಿ ದಲಿತರಿಗೆ ಕ್ಷೌರದ ನಿರಾಕರಣೆ, ಅಂಗಡಿಗಳಲ್ಲಿ ದಲಿತರಿಗೆ ದಿನಸಿ ಸಾಮಾನು ನೀಡುವುದನ್ನು ನಿರಾಕರಿಸುವ ಪ್ರಕರಣಗಳು ಬೆಳಕಿಗೆ ಬರುತ್ತವೆ. ಈ ಸಂದರ್ಭದಲ್ಲಿ ಜೂನ್ 23, 2014ರಂದು ಎಲ್ಲಾ ದಲಿತರು ಒಟ್ಟಿಗೆ ಸೇರಿ ಕೂಲಿಕಾರರ ಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ(ಸಿಪಿಐಎಂ)ದ ನೇತೃತ್ವದಲ್ಲಿ ಗಂಗಾವತಿ ತಹಸಿಲ್ದಾರ್ ರನ್ನು ಭೇಟಿಮಾಡಿ, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ದಲಿತರಿಗೆ ನ್ಯಾಯ ಒದಗಿಸಬೇಕೆಂದು ಮನವಿ ಸಲ್ಲಿಸುತ್ತಾರೆ. ಈ ಮನವಿಯ ಮೇರೆಗೆ ಜುಲೈ 25ರಂದು ಮರಕುಂಬಿಗೆ ಆಗಮಿಸಿದ ತಹಸಿಲ್ದಾರ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಶಾಂತಿ ಸಭೆ ನಡೆಸುತ್ತಾರೆ. ಹೋಟೆಲ್‌ಗಳಲ್ಲಿರುವ ಎರಡು ಲೋಟ ಪದ್ಧತಿಯನ್ನು ಕೂಡಲೇ ನಿಲ್ಲಿಸಬೇಕು, ಯಾವುದೇ ಜಾತಿ ತಾರತಮ್ಯ ಮಾಡದೇ ಎಲ್ಲರನ್ನೂ ಸಮಾನವಾಗಿ ನೋಡಬೇಕು, ಕ್ಷೌರದ ಅಂಗಡಿಯಲ್ಲಿ ದಲಿತರಿಗೂ ಕ್ಷೌರಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಅಧಿಕಾರಿಗಳು ಆ ಸಬೆಯಲ್ಲಿ ಸೂಚಿಸುತ್ತಾರೆ. ಅಧಿಕಾರಿಗಳ ಈ ಸೂಚನೆಯನ್ನು ದಿಕ್ಕರಿಸಿದ ಸವರ್ಣೀಯರು ದಲಿತರಿಗೆ ಪ್ರವೇಶ

ಪುಟ 10 ಕ್ಕೆ

## ಮುರಕುಂಬಿ ಘಟನೆ: ದಲಿತ ಸ್ವಾಮಿಯ ಭಾಷಣ ಒಂದು ನೆನಪು

ಬಿ.ಪೀರ್ ಬಾಷಾ

ಈ ಘಟನೆ ಸಂಬಂಧಿಸಿದಾಗ ನಾನು ಕಾರಟಗಿಯಲ್ಲಿದ್ದೆ. ವಿಷಯ ತಿಳಿದು ಘಟನೆ ಸಂಭವಿಸಿದ ಆ ಗ್ರಾಮಕ್ಕೆ ಗೆಳೆಯರೊಡನೆ ಹೋಗಿದ್ದೆ. ನೇರವಾಗಿ ಗ್ರಾಮದ ಜನರನ್ನು ಕಂಡು ಮಾತಾಡಿ ಪ್ರತ್ಯಕ್ಷವಾಗಿ ಆ ಗ್ರಾಮದ ವಾಸ್ತವವನ್ನು ತಿಳಿಯುವುದು ನನ್ನ ಉದ್ದೇಶವಾಗಿತ್ತು. ಸಿಪಿಐಎಂ ಪಕ್ಷವು ಈ ದೌರ್ಜನ್ಯ ವಿರೋಧಿಸಿ ಹೋರಾಟ ಕೈಗೆತ್ತಿಕೊಂಡಿತ್ತು. ಸ್ಥಳೀಯರೇ ಆದ ಆ ಪಕ್ಷದ ಸದಸ್ಯರಾದ ಗಂಗಾಧರಯ್ಯ ಸ್ವಾಮಿಯವರು ಊರ ಜನರ ನಿಷ್ಠುರ ಕಟ್ಟಿಕೊಂಡು ದಲಿತರ ಪರ ಸ್ಥಿರವಾಗಿ ನಿಂತಿದ್ದರು. ದಲಿತರಿಗೆ ಕ್ಷೌರ ಮಾಡಲು ನಿರಾಕರಿಸಿದ್ದನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಜಗಳವಾಗಿ, ಹಲ್ಲೆಯಾಗಿ ಪರಿಸ್ಥಿತಿ ಉದ್ರಿಕ್ತಗೊಂಡಿತ್ತು. ನಾವು ಭೇಟಿ ನೀಡಿದಾಗ ಊರಿನ ಹೋಟೆಲ್‌ಗಳು, ಮತ್ತಿತರೆ ಎಲ್ಲ ಅಂಗಡಿಗಳು ಮುಚ್ಚಿದ್ದವು. ಊರಿನಲ್ಲಿ ಪೊಲೀಸ್ ವ್ಯಾನ್ ನಿಂತಿತ್ತು. ಪೊಲೀಸರು ಗ್ರಾಮದಲ್ಲಿ ಸುತ್ತಾಡುತ್ತಿದ್ದರು. ನಾವು ದಲಿತ ಸಮುದಾಯದೊಂದಿಗೆ ಮಾತಾಡಲು ಅಲ್ಲಿನ ಕೇರಿಯ ಕಡೆ ಹೊರಟೆವು. ಕೇರಿಯ ದೇವಸ್ಥಾನದಲ್ಲಿ ದುಂಡಾಗಿ ಕುಳಿತು ಚರ್ಚಿಸುವುದು ನಮ್ಮ ಉದ್ದೇಶವಾಗಿತ್ತು. ಅಲ್ಲಿಯ ಕೆಲ ಯುವಕರು ಹಾಸಿಕೊಂಡು ಕೂಡಲು ಪ್ಲಾಸ್ಟಿಕ್ ಎಳೆಗಳ ಖಾಲಿ ಗೊಬ್ಬರ ಚೀಲದಿಂದ ಹೊಲಿದ ತಾಡಪಾಲು/ ಬರ್ಕಾ ತರಲು ಓಡಾಡುತ್ತಿದ್ದರು. ಅಷ್ಟರಲ್ಲಿ ಕಾರೊಂದು ಬಂದದ್ದೇ ತಡ. ಚಿತ್ರಣವೇ ಬದಲಾಯಿತು. ಕಾರಿನ ಜೊತೆ ಒಂದೆರಡು ಬೈಕುಗಳು ಬಂದವು. ಅವೂ ಕೆಲ ಇದ್ದುಳ್ಳ ದಲಿತ ಯುವಕರವು. ನಾವಿದ್ದ ದೇವಸ್ಥಾನದ ಪಕ್ಕದ ಪುಟ್ಟ ಬಯಲಲ್ಲಿ ಕಾರು ನಿಂತಿತು. ಕಾರಿನಲ್ಲಿದ್ದವರು ಇಳಿಯುತ್ತಿದ್ದಂತೆಯೇ ನಾಲ್ಕೈದು ಪ್ಲಾಸ್ಟಿಕ್ ಛೇರುಗಳು ಬಂದವು. ಕಾರಿನಿಂದ ಇಳಿದವರು ದಲಿತ ಸ್ವಾಮೀಜಿಗಳಾಗಿದ್ದರು.

ನಮಗೆ ಈ ಸ್ವಾಮಿಗಳ ಬಗ್ಗೆ ತಿಳಿದೇ ಇತ್ತು. ಮತೀಯ ಸಂಘಟನೆಗಳಿಗೆ ದಲಿತರನ್ನು ಸೆಳೆಯುವ ಈ ಕಾವಿಧಾರಿ ಏಜೆಂಟರು ಈ ಸಂದರ್ಭದ ಹಿನ್ನೆಲೆಯಲ್ಲಿ ಅಲ್ಲಿ ಬಂದ ಬಗ್ಗೆ ಇವರೇನು ಮಾಡುವರೋ ನೋಡೋಣ ಎಂಬ ಆತಂಕ ಶುರುವಿಟ್ಟುಕೊಂಡಿತು. ಅವರು ಆ ಛೇರಿನಲ್ಲಿ ಕುಳಿತರು. ಅವರ ಎದುರು, ಎಡ, ಬಲ ಕೇರಿಜನ ನಿಂತರು. ನಾವೂ ಪಕ್ಕದ ದೇವಿಗುಡಿಯಲ್ಲೇ ನಿಂತಿದ್ದೆವು. ಸ್ವಾಮೀಜಿಗಳು ಮಾತಾಡಲಾರಂಭಿಸಿದರು. ಈ ಪದ್ಧತಿಗಳು ನಿನ್ನೆ ಮೊನ್ನೆ ಬಂದವು ಅಲ್ಲ. ತಲೆತಲಾಂತರದಿಂದ ಬಂದವು. ನಾವು ಊರಾಗ ಹೊಂದಿಕೊಂಡು ಹೋಗಾದನ್ನ ಕಲೀಬೇಕು. ಇಷ್ಟು ದಿನ ನಮ್ಮ ಹಿರಿಯರು ಬಾಳಿ ಬದುಕಿಲ್ಲೇನು? ಈಗ್ಯಾಕ ಇಲ್ಲದ್ದೆಲ್ಲ ಕೇಳಿ ವಾತಾವರಣ ಕೆಡಿಸ್ಕಳ್ಳಾದು. ಹಿಂಗಾ ಆದ್ರೆ ನಾಳೆ ನಮ್ಮ ಹೊಲ ಮನೀಗೆ ಕೆಲಸಕ್ಕ ಬರಬ್ಯಾಡ್ರಿ ಅಂದ್ರ ದುಡಕೊಂಡು ತಿನ್ನಾಕ ಎಲ್ಲೀಗ್ಹೋಕ್ತೀರಿ. ಇದೆಲ್ಲ ಬ್ಯಾಡ. ಹೊಂದಿಕೊಂಡು ಹೋಗ್ರಿ. ಕ್ಷೌರ ಇದಾ ಊರಾಗ ಮಾಡಿಸ್ಕಾಬೇಕು ಅಂತಾ ಏನಾರ ಐತೇನು? ಹೋಗ್ರಿ, ಗಂಗಾವತಿಗೆ ಹೋಗಿ ಮಾಡಸ್ಕೊಂಡು ಬರ್ರಿ. ಪ್ಯಾಟ್ಯಾಗ ಯಾರಾರ ಮಾಡಾದಿಲ್ಲ ಅಂತಾರೇನು? ಹಳ್ಳಿ ಅಂದಮ್ಯಾಲ ಇಲ್ಲೀತನ ನಡಕೊಂಡು ಬಂದಿದ್ದನ್ನ ನಡಿಸ್ಬೇಕಾಗ್ತೈತಿ. ಅವರು ಮಾತು ಮುಗಿಸಿದರು. ಜನ ಕಾಲಿಗೆ ಬಿದ್ದರು. ಕಾರು ಹೋದವು. ಈ ಹೋರಾಟ ಇನ್ನೇನು ಮುರಿದಂತೆಯೇ ಎನಿಸತೊಡಗಿತು. ಸಧ್ಯ ಹಾಗಾಗಲಿಲ್ಲ. ಅಂದು ನನ್ನ ವೈಯಕ್ತಿಕ ಬದುಕಿನಲ್ಲಿ ಕೆಲ ಕಾಲ ಮೂಡಿಸಿದ ಒಂದು ಸಣ್ಣ ತೊಳಲಾಟ. ಇವೆಲ್ಲಾ ಈ ಹೊತ್ತು ನೆನಪಾಗುತ್ತಿದೆ.

*(ಫೇಸ್ಬುಕ್ ನಿಂದ)*



ಕೊಲೆಯಾದ ಸಿಪಿಐ(ಎಂ) ನಾಯಕ ವಿರೇಶ

# ಐತಿಹಾಸಿಕ ತೀರ್ಪಿಗೆ ಸಾಕ್ಷಿಯಾದ 'ಮರಕುಂಬಿ'..... ಪುಟ 9 ರಿಂದ

ನೀಡಬೇಕಾಗುತ್ತದೆ ಎಂಬ ಕಾರಣಕ್ಕಾಗಿಯೇ ಹೋಟೆಲ್ ಮತ್ತು ಕ್ಷೌರದ ಅಂಗಡಿಯನ್ನೇ ಸಂಪೂರ್ಣ ಮುಚ್ಚಿದರು. ಸಿಪಿಐ(ಎಂ) ಮುಖಂಡ ಗಂಗಾಧರಯ್ಯ ಅವರ ಮನೆಯ ಮೇಲೆ ಕಲ್ಲುಗಳನ್ನು ಎಸೆಯಲಾಗುತ್ತದೆ. ಈ ಪ್ರಕರಣ ದಲಿತರ ನಡುವೆ ಒಂದು ರೀತಿಯ ಅಭದ್ರತೆಯನ್ನು ಉಂಟು ಮಾಡಿ ಸಾಮಾಜಿಕ ಭಹಿಷ್ಕಾರ ಮಾಡಿದಂತಹ ವಾತಾವರಣ ನಿರ್ಮಾಣವಾಗಿತ್ತು.

**ಚಿತ್ರಮಂದಿರದಲ್ಲಿ ಕೆಲ ಯುವಕರ ನಡುವೆ ಗಲಾಟೆ**

ಇದೇ ಸಂದರ್ಭದಲ್ಲಿ ಪುನೀತ್ ರಾಜ್ ಕುಮಾರ್ ಅಭಿನಯದ 'ಪವರ್' ಸಿನಿಮಾ ಬಿಡುಗಡೆಯಾಗಿರುತ್ತದೆ. ಈ ಸಿನಿಮಾವನ್ನು ವೀಕ್ಷಿಸಲು 2014ರ ಆಗಸ್ಟ್ 27ರಂದು ಗಂಗಾವತಿಯ ಚಿತ್ರಮಂದಿರಕ್ಕೆ ಕಾಕತಾಳೀಯವಾಗಿ ಮರಕುಂಬಿಯ ದಲಿತ ಯುವಕರೂ ಮತ್ತು ಸವರ್ಣೀಯ ಯುವಕರೂ ಒಂದೇ ದಿನ ಹೋಗಿರುತ್ತಾರೆ. ಇದೇ ಸಂದರ್ಭದಲ್ಲಿ ಮರಕುಂಬಿಯ ಸವರ್ಣೀಯರಿಗೂ ಗಂಗಾವತಿಯ ಕೆಲ ಯುವಕರ ನಡುವೆ ಟಿಕೆಟ್ ವಿಚಾರದಲ್ಲಿ ಗಲಾಟೆ ನಡೆಯುತ್ತದೆ. ಗಂಗಾವತಿಯ ಯುವಕರು ಮರಕುಂಬಿಯ ಸವರ್ಣೀಯ ಯುವಕರ ಮೇಲೆ ಹಲ್ಲೆ ಮಾಡುತ್ತಾರೆ. ಈ ಗಲಾಟೆಯನ್ನು ಮರಕುಂಬಿಯ ದಲಿತರೇ ಗಂಗಾವತಿಯ ಯುವಕರಿಂದ ಮಾಡಿಸಿದ್ದು ಎಂದು ಸವರ್ಣೀಯರು ಅನುಮಾನಿಸುತ್ತಾರೆ.

**ದಲಿತ ಕೇರಿಗೆ ನುಗ್ಗಿ ಗುಡಿಸಲುಗಳಿಗೆ ಬೆಂಕಿ ಇಟ್ಟು ಸುಟ್ಟರು**

ಮರುದಿನ ಅಂದರೆ, ಆಗಸ್ಟ್ 28ರಂದು ಸೂರ್ಯ ಪಶ್ಚಿಮದ ಕಡೆ ಮುಖಮಾಡಿದ್ದ ಸಂಜೆ 4 ಗಂಟೆಯ ಸಮಯದಲ್ಲಿ ಸುಮಾರು 150 ಜನ ಸವರ್ಣೀಯರು ಒಟ್ಟಿಗೆ ಸೇರಿ ಮರಕುಂಬಿಯ ದಲಿತ ಕೇರಿಗೆ ನುಗ್ಗುತ್ತಾರೆ. ಬೂದಿ ಮುಚ್ಚಿದ ಕೆಂಡದಂತಿದ್ದ ಜಾತಿ ವೈಷಮ್ಯದ ಕಟ್ಟೆ ಹೊಡೆದು ಸಿಕ್ಕ ಸಿಕ್ಕ ಹೆಂಗಸರು, ಮಕ್ಕಳು, ವೃದ್ಧರು ಎನ್ನುವುದನ್ನೂ ನೋಡದೆ ಎಲ್ಲರ ಮೇಲೆ ಮಾರಣಾಂತಿಕ ಹಲ್ಲೆ ಮಾಡುತ್ತಾರೆ. ಅತ್ಯಂತ ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡುತ್ತಾರೆ. ಇಷ್ಟು ಮಾತ್ರವಲ್ಲದೆ "ನಿಮ್ಮನ್ನು ಜೀವಂತವಾಗಿ ಬಿಟ್ಟರೆ ಬಾರೀ ಮೆರಿತೀರಿ, ನಿಮ್ಮನ್ನು ಜೀವಂತ ಸುಟ್ಟು ಹಾಕುತ್ತೇವೆ" ಎಂದು 4 ಗುಡಿಸಲುಗಳಿಗೆ ಬೆಂಕಿಯಿಟ್ಟು ಬೂದಿ ಮಾಡಿ ಅಟ್ಟಹಾಸ ಮೆರೆಯುತ್ತಾರೆ. ಗಲಾಟೆಯ ಕಾರಣದಿಂದ ಎಲ್ಲರೂ ಗುಡಿಸಲುಗಳಿಂದ ಹೊರ ಬಂದಿದ್ದರಿಂದ ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಸಿಮೆಂಟ್ ಶೀಟುಗಳಿಂದ ನಿರ್ಮಿಸಿಕೊಂಡಿದ್ದ ದಲಿತರ ಮನೆಗಳನ್ನು ಸವರ್ಣೀಯರು ಪುಡಿಗಟ್ಟುತ್ತಾರೆ. ಊರಿನಲ್ಲಿ ಬಂದೂಬಸ್ತ್‌ಗೆಂದು ನಿಯೋಜಿಸಿದ್ದ ಪೊಲೀಸರ ಮೇಲೂ ಕಲ್ಲುತೂರಾಟ ನಡೆಸಿ ಹಲ್ಲೆ ಮಾಡುತ್ತಾರೆ. ಇದರಿಂದ ತಲೆಗೆ ಪೆಟ್ಟು ಬಿದ್ದು ಇಬ್ಬರು ಪೊಲೀಸರು ತೀವ್ರವಾಗಿ ಗಾಯಗೊಳ್ಳುತ್ತಾರೆ. ತೀವ್ರವಾಗಿ ಗಾಯಗೊಂಡಿದ್ದ 27 ದಲಿತರನ್ನು ಆಸ್ಪತ್ರೆಗೆ ದಾಖಲಿಸಿ 15 ದಿನಗಳ ಕಾಲ ಚಿಕಿತ್ಸೆ ನೀಡಲಾಗುತ್ತದೆ.

**ಮುಖ್ಯಮಂತ್ರಿಯವರಿಗೆ ಮನವಿ**

ಈ ಪ್ರಕರಣದ ತೀವ್ರತೆಯನ್ನು ಅರಿತ ಸಿಪಿಐ(ಎಂ), ಕೆಪಿಆರ್‌ಎಸ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ದಲಿತ ಹಕ್ಕುಗಳ ಸಮಿತಿಯ ಮುಖಂಡರುಗಳು ಮರಕುಂಬಿ ಗ್ರಾಮಕ್ಕೆ ಭೇಟಿ ನೀಡಿ ನೊಂದ ದಲಿತರಿಗೆ ಧೈರ್ಯ ತುಂಬುತ್ತಾರೆ. ಈ ಪ್ರಕರಣವನ್ನು ಖಂಡಿಸಿ, ತಪ್ಪಿತಸ್ತರಿಗೆ ಉಗ್ರ ಶಿಕ್ಷೆಯಾಗಬೇಕು ಮತ್ತು ಹಳ್ಳಿಗಳಲ್ಲಿ ಜಾತಿ ದೌರ್ಜನ್ಯ ನಿಂತು ಶಾಂತಿ ನೆಲೆಸಬೇಕು ಹಾಗೂ ದೌರ್ಜನ್ಯಕ್ಕೆ ಒಳಗಾಗಿರುವ ದಲಿತರಿಗೆ ಪರಿಹಾರ ನೀಡಬೇಕೆಂದು ಆಗ್ರಹಿಸಿ



ಈ ಮುಖಂಡರುಗಳ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬೇಟಿ ಮಾಡಿ ಮನವಿ ಸಲ್ಲಿಸುತ್ತಾರೆ. ಈ ತಂಡದಲ್ಲಿ ಸಿಪಿಐಎಂನ ಅಂದಿನ ರಾಜ್ಯ ಕಾರ್ಯದರ್ಶಿಗಳಾಗಿದ್ದ ಜಿ.ವಿ.ಶ್ರೀರಾಮರೆಡ್ಡಿ, ಮುಖಂಡರಾದ ಜಿ.ಎನ್.ನಾಗರಾಜ್, ನಿತ್ಯಾನಂದಸ್ವಾಮಿ, ಜಿ.ಸಿ.ಬಯ್ಯಾರೆಡ್ಡಿ, ಮಾರುತಿ ಮಾನ್ಪಡೆ, ಚಂದ್ರಪ್ಪ ಹೊಸ್ಕೆರಾ ಮತ್ತಿತರ ನಾಯಕರು ಭಾಗಿಯಾಗಿದ್ದರು.

**ಮೂರು ದಿನ 55 ಕಿಮೀ ಪಾದಯಾತ್ರೆ**

ಮಾತ್ರವಲ್ಲದೆ, ಸಿಪಿಐ(ಎಂ) ನೇತೃತ್ವದಲ್ಲಿ ಕೆಪಿಆರ್‌ಎಸ್, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಕರ್ನಾಟಕ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ದಲಿತ ಹಕ್ಕುಗಳ ಸಮಿತಿ, ಭಾರತ ವಿಧ್ಯಾರ್ಥಿ ಫೆಡರೇಷನ್ ಜಂಟಿಯಾಗಿ ದಲಿತರ ರಕ್ಷಣೆಗೆ ಹಾಗೂ ನ್ಯಾಯಕ್ಕಾಗಿ ವ್ಯಾಪಕ ಚಳುವಳಿಯಲ್ಲಿ ತೊಡಗಿದ್ದವು. 2014ರ ಆಗಸ್ಟ್‌ನಲ್ಲಿ ಮರಕುಂಬಿಯಿಂದ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿಗೆ ಸುಮಾರು 55 ಕಿಲೋಮೀಟರ್‌ಗಳನ್ನು ಮೂರು ದಿನ ಪಾದಯಾತ್ರೆ ಮಾಡಿ ಪ್ರತಿಭಟಿಸಲಾಯ್ತು. ಇದರಿಂದಾಗಿ ಮನೆ ಕಳೆದುಕೊಂಡವರಿಗೆ ಮತ್ತು ದೌರ್ಜನ್ಯಕ್ಕೆ ಒಳಗಾದವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಸ್ವಲ್ಪಮಟ್ಟಿನ ಪರಿಹಾರ ದೊರಕಿಸಿಕೊಡಲು ಸಾಧ್ಯವಾಯಿತು. ಈ ಪ್ರಕರಣದಲ್ಲಿ ದಲಿತರ ರಕ್ಷಣೆಗೆ ನಿಂತ ಸಿಪಿಐ(ಎಂ) ಪಕ್ಷದ ಅಂದಿನ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗಂಗಾಧರ ಸ್ವಾಮಿ ಹಾಗೂ ಅವರ ಪತ್ನಿ ಸೇರಿದಂತೆ ಪಕ್ಷದ ಇತರೆ ಮುಖಂಡರು, ಸದಸ್ಯರ ಮೇಲೂ ಹಲ್ಲೆ ನಡೆಸಲಾಗಿತ್ತು.

**ರೈಲ್ವೇ ಹಳಿಗಳ ಮೇಲೆ ಶವವಾಗಿ ಸಾಕ್ಷಿದಾರ ವೀರೇಶಪ್ಪ**

ಈ ಮಧ್ಯ ಗುಡಿಸಲಿಗೆ ಬೆಂಕಿಯಿಟ್ಟ ಮತ್ತು ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಸಿದಂತೆ ಮೂವರು ಪಂಚನಾಮೆ ಸಾಕ್ಷಿದಾರರಾದ ವೀರೇಶಪ್ಪ, ಬಸವರಾಜು ಮತ್ತು ದೇವರಾಜು ಜಿಲ್ಲಾ ನ್ಯಾಯಾಲಯದಲ್ಲಿ ಹಾಜರಾಗಿ ಒಮ್ಮೆ ಸಾಕ್ಷಿ ನುಡಿದಿದ್ದರು. ಸಾಕ್ಷಿ ಹೇಳಿ ಬಂದ ಮೂರೇ ದಿನಗಳಲ್ಲಿ ಸಾಕ್ಷಿದಾರನಾಗಿದ್ದ ಮರಕುಂಬಿಯ ದಲಿತ, ಸಿಪಿಐ(ಎಂ) ಪಕ್ಷದ ಕಾರ್ಯಕರ್ತ ಹಾಗೂ ಕೃಷಿ ಕೂಲಿಕಾರರ ಸಂಘದ ಮುಖಂಡರಾಗಿದ್ದ ವೀರೇಶಪ್ಪ ಕೊಪ್ಪಳದ ರೈಲ್ವೇ ಹಳಿಗಳ ಮೇಲೆ ಶವವಾಗಿ ಬಿದ್ದಿದ್ದ. ಇದು ದ್ವೇಷದಿಂದಲೇ ನಡೆಸಿದ ಕೊಲೆಯಾಗಿದ್ದು, ಇದನ್ನು ಸೂಕ್ತ ತನಿಖೆಗೆ ಒಳಪಡಿಸಬೇಕೆಂದು, ಗ್ರಾಮದಲ್ಲಿ ಶಾಂತಿ ಹಾಗೂ ದಲಿತರ ರಕ್ಷಣೆಗಾಗಿ ಆಗ್ರಹಿಸಿ ಗಂಗಾವತಿಯಲ್ಲಿ 2015ರ ಜುಲೈ 25ರಂದು ರಸ್ತೆ ತಡೆ ಪ್ರತಿಭನೆ ನಡೆಸಲಾಗುತ್ತದೆ. ಗಂಗಾವತಿ ಪೊಲೀಸ್ ಠಾಣೆಯ ಎದುರು ಸುರಿಯುವ ಮಳೆಯ ನಡುವೆಯೇ ಈ ಪ್ರತಿಭಟನೆ ನಡೆಯುತ್ತದೆ. ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಎಂ.ಎ.ಬೇಬಿ ಮತ್ತು ದಲಿತ ಶೋಷಣ್ ಮುಕ್ತಿ ಮಂಚ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕೆ.ರಾಧಕೃಷ್ಣನ್‌ರವರು ಭಾಗವಹಿಸುತ್ತಾರೆ. ಪ್ರತಿಭಟನೆ ನಡೆಸಿದ ಕಾರಣಕ್ಕೆ ಪ್ರತಿಭಟನೆ ನಡೆಸಿದ ಎಂ.ಎ.ಬೇಬಿ, ರಾಧಾಕೃಷ್ಣನ್ ಸೇರಿದಂತೆ 117 ಜನರ ವಿರುದ್ದ, ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಿದ್ದಾರೆ ಎಂಬ ಆರೋಪ ಹೊರಿಸಿ ಗಂಗಾವತಿ ಪೊಲೀಸರು ಕ್ರಿಮಿನಲ್ ಮೊಕದ್ದಮೆ ದಾಖಲಿಸಿದರು. ಮುಖಂಡರ ಮೇಲೆ ಪೊಲೀಸರು ಮೊಕದ್ದಮೆ ದಾಖಲಿಸಿದ್ದರು. ಜುಲೈ 23, 2015ರಂದು 400 ಜನರು ಪಾದಯಾತ್ರೆಯ ಮೂಲಕ ತೆರಳಿ ಉಸ್ತುವಾರಿ ಸಚಿವರ ಮನೆ ಎದುರು ಪ್ರತಿಭಟನೆ ನಡೆಸಿದರು. ದಲಿತ ಹಕ್ಕುಗಳ ಸಮಿತಿಯು ಬೆಂಗಳೂರಿನ ಟೌನ್‌ಹಾಲ್ ಎದರು ಸೆಪ್ಟೆಂಬರ್ 15, 2015ರಂದು ರಾಜ್ಯ ಮಟ್ಟದ ಪ್ರತಿಭಟನೆ ನಡೆಸಿತು.

**ಬೆಂಗಳೂರಿಗೆ 370 ಕಿಮೀ ಪಾದಯಾತ್ರೆ**

ಮರಕುಂಬಿ ದಲಿತರಿಗೆ ನ್ಯಾಯ ಕೇಳಿ ಮತ್ತು ವೀರೇಶಪ್ಪನ ಕೊಲೆ ಪ್ರಕರಣವನ್ನು ತನಿಖೆಗೆ ಒಳಪಡಿಸಿ ಆರೋಪಿಗಳನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಮರುಕುಂಬಿಯಿಂದ ಬೆಂಗಳೂರಿಗೆ 2015 ನವೆಂಬರ್ 19 ರಿಂದ ಡಿಸೆಂಬರ್ 4ರವರೆಗೆ ಪಾದಯಾತ್ರೆ ನಡೆಯಿತು. 15 ದಿನಗಳ ಕಾಲ ನಡೆದ ಈ ಪಾದಯಾತ್ರೆಯಲ್ಲಿ ಸುಮಾರು 370 ಕಿಲೋಮೀಟರ್ ಪಾದಯಾತ್ರೆಯಲ್ಲಿ ನೂರಾರು ಮಹಿಳೆಯರೂ ಸೇರಿದಂತೆ ಸುಮಾರು 300ಕ್ಕೂ ಹೆಚ್ಚು ಜನ ಹೆಜ್ಜೆ ಹಾಕಿದರು. ಈ ಪಾದಯಾತ್ರೆಯಲ್ಲಿ ಸಿಪಿಐ(ಎಂ)ನ ಯು.ಬಸವರಾಜ, ಎಂ.ಬಸವರಾಜ, ಜಿ.ನಾಗರಾಜ, ನಿರುಪಾದಿ, ಗಂಗಾಂಧರಸ್ವಾಮಿ, ಮರಿನಾಗಪ್ಪ, ಮಂಜುನಾಥ್ ಡೆಗ್ಗಿ, ಹುಸೇನಪ್ಪ, ಹುಲಿಗೆಮ್ಮ, ದುರುಗಪ್ಪ ಬಡಿಗೇರಾ, ರಾಘವೇಂದ್ರ, ಭೀಮೇಶ್, ಹುಲ್ಲೇಶ್ ಬಡಿಗೇರಾ, ದುರಗೇಶ್ ಸೇರಿ ಹಲವರು ನೇತೃತ್ವ ನೀಡಿದ್ದರು. ಬೆಂಗಳೂರಿನ ಸ್ವತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡು, ಪ್ರಕರಣದ ತನಿಖೆ ಮಾಡಿ ಕೊಲೆಗಡುಕರನ್ನು ಶಿಕ್ಷಿಸಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಅಂದಿನ ಸಮಾಜ ಕಲ್ಯಾಣ ಸಚಿವರಾಗಿದ್ದ ಎಚ್.ಆಂಜನೇಯನವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಸರ್ಕಾರದ ಪರವಾಗಿ ಮನವಿ ಸ್ವೀಕರಿಸಿದ್ದರು. ಆ ನಂತರ ರಾಜ್ಯ ಸರ್ಕಾರ ವೀರೇಶಪ್ಪ ಕೊಲೆ ಪ್ರಕರಣವನ್ನು ಸಿಐಡಿಗೆ ವಹಿಸಿತು. ಹಲವರನ್ನು ವಿಚಾರಣೆಗೊಳಪಡಿಸಿದರೂ ಸರಿಯಾದ ಸಾಕ್ಷ್ಯಾಧಾರಗಳಿಲ್ಲ ಎನ್ನುವ ಕಾರಣ ನೀಡಿ, ಯಾವುದೇ ನ್ಯಾಯ ಸಿಗದೆ ವೀರೇಶಪ್ಪನ ಕೊಲೆ ಪ್ರಕರಣ ಅಂತ್ಯಕಂಡಿತ್ತು.

**ಬದುಕನ್ನು ಅರಸಿ ಪಟ್ಟಣಗಳಿಗೆ ವಲಸೆ**

ಮರಕುಂಬಿ ಗ್ರಾಮದ ಬೆರಳೆಣಿಕೆಯ ಕೆಲವು ದಲಿತರಿಗೆ ಮಾತ್ರ ಅರ್ಧ ಅಥವಾ ಒಂದು ಎಕ್ಕರೆಯಷ್ಟು ಭೂಮಿ ಇತ್ತು. ಅದನ್ನು ನಂಬಿ ಜೀವನ ನಡೆಸುವುದು ಕಷ್ಟಕರವಾಗಿತ್ತು. ಕೂಲಿಯನ್ನೇ ನಂಬಿ ಬದುಕಿದ್ದ ದಲಿತ ಕೂಲಿಕಾರರಿಗೆ ಸವರ್ಣೀಯರು ತಮ್ಮ ಜಮೀನಿನಲ್ಲಿ ಕೂಲಿ ಕೆಲಸ ನೀಡಲಿಲ್ಲ. ಈ ಎಲ್ಲಾ ಘಟನೆಗಳಿಂದ ಬೇಸತ್ತಿದ್ದ ದಲಿತರು ಗ್ರಾಮಗಳನ್ನು ಬಿಡಲು ಆರಂಬಿಸಿದ್ದರು, ಬದುಕನ್ನು ಅರಸಿ ಪಟ್ಟಣಗಳಿಗೆ ವಲಸೆ ಹೋಗಿ ಅಲ್ಲಿ ಕೂಲಿ ಮಾಡಿ ಬದುಕನ್ನು ಕಂಡುಕೊಳ್ಳಲು ಹರಸಾಹಸ ಪಟ್ಟರು. ಹುಟ್ಟಿ ಬೆಳೆದ ಭೂಮಿಯನ್ನು ಬಿಟ್ಟು ಪರ ಊರುಗಳಿಗೆ ಹೋಗಿ ನೆಲೆಸುವ ದಾರುಣ ಸ್ಥಿತಿ ನಿರ್ಮಾಣವಾಯಿತು. ಸಮಾಜದ ಅತ್ಯಂತ ಅನಿಷ್ಟ ಜಾತಿ ಪದ್ಧತಿಯಲ್ಲಿ ಸಿಲುಕಿಕೊಂಡು ದೌರ್ಜನ್ಯವನ್ನು ಸಹಿಸಲಾಗದೆ, ಅದನ್ನು ಎದುರಿಸಿ ಜೀವನವನ್ನು ಕಟ್ಟಿಕೊಳ್ಳಲೂ ಆಗದೆ ಹೆಣಗಾಡಿದ ದಲಿತರ ಸ್ಥಿತಿಯನ್ನು ಅಕ್ಷರಗಳಲ್ಲಿ ಕಟ್ಟಿಕೊಡುವುದು ಕಷ್ಟದ ಕೆಲಸ.

**2014ರಿಂದ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ**

ದಲಿತರ ಗುಡಿಸಲುಗಳನ್ನು ಸುಟ್ಟ ಮತ್ತು ದಲಿತರ ಮೇಲೆ ನಡೆದ ದೌರ್ಜನ್ಯ ಪ್ರಕರಣ 2014ರಿಂದ ಕೊಪ್ಪಳದ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು. 117 ಜನರ ಮೇಲೆ ಆರೋಪ ಪಟ್ಟಿ ಹೊರಿಸಲಾಗಿತ್ತು. 117 ಜನರಲ್ಲಿ ಇಬ್ಬರ ಹೆಸರು ಎರಡು ಸಾರಿ ಬಂದಿದೆ. ಹಾಗೂ ಒಬ್ಬರ ಹೆಸರು ಅಸ್ತಿತ್ವದಲ್ಲಿ ಇಲ್ಲದ ಕೃತಕ ಹೆಸರಾಗಿತ್ತು. ಅಂದರೆ, ಆರೋಪ ಪಟ್ಟಿಯಲ್ಲಿ ದಾಖಲಾದ ವ್ಯಕ್ತಿಗಳ ಸಂಖ್ಯೆ 114 ಮಾತ್ರ. ವಿಚಾರಣೆಯ ಹಂತದಲ್ಲಿನ ಹತ್ತು ವರ್ಷಗಳಲ್ಲಿ 11 ಜನ ನಿಧನರಾಗಿದ್ದರು. ಅಂತಿಮವಾಗಿ 101 ಜನರ ಮೇಲಿನ ಆರೋಪ ಸಾಬೀತಾಗಿದ್ದು, ಅದರಲ್ಲಿ 98 ಜನರಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ 5000 ರೂ. ದಂಡ ವಿಧಿಸಲಾಗಿದೆ. 3 ಜನರಿಗೆ 5 ವರ್ಷಗಳ ಕಠಿಣ ಶಿಕ್ಷೆ ಮತ್ತು ತಲಾ 2000 ರೂ. ದಂಡ ವಿಧಿಸಲಾಗಿದೆ. ಇಬ್ಬರು ಬಾಲ ನ್ಯಾಯಮಂಡಳಿ ವ್ಯಾಪ್ತಿಗೆ ಒಳಪಟ್ಟಿದ್ದರು. 27 ಜನರು ಸಾಕ್ಷಿಗಳಾಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದರು. ದೇಶದ ಗಮನವನ್ನು ಸೆಳೆದಿದ್ದ ಈ ಪ್ರಕರಣದ ಆರೋಪಿಗಳನ್ನು ಅಪರಾಧಿಗಳೆಂದು ಸಾಬೀತುಪಡಿಸಿ ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿದೆ. ಅಂದು ಈ ಪ್ರಕರಣ ದೇಶದ ಗಮನ ಸೆಳೆದಿತ್ತು. ಈಗ ಬಂದಿರುವ ನ್ಯಾಯಾಲಯದ ತೀರ್ಪು ಕೂಡಾ ದೇಶದ ಗಮನ ಸೆಳೆದಿದೆ. ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಕೇಳಲು ಭಯಬೀಳುತ್ತಿದ್ದ ದಲಿತರಿಗೆ ದೈರ್ಯನೀಡಿದ ಕೆಂಬಾವುಟದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡರು ಇವರಿಗೆ ಧೈರ್ಯ ತುಂಬಿ, ಅವರನ್ನು ಸಂಘಟಿಸಿ ಸ್ವಾಭಿಮಾನದ ಮತ್ತು ಬದುಕಿನ ಹೋರಾಟವನ್ನು ಕಟ್ಟಿದರು. ಇವರೆಲ್ಲರ ನಿರಂತರ ಹೋರಾಟದ ಭಾಗವಾಗಿ ಇಂದು ನೊಂದ ದಲಿತರಿಗೆ ನ್ಯಾಯ ಸಿಕ್ಕಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. ಈ ಪ್ರಕರಣ ಜಾತಿ ಮನಸುಗಳಿಗೆ ಒಂದು ಪಾಠವಾಗಿ, ಎಲ್ಲರೂ ಮನುಷ್ಯರಾಗಿ, ಜಾತಿ ಮತಗಳನ್ನು ಬಿಟ್ಟು ಒಟ್ಟಿಗೆ ಬಾಳುವ ದಾರಿಯನ್ನು ತೋರುವಂತಾಗಲಿ.




# ತೀರ್ಪಿಗೆ ದೇವರನ್ನು ಜವಾಬ್ದಾರರನ್ನಾಗಿ ಮಾಡೋದು ಎಷ್ಟು ಸರಿ?

ಅಯೋಧ್ಯೆ ಪ್ರಕರಣದ (ರಾಮಜನ್ಮಭೂಮಿ–ಬಾಬ್ರಿ ಮಸೀದಿ ಪ್ರಕರಣ) ತೀರ್ಪಿನ ಕುರಿತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ನಿವೃತ್ತಿಯ ಹೊಸ್ತಿಲಲ್ಲಿ ಮಾಡಿರುವ ಹೇಳಿಕೆ ಭಾರೀ ವಿವಾದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿರುವ ಡಿ.ವೈ. ಚಂದ್ರಚೂಡ್ ಅವರು ಅತ್ಯಂತ ವಿವಾದಾತ್ಮಕ ತೀರ್ಪುಗಳಲ್ಲಿ ಒಂದಾದ ಅಯೋಧ್ಯೆ ತೀರ್ಪು ಕುರಿತು ಬಹಿರಂಗಪಡಿಸಿದರು. "ಸಾಮಾನ್ಯವಾಗಿ ನಾವು ಪ್ರಕರಣಗಳನ್ನು ಎದುರಿಸುತ್ತೇವೆ. ಆದರೆ ಕೆಲವೊಮ್ಮೆ ನಾವು ತ್ವರಿತ ಪರಿಹಾರಕ್ಕೆ ಬರುವುದಿಲ್ಲ. ಮೂರು ತಿಂಗಳ ಕಾಲ ನನ್ನ ಮುಂದೆ ಅಯೋಧ್ಯೆ ತೀರ್ಪಿನ ಸಂದರ್ಭದಲ್ಲಿ ನಡೆದದ್ದು ಇದೇ. ಆಗ ನಾನು ದೇವರ ಮುಂದೆ ಕುಳಿತು ಈ ಸಮಸ್ಯೆಗೆ ಪರಿಹಾರಕ್ಕಾಗಿ ಪ್ರಾರ್ಥಿಸಿದೆ. ನಾನು ಪ್ರತಿದಿನ ದೇವರನ್ನು ಪೂಜಿಸುತ್ತೇನೆ. ದೇವರಲ್ಲಿ ನಂಬಿಕೆಯಿರುವವರಿಗೆ ಅವರು ಉತ್ತಮ ಪರಿಹಾರಗಳನ್ನು ನೀಡುತ್ತಾರೆ" ಎಂದು ಅವರು ಹೇಳಿದರು.

ದೇವರು ಪರಿಹಾರಗಳನ್ನು ಸೂಚಿಸಿದ ನಂತರ ನ್ಯಾಯಾಧೀಶರಿಗೆ ಉಳಿದಿರುವ ಏಕೈಕ ಕಾರ್ಯವೆಂದರೆ ಕಾನೂನುಗಳ ತಾರ್ಕಿಕ ವಾದದೊಂದಿಗೆ ತೀರ್ಪು ನೀಡುವುದು. ಅಂದಿನ ಆ ತೀರ್ಪಿನೊಂದಿಗೆ ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣವಾಯಿತು.

ಸಿಜೆಐ ಅವರ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡಿದ್ದ ಹಲವು ಸಂವಿಧಾನ ತಜ್ಞರು, ಬುದ್ಧಿಜೀವಿಗಳು ಹಾಗೂ ಜನಸಾಮಾನ್ಯರು ಸಿಜೆಐ ಹೇಳಿಕೆ ಕಂಡು ಬೆಚ್ಚಿ ಬಿದ್ದಿದ್ದಾರೆ. ಮತ್ತೊಂದೆಡೆ, ಹಿಂದುತ್ವವಾದಿ ರಾಜಕೀಯ ನಾಯಕರ ಹೃದಯ ರೋಮಾಂಚನಗೊಂಡಿದೆ. ಹಿಂದೂ–ಮುಸ್ಲಿಂ ಇಬ್ಬರ ನಡುವಿನ ಮೊಕದ್ದಮೆಯಲ್ಲಿ ಮುಸ್ಲಿಮರ ಪರವಾಗಿ ತೀರ್ಪು ನೀಡಿದ ಮುಸ್ಲಿಂ ನ್ಯಾಯಾಧೀಶರು 'ಅಲ್ಲಾಹನು ತನಗೆ ಪರಿಹಾರವನ್ನು ತೋರಿಸಿದ್ದಾನೆ' ಎಂದು ಹೇಳಿದರೆ ಏನಾಗಬಹುದು? ಎಂದು ಆತಂಕ ವ್ಯಕ್ತಪಡಿಸಿರುವ ಸಂವಿಧಾನ ತಜ್ಞರು, ತನ್ನದೇ ಆದ ತೀರ್ಪಿಗೆ ದೇವರನ್ನು ಜವಾಬ್ದಾರರನ್ನಾಗಿ ಮಾಡುವುದು ತಪ್ಪು ಎಂದು ಪ್ರತಿಕ್ರಿಯಿಸುತ್ತಿದ್ದಾರೆ.



**ನಮ್ಮ ಸಂವಿಧಾನವು ಭಾರತೀಯ ನಾಗರಿಕರಿಗೆ ನಿರ್ದಿಷ್ಟ ಧರ್ಮವನ್ನು ಅನುಸರಿಸುವ ಅಥವಾ ಯಾವುದೇ ಧರ್ಮವನ್ನು ಅನುಸರಿಸದಿರುವ ಹಕ್ಕನ್ನು ನೀಡುತ್ತದೆ. ಆದರೆ, ನ್ಯಾಯವನ್ನು ವಿತರಿಸುವ ವಿಷಯಕ್ಕೆ ಬಂದಾಗ, ಯಾವುದೇ ದೇವತೆಯು ಸಂವಿಧಾನಕ್ಕಿಂತ ಮೇಲಿರಬಾರದು ಅಥವಾ ನಿರ್ಧಾರದ ಮೂಲವಾಗಬಾರದು. ಭಾರತೀಯ ನ್ಯಾಯಾಂಗ ಇತಿಹಾಸದಲ್ಲಿ ಅತ್ಯಂತ ಸಂಕೀರ್ಣವಾದ ಮತ್ತು ದೀರ್ಘಾವಧಿಯ ಪ್ರಕರಣವೊಂದಕ್ಕೆ ದೇವರು ಪರಿಹಾರವನ್ನು ಒದಗಿಸಿದ್ದಾನೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಹೇಳಿಕೊಳ್ಳುವುದು ಆಕ್ಷೇಪಾರ್ಹವಾಗಿದೆ ಮಾತ್ರವಲ್ಲ ಅಪಾಯಕಾರಿಯೂ ಆಗಿದೆ.**

**ನಂಬಿಕೆ ವೈಯಕ್ತಿಕವಾದುದು**

ನ್ಯಾಯಾಧೀಶರು ಸಂವಿಧಾನ ಮತ್ತು ಶಾಸನ ಪುಸ್ತಕದಲ್ಲಿ ನಿಗದಿಪಡಿಸಿದ ಕಾನೂನುಗಳ ಮೂಲಕ ನ್ಯಾಯವನ್ನು ನೀಡಲು ಪ್ರತಿಜ್ಞೆ ಮಾಡುತ್ತಾರೆ. ಜಾತ್ಯತೀತ ಸಂವಿಧಾನದ ಪಾಲಕ ಎಂಬ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು ಈ ರೀತಿ ಮಾತನಾಡಿರುವುದು ಆಘಾತಕಾರಿಯಾಗಿದೆ. ಚಂದ್ರಚೂಡ್ ಅವರ ವೈಯಕ್ತಿಕ ನಂಬಿಕೆಯನ್ನು ಯಾರೂ ಪ್ರಶ್ನಿಸುವುದಿಲ್ಲ. ಅವರು ದೇವರುಗಳನ್ನು ಅಥವಾ ಪವಿತ್ರ ಗ್ರಂಥಗಳನ್ನು ನಂಬಲು ಸ್ವತಂತ್ರರು. ನಮ್ಮ ಸಂವಿಧಾನವು ಭಾರತೀಯ ನಾಗರಿಕರಿಗೆ ನಿರ್ದಿಷ್ಟ ಧರ್ಮವನ್ನು ಅನುಸರಿಸುವ ಅಥವಾ ಯಾವುದೇ ಧರ್ಮವನ್ನು ಅನುಸರಿಸದಿರುವ ಹಕ್ಕನ್ನು ನೀಡುತ್ತದೆ. ಆದರೆ, ನ್ಯಾಯವನ್ನು ವಿತರಿಸುವ ವಿಷಯಕ್ಕೆ ಬಂದಾಗ, ಯಾವುದೇ ದೇವತೆಯು ಸಂವಿಧಾನಕ್ಕಿಂತ ಮೇಲಿರಬಾರದು ಅಥವಾ ನಿರ್ಧಾರದ ಮೂಲವಾಗಬಾರದು. ಭಾರತೀಯ ನ್ಯಾಯಾಂಗ ಇತಿಹಾಸದಲ್ಲಿ ಅತ್ಯಂತ ಸಂಕೀರ್ಣವಾದ ಮತ್ತು ದೀರ್ಘಾವಧಿಯ ಪ್ರಕರಣವೊಂದಕ್ಕೆ ದೇವರು ಪರಿಹಾರವನ್ನು ಒದಗಿಸಿದ್ದಾನೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಹೇಳಿಕೊಳ್ಳುವುದು ಆಕ್ಷೇಪಾರ್ಹವಾಗಿದೆ ಮಾತ್ರವಲ್ಲ ಅಪಾಯಕಾರಿಯೂ ಆಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 11 ರಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನಿವಾಸದಲ್ಲಿ ವಿನಾಯಕ ಚತುರ್ಥಿ ಪೂಜೆಯಲ್ಲಿ ಭಾಗವಹಿಸಿದ್ದರು. ಇದು ಭಾರೀ ವಿವಾದಕ್ಕೆ ಕಾರಣವಾಗಿತ್ತು.

ನ್ಯಾಯಾಧೀಶರ ಹುದ್ದೆಯನ್ನು ಹೊಂದಿರುವವರು ಸಾಂವಿಧಾನಿಕ ಮಿತಿಗಳಲ್ಲಿ ಮತ್ತು ಕಾನೂನು ತರ್ಕಗಳ ಆಧಾರದ ಮೇಲೆ ನ್ಯಾಯ ಸಲ್ಲಿಸುವುದಾಗಿದೆ. ಇದರಲ್ಲಿ ವ್ಯಕ್ತಿಯ ಧರ್ಮವನ್ನು ಉಲ್ಲೇಖಿಸುವುದು ಸಂಪೂರ್ಣವಾಗಿ ಅನುಚಿತವಾಗಿದೆ. ಅಯೋಧ್ಯೆ ತೀರ್ಪಿನ ಸಮಯದಲ್ಲಿ ಸಿಜೆಐ ಆಗಿದ್ದ ರಂಜನ್ ಗೊಗೊಯ್ ಅವರನ್ನು ರಾಜ್ಯಸಭೆಗೆ ಕಳುಹಿಸಲಾಯಿತು ಮತ್ತು ಪೀಠದಲ್ಲಿದ್ದ ಇಬ್ಬರು ಹೆಚ್ಚುವರಿ ನ್ಯಾಯಾಧೀಶರನ್ನು ಸಿಜೆಐಗಳಾಗಿ ಬಡ್ತಿ ನೀಡಲಾಗಿದೆ. ಇಬ್ಬರು ಹೆಚ್ಚುವರಿ ನ್ಯಾಯಾಧೀಶರಲ್ಲಿ ಒಬ್ಬರನ್ನು ನಿವೃತ್ತಿಯ ನಂತರ ಗವರ್ನರ್ ಆಗಿ ಮತ್ತು ಇನ್ನೊಬ್ಬರನ್ನು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಾಧಿಕರಣದ ಅಧ್ಯಕ್ಷರಾಗಿ ನೇಮಿಸಲಾಗಿದೆ ಎಂದು ತಜ್ಞರು ಉಲ್ಲೇಖಿಸಿದ್ದಾರೆ.

**ಹಿಂದುತ್ವವಾದಿಗಳ ವಿಧ್ವಂಸಕ ಹಕ್ಕುಗಳಿಗೆ ಬಾಗಿಲು ತೆರೆದಿದ್ದಾರೆ**

ವ್ಯಾಜ್ಯಕ್ಕೆ ದೈವಿಕವಾಗಿ ಸೂಚಿಸಿದ ಪರಿಹಾರವನ್ನು ತಾನು ನೀಡಿದೆ ಎಂದು ಸಿಜೆಐ ಭಾವಿಸುತ್ತಾರೆ ಎಂಬ ಅಂಶವು, ಪೂಜಾ ಸ್ಥಳಗಳ ಕಾಯಿದೆ, 1991 ಮತ್ತು ಆಗಸ್ಟ್ 15, 1947ರಲ್ಲಿ ಇದ್ದ ಪೂಜಾಸ್ಥಳದ ಸ್ವರೂಪವನ್ನು ಬದಲಾಯಿಸಲು ಕಟ್ಟುನಿಟ್ಟಾದ ನಿರ್ಬಂಧದ ಹೊರತಾಗಿಯೂ, ಗ್ಯಾನ್‌ವ್ಯಾಪಿ ವಿವಾದವನ್ನು (ಮತ್ತು ಇತರ ವಿವಾದಗಳನ್ನು) ಪುನಃ ತೆರೆಯಲು ಅವರು ಏಕೆ ಸಹಾಯ ಮಾಡಿದ್ದಾರೆ ಎಂಬುದನ್ನು ವಿವರಿಸಬಹುದು. ಹಿಂದುತ್ವ ಗುಂಪುಗಳು ದೇಶದಾದ್ಯಂತ ಮುಸ್ಲಿಂ ಪೂಜಾ ಸ್ಥಳಗಳ ಮೇಲೆ ಹಕ್ಕು ಸಾಧಿಸುತ್ತಿರುವಾಗ, ನಮ್ಮ ನ್ಯಾಯಾಲಯದಲ್ಲಿ ನಿಸ್ಸಂದೇಹವಾಗಿ ಅನುಸರಿಸುವ ದೈವಿಕ–ನಿರ್ದೇಶಿತ ಪರಿಹಾರಗಳ ಬಗೆಗೆ ಇದು ಒಂದು ಸೂಚಕವಾಗಿದೆ. ಹಿಂದುತ್ವ ಸಂಘಟನೆಗಳ ನೂರಾರು ವಿಧ್ವಂಸಕ ಹಕ್ಕುಗಳಿಗೆ ಅವರು ಬಾಗಿಲು ತೆರೆದಿದ್ದಾರೆ. ಆ ಪ್ರಕರಣಗಳಲ್ಲಿನ ತೀರ್ಪುಗಳನ್ನು ನ್ಯಾಯಮೂರ್ತಿ ಚಂದ್ರಚೂಡ್ ಅವರು ಹೊಸದಾಗಿ ಮುದ್ರಿಸಲಾದ "ನ್ಯಾಯದ ದೇವತೆ"ಯ ಪಾದಗಳಿಗೆ ಗೌರವಪೂರ್ವಕವಾಗಿ ಇಡಬಹುದು ಎನ್ನುತ್ತಾರೆ 'ದಿ ವೈರ್' ನ ಲೇಖಕ ಸಿದ್ಧಾರ್ಥ್ ವರದರಾಜನ್.

ನ್ಯಾಯಮೂರ್ತಿ ಚಂದ್ರಚೂಡ್ ಅವರು ಅಯೋಧ್ಯೆ ವಿಷಯದಲ್ಲಿ ನೀಡಲು ಸಹಾಯ ಮಾಡಿದ ತೀರ್ಪು ಕಾನೂನುಬದ್ಧವಾಗಿ ಅಸಮರ್ಥವಾಗಿದೆ ಎಂದು ತಿಳಿದಿರುವ ಕಾರಣದಿಂದಲೇ, ಈ ರೀತಿಯ 'ದೈವಿಕ' ತರ್ಕಬದ್ಧತೆ ಮತ್ತು ಭವ್ಯವಾದ ನಿಲುವಿನಲ್ಲಿ ಆಶ್ರಯ ಪಡೆಯುತ್ತಿದ್ದಾರೆ ಎಂಬುದು ಸತ್ಯ. ಹಾಗೆ ಮಾಡುವ ಮೂಲಕ, ಅವರು ಖಂಡಿತವಾಗಿಯೂ 'ದೇವರ' ಮೇಲೂ ದೊಡ್ಡ ಅನ್ಯಾಯವನ್ನು ಮಾಡುತ್ತಿದ್ದಾರೆ ಎಂದು ಸಿದ್ಧಾರ್ಥ್ ಬರೆಯುತ್ತಾರೆ.

**ನ್ಯಾಯಾಂಗದ ಪವಿತ್ರ ಗ್ರಂಥ ಸಂವಿಧಾನ ಮಾತ್ರ**

ಅಯೋಧ್ಯೆಯ ಬಾಬರಿ ಮಸೀದಿಯನ್ನು ಆರೆಸ್ಸೆಸ್–ಬಿಜೆಪಿ–ವಿಎಚ್‌ಪಿಯ 'ಕರಸೇವಕರು' ಎನಿಸಿಕೊಂಡವರು ಧ್ವಂಸಗೊಳಿಸಿದರು. ಸುಪ್ರೀಂ ಕೋರ್ಟ್ ನಲ್ಲಿ ಈ ಸಂಘಟನೆಗಳು ನೀಡಿದ ಭರವಸೆಯನ್ನು ಉಲ್ಲಂಘಿಸಿ ಈ ಹೇಯ ಕೃತ್ಯ ನಡೆಸಲಾಗಿದೆ. ಈ ಜಾಗ ಯಾರಿಗೆ ಸೇರಿದ್ದು ಎಂಬ ವಿಚಾರದಲ್ಲಿ ಹಲವು ವರ್ಷಗಳಿಂದ ವ್ಯಾಜ್ಯ ನಡೆಯುತ್ತಿತ್ತು. ನವೆಂಬರ್ 9, 2019 ರಂದು, ಮಸೀದಿಯನ್ನು ಕೆಡವಲಾದ ಜಾಗದಲ್ಲಿ ದೇವಾಲಯವನ್ನು ನಿರ್ಮಿಸಲು ಸುಪ್ರೀಂ ಕೋರ್ಟ್ ತೀರ್ಪು ನೀಡಿತು. ಈ ಪ್ರಕರಣದಲ್ಲಿ ನೀಡಿರುವ ತೀರ್ಪು ನ್ಯಾಯವಲ್ಲ ಎಂದು ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಕ್ಷ ಹೇಳಿದೆ. ಹೀಗಿರುವಾಗ ತೀರ್ಪಿನ ಪೀಠದಲ್ಲಿ ಉಪಸ್ಥಿತರಿದ್ದ ಡಿ.ವೈ. ಚಂದ್ರಚೂಡ್ ಅವರು ಇದಕ್ಕೆ ಪರಿಹಾರ ಕೊಟ್ಟಿದ್ದು ದೇವರೇ ಎಂದು ಹೇಳಿರುವುದು ಒಪ್ಪಲಾಗದು. ನ್ಯಾಯಾಂಗದ ಪವಿತ್ರ ಗ್ರಂಥ ಸಂವಿಧಾನ ಮಾತ್ರ ಎಂಬುದನ್ನು ಉನ್ನತ ಹುದ್ದೆಯಲ್ಲಿರುವವರು ಅರಿತುಕೊಳ್ಳುವುದು ಒಳ್ಳೆಯದು.

*–ಸಿ.ಸಿದ್ದಯ್ಯ*

# ಕಬ್ಬು ಬೆಳೆಗಾರರ ಸಂಕಷ್ಟಗಳನ್ನು ಹೆಚ್ಚಿಸುವ ಕರಡು ಆದೇಶವನ್ನು ಹಿಂತೆಗೆದುಕೊಳ್ಳಬೇಕು: ಎಐಎಸ್‌ಎಫ್‌ಎಫ್

ಸಕ್ಕರೆ ಉತ್ಪಾದನಾ ಪ್ರಕ್ರಿಯೆಯಲ್ಲಿನ ತಾಂತ್ರಿಕ ಪ್ರಗತಿ ಮತ್ತು ಉದ್ಯಮದಲ್ಲಿನ ಇತರ ಬದಲಾವಣೆಗಳಿಂದಾಗಿ 1966ರ ಸಕ್ಕರೆ (ನಿಯಂತ್ರಣ) ಆದೇಶವನ್ನು ಬದಲಿಸಬೇಕಾಗಿದೆ ಎನ್ನುತ್ತ ಕೇಂದ್ರ ಸರ್ಕಾರವು ಕರಡು ಸಕ್ಕರೆ (ನಿಯಂತ್ರಣ) ಆದೇಶ, 2024 ಅನ್ನು ಪ್ರಕಟಿಸಿದೆ.

ಈ ನಡೆಯನ್ನು ವಿರೋಧಿಸಿರುವ ಅಖಿಲ ಭಾರತ ಕಬ್ಬುರೈತರ ಒಕ್ಕೂಟ (ಎಐಎಸ್‌ಎಫ್‌ಎಫ್), ಈ ಮೂಲಕ ಕೇಂದ್ರ ಸರ್ಕಾರವು ಕಬ್ಬು ರೈತರಿಗೆ ಸ್ವಲ್ಪವಾದರೂ ಪ್ರಯೋಜನಗಳನ್ನು ಕೊಡುವ ಕೆಲವು ನಿಬಂಧನೆಗಳನ್ನು ಸಹ ಕೈಬಿಟ್ಟಿದೆ ಎಂದು ಆರೋಪಿಸಿದೆ. ಕಬ್ಬಿನ ರೈತರನ್ನು ತೀವ್ರ ಬಿಕ್ಕಟ್ಟಿನಿಂದ ಪಾರುಮಾಡಲು ಕರಡು ಆದೇಶವನ್ನು ಹಿಂಪಡೆಯಬೇಕೆಂದು ಅದು ಒತ್ತಾಯಿಸಿದೆ.

ಹೆಚ್ಚುತ್ತಿರುವ ಲಾಗುವಾಡು ವೆಚ್ಚಗಳು ಮತ್ತು ಅನಿರೀಕ್ಷಿತ ಹವಾಮಾನ ಬದಲಾವಣೆಯಿಂದ ಸವಾಲುಗಳನ್ನು ಎದುರಿಸಲು ರೈತರು ಹೆಣಗಾಡುತ್ತಿರುವ ಸಮಯದಲ್ಲಿ ಕೇಂದ್ರ ಸರ್ಕಾರವು ಇರುವ ಕೆಲವು ರೈತ ಸ್ನೇಹಿ ನಿಬಂಧನೆಗಳನ್ನು ಕೂಡ ತೆಗೆದುಹಾಕಲು ಹೊರಟಿದೆ.

"ಸಕ್ಕರೆ ಕಾರ್ಖಾನೆಗಳ ಬೃಹತ್ ಲಾಭದಿಂದ ರೈತರಿಗೆ ಹೆಚ್ಚುವರಿ ಬೆಲೆಯನ್ನು ಒದಗಿಸುವ ನಿಬಂಧನೆಯನ್ನು ತೆಗೆದುಹಾಕುವುದರ ಜೊತೆಗೆ, ರಾಜ್ಯ ಸರ್ಕಾರಗಳು ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಒಂದು ರಾಜ್ಯ ಸಲಹಾ ಬೆಲೆಯನ್ನು (ಎಸ್‌ಎಪಿ) ಘೋಷಿಸಲು ಅನುವು ಮಾಡಿಕೊಡುವ ನಿಬಂಧನೆಯನ್ನು ಕೇಂದ್ರ ಸರ್ಕಾರ ತೆಗೆದುಹಾಕಿದೆ" ಎಂದು ಈ ಕರಡಿನ ಬಗ್ಗೆ ಹೇಳುತ್ತ ಎಐಎಸ್‌ಎಫ್‌ಎಫ್ ಅಧ್ಯಕ್ಷ ಡಿ.ರವೀಂದ್ರನ್ ಟಿಪ್ಪಣಿ ಮಾಡಿದ್ದಾರೆ.

ಈ ವರ್ಷದ ಆರಂಭದಲ್ಲಿ, ಕೇಂದ್ರವು ಪ್ರತಿ ಕ್ವಿಂಟಲ್‌ಗೆ ಶೇ. 10.25ರಷ್ಟು ರಿಕವರಿ ದರಕ್ಕೆ ರೂ. 340 ಮತ್ತು ಶೇ. 9.5ಕ್ಕಿಂತ ಕಡಿಮೆ ರಿಕವರಿಗೆ ರೂ. 315.10ರ 'ನ್ಯಾಯಯುತ ಮತ್ತು ಫಲದಾಯಕ ಬೆಲೆ' (ಎಫ್‌ಆರ್‌ಪಿ)ಗಳನ್ನು ಘೋಷಿಸಿತು.

ಈ ಕರಡು ಆದೇಶದ ಕುರಿತು ಕೇಂದ್ರ ಸರ್ಕಾರ ಸಕ್ಕರೆ ಕಾರ್ಖಾನೆ ಮಾಲಿಕರುಗಳ ಸಂಘಗಳು, ಸಿಎಂಡಿಗಳು, ಎಂಡಿಗಳು ಮತ್ತು ಸಿಇಒಗಳಿಂದ ಸಲಹೆಗಳನ್ನು ಆಹ್ವಾನಿಸಿದೆ. ಆದರೆ ಅತ್ಯಂತ ದುರದೃಷ್ಟದ ಸಂಗತಿಯೆಂದರೆ, ಕಬ್ಬು ಉತ್ಪಾದಿಸುವ ರೈತರನ್ನು ಕರಡು ಆದೇಶದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನೋಂದಾಯಿಸಲು ಸಹ ಕೇಳಿಲ್ಲ ಎಂದು ಅಖಿಲ ಭಾರತ ಕಬ್ಬು ರೈತರ ಒಕ್ಕೂಟದ ಅಧ್ಯಕ್ಷ ರವೀಂದ್ರನ್ ಖೇದ ವ್ಯಕ್ತಪಡಿಸಿದ್ದಾರೆ.

ಕರಡು ಆದೇಶದಲ್ಲಿ ಅಳವಡಿಸಲಾದ ಹೊಸ ನಿಬಂಧನೆಯು ಸಕ್ಕರೆ ಕಾರ್ಖಾನೆಗಳು ಸಕ್ಕರೆ ಮತ್ತು ಎಥೆನಾಲ್‌ನಂತಹ ಉಪ ಉತ್ಪನ್ನಗಳ ಮಾರಾಟಕ್ಕೆ ಕೇಂದ್ರ ಸರ್ಕಾರದ ಅನುಮತಿ/ಅನುಮೋದನೆಯನ್ನು ಪಡೆಯಬೇಕು ಎಂಬ ಷರತ್ತನ್ನು ಸೇರಿಸಿರುವುದು ರೈತರ ಮೇಲೆ ತೀವ್ರ ದುಷ್ಪರಿಣಾಮ ಬೀರಲಿದೆ, ಪುಟ 12 ಕ್ಕೆ

## ಕನ್ನಡ ಸಾಹಿತ್ಯ ಸಮ್ಮೇಳನ......... ಪುಟ 3 ರಿಂದ

ಸಮ್ಮೇಳನದ ಚರ್ಚೆಯನ್ನು ಹೈಜಾಕ್ ಮಾಡುವ ಯೋಜನೆ ಈ ಸೂಚನೆಗಳ ಹಿಂದೆ ಇಲ್ಲದಿಲ್ಲ.

ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಬಹುದಾದ ಮಟ್ಟದಲ್ಲಿ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ಬಲಪಂಥೀಯರ ಕೊರತೆಯೂ ಈ ಸೂಚನೆಗೆ ಒಂದು ಕಾರಣವಾಗಿರಬಹುದೇ?

ಜೋಷಿಯವರು ಅಧ್ಯಕ್ಷರಾದ ಮೇಲೆ ಸಾಹಿತ್ಯ ಪರಿಷತ್ ತೀರಾ ಹಾದಿ ತಪ್ಪಿದೆ ಎನ್ನುವ ಅಭಿಪ್ರಾಯ ಗಟ್ಟಿಯಾಗಿ ಕೇಳುತ್ತಿದೆ. ಇವರನ್ನು ಪ್ರತಿಷ್ಠಾಪಿಸುವಲ್ಲಿ ಶ್ರಮಿಸಿದ 'ಸಂಘ' ವು ಕನ್ನಡ ಸಾಹಿತ್ಯ ಪರಿಷತ್ತನ್ನು ಹಂತ ಹಂತವಾಗಿ ನಾಶಪಡಿಸುತ್ತಿದೆ ಎಂದು ತೀವ್ರ ಪ್ರತಿಭಟನೆಗಳೂ ಬಂದಿವೆ. ಈಗ ಹೊಸ ಪರಂಪರೆಯನ್ನು ಹುಟ್ಟು ಹಾಕುವ ನೆಪದಲ್ಲಿ ಸಾಹಿತ್ಯಿಕ ಸಂಸ್ಥೆಯೊಂದನ್ನು ಸಂಬಂಧಿಸದ ಶಕ್ತಿಗಳ ಆಟಕ್ಕೆ ಒಪ್ಪಿಸುವ ಹುನ್ನಾರ ನಡೆದಿದೆ.

ಕಳೆದ ಶನಿವಾರ ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಹೆಸರಲ್ಲಿ ಪುಸ್ತಕ ಮಾರಾಟ ಹಬ್ಬದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿಯಿಂದ ಆರ್.ಎಸ್.ಎಸ್. ಪ್ರಧಾನ ಕಛೇರಿಯವರೆಗೆ ರಾಷ್ಟ್ರೋತ್ಥಾನ ಪರಿಷತ್ ವರೆಗೆ ಭುವನೇಶ್ವರಿಯ ಮೆರವಣಿಗೆ, ಶೋಭಾ ಯಾತ್ರೆ ನಡೆಸಲಾಗಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಅವರೇ ಚಾಲನೆ ನೀಡಿದ್ದಾರೆ! ಹೀಗೆ ಸಂಘಪರಿವಾರ ಕನ್ನಡ ಸಾಹಿತ್ಯ ಪರಿಷತ್ತನ್ನು ತನ್ನೊಂದಿಗೆ ಸಮೀಕರಿಸಿಕೊಳ್ಳುತ್ತಿದೆ. ಎಲ್ಲರ ಸಾಹಿತ್ಯ ಪರಿಷತ್ ಸಂವಿಧಾನ ಒಪ್ಪದ, ಮತ್ತು ಪ್ರಾದೇಶಿಕ ಭಾಷೆಗಳ ಸಮಾಧಿ ಮಾಡಿ ಸಂಸ್ಕೃತ, ಹಿಂದಿ ಭಾಷೆಗಳನ್ನು ಹೇರಿ ಯಜಮಾನಿಕೆ ಸ್ಥಾಪಿಸುವ ಶಕ್ತಿಯೊಂದಿಗೆ ಬೆಸಗೊಳ್ಳುವುದು ನಾಡು, ನುಡಿಗೆ ಒದಗಲಿರುವ ಅಪಾಯದ ಸೂಚನೆ. ಸಾಹಿತ್ಯ ಸಮ್ಮೇಳನಕ್ಕೂ ಇಂತಹ ಜಾಢ್ಯ ವಿಸ್ತರಿಸುವ ಯೋಜನೆಇಲ್ಲ ಎಂದು ಹೇಗೆ ಹೇಳುವುದು?

ಸಾಹಿತ್ಯ ಸಮ್ಮೇಳನವು ಸನಿಹದಲ್ಲಿರುವ ಈ ಹಂತದಲ್ಲಿ ನಿಜಕ್ಕೂ ಚರ್ಚೆಯಾಗಬೇಕಿರುವುದು ಸಮ್ಮೇಳನದ ಚರ್ಚೆಯ ಆದ್ಯತೆ–ಸ್ವರೂಪಗಳ ಬಗೆಗೆ. ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಲು ಸರಕಾರ ಕೋಟಿಗಟ್ಟಲೆ ಹಣವನ್ನು ಅನುದಾನವಾಗಿ ನೀಡುತ್ತದೆ. ಜನರ ದುಡ್ಡು ಸಹ ಸಾಕಷ್ಟು ಖರ್ಚಾಗುತ್ತದೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುತ್ತಿರುವುದು ಭಾಷೆ, ಸಾಹಿತ್ಯದ ಬಗ್ಗೆ ಅಭಿಮಾನದ ಉತ್ಸುಕತೆಯನ್ನು ತೋರುತ್ತಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ ಹೆಚ್ಚು ಹೆಚ್ಚು ಜನರು ಪಾಲ್ಗೊಳ್ಳುವುದು ಒಂದು ಸಕಾರಾತ್ಮಕವಾದ ಅಂಶ. ಆದರೆ ಸಮ್ಮೇಳನದ ಕಲಾಪಗಳು ಅರ್ಥಪೂರ್ಣವಾಗಿ ನಡೆಯುತ್ತಿವೆಯೇ ಎಂದರೆ ಸಿಗುವ ಉತ್ತರ ನಿರಾಶಾದಾಯಕ. ಹೆಚ್ಚು ಜನರು ಭಾಗವಹಿಸುತ್ತಾರೆಂದ ಮಾತ್ರಕ್ಕೆ ಸಾಹಿತ್ಯ ಸಮ್ಮೇಳನವು ಯಾವುದೋ ಜಾತ್ರೆ–ಪರಿಷೆಯಂತೆ ನಡೆಯುವುದು. ಕೆಲವರನ್ನು ಮೆರೆಸುವುದು, ದುಂದು ವೆಚ್ಚದ ಅಂದಾದುಂದಿ ವ್ಯವಹಾರಗಳೇ ಮುಖ್ಯವಾಗುವುದು ಸಮರ್ಥನೀಯವಲ್ಲ.

ಹೆಚ್ಚು ಜನರನ್ನು ಒಳಗೊಂಡೂ ಸಹ ಸಮ್ಮೇಳನದ ಕಲಾಪಗಳನ್ನು ಅರ್ಥಪೂರ್ಣಗೊಳಿಸುವುದು ಹೇಗೆ, ಹೊಸ ಸನ್ನಿವೇಶಕ್ಕೆ, ಸವಾಲುಗಳಿಗೆ ಮುಖಾಮುಖಿಯಾಗುವುದು ಹೇಗೆ? ಸರಿಯಾದ ವಿಷಯಗಳ ಮೇಲೆ ಸಮರ್ಪಕವಾದ ರೀತಿಯ ಚರ್ಚೆಗಳು, ಸಂವಾದಗಳನ್ನು ನಡೆಸುವುದು ಹೇಗೆ ಎಂಬ ಬಗೆಗೆ ಸಾಹಿತ್ಯ ಪರಿಷತ್ ಅಧ್ಯಕರು ಸೇರಿದಂತೆ ಎಲ್ಲರೂ ಯೋಚಿಸಬೇಕಾದ ವಿಷಯವಾಗಿದೆ.

ಇಂತಹ ಪ್ರಮುಖ ಸಂದರ್ಭದಲ್ಲಿ ಮತ್ತೆ ನೆನಪಿಸುವುದು ಕನ್ನಡದ ಸೇವೆ ಮಾಡಿದವರಿಗೆ ಗೌವ ನೀಡಲು ಹತ್ತಾರು ವೇದಿಕೆಗಳಿವೆ. ಆದರೆ ಕನ್ನಡ ಸಾಹಿತ್ಯ ಸಮ್ಮೇಳನದ ಅದ್ಯಕ್ಷರು ಸಾಹಿತಿ–ಲೇಖಕ ವಲಯದಿಂದಲೇ ಆಗಬೇಕು. ಕರ್ನಾಟಕದ ಎಲ್ಲರೂ ಎಚ್ಚರದಿಂದ ದನಿ ಎತ್ತ ಬೇಕು.

## ಕಬ್ಬು ಬೆಳೆಗಾರರ ಸಂಕಷ್ಟಗಳನ್ನು ಹೆಚ್ಚಿಸುವ ಕರಡು ಆದೇಶವನ್ನು ಹಿಂತೆಗೆದುಕೊಳ್ಳಬೇಕು..... ಪುಟ 11 ರಿಂದ

ರೈತರನ್ನು ಸಕ್ಕರೆ ಕಾರ್ಖಾನೆಗಳ ಮರ್ಜಿಗೆ ಒಳಪಡಿಸುತ್ತದೆ ಎಂದು ಎಐಎಸ್‌ಎಫ್‌ಎಫ್ ಒಂದು ನಿರ್ಣಯದಲ್ಲಿ ಹೇಳಿದೆ.

ಸಕ್ಕರೆ ಕಾರ್ಖಾನೆಗಳು ಬ್ಯಾಂಕ್‌ಗಳಲ್ಲಿ ಅಡಮಾನ ಇಟ್ಟಿರುವ ಸಕ್ಕರೆ ದಾಸ್ತಾನು ಮಾರಾಟ ಮಾಡಲು ಈ ಅನುಮತಿ ಅತ್ಯಗತ್ಯ. ಅನುಮತಿ ಪಡೆದ ನಂತರ ವ್ಯವಸ್ಥಿತ ಪ್ರಕ್ರಿಯೆ ಮತ್ತು ಸಕ್ಕರೆ ಮಾರಾಟವನ್ನು ಪೂರ್ಣಗೊಳಿಸಲು ಅಗತ್ಯವಿರುವ ಸಮಯವನ್ನು ಪರಿಗಣಿಸಿದರೆ, ಕಬ್ಬು ಖರೀದಿಸಿದ 14 ದಿನಗಳಲ್ಲಿ ರೈತರಿಗೆ ಪಾವತಿ ಮಾಡಬೇಕೆಂಬ ಈಗಿರುವ ಆದೇಶದಲ್ಲಿನ ನಿಬಂಧನೆಯು ನಿಷ್ಪ್ರಯೋಜಕವಾಗುತ್ತದೆ ಎಂದು ಅದು ಹೇಳಿದೆ.

ಹೊಸ ಆದೇಶವು ರೈತರು ಸರಬರಾಜು ಮಾಡಿದ ಕಬ್ಬಿಗೆ ಯಾವಾಗ ಬೆಲೆ ಪಾವತಿಸಬೇಕೆಂದು ನಿರ್ಧರಿಸುವ ಅಧಿಕಾರವನ್ನು ಸಕ್ಕರೆ ಕಾರ್ಖಾನೆಗಳ ಮಾಲಿಕರಿಗೆ ನೀಡುತ್ತದೆ. ಈಗಾಗಲೇ ಆದೇಶದಲ್ಲಿ ಅವಕಾಶವಿದ್ದರೂ ಕಬ್ಬು ಪಾವತಿ ವಿಳಂಬದಿಂದ ಕಬ್ಬು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ದೇಶದ ಸುಮಾರು 5 ಕೋಟಿ ಕಬ್ಬು ರೈತರ ಹಿತಾಸಕ್ತಿಗಳ ಮೇಲೆ ಗಂಭೀರಪರಿಣಾಮ ಬೀರುತ್ತದೆ ಎಂದು ಮುಂದುವರೆದು ರವೀಂದ್ರನ್ ಹೇಳಿದ್ದಾರೆ.

ಈ ಪ್ರಸ್ತಾವಿತ ಆದೇಶವು ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಕೂಡ ಕಸಿದುಕೊಳ್ಳುತ್ತದೆ ಮತ್ತು ಅಧಿಕಾರದ ಮತ್ತಷ್ಟು ಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಈ ಮೂಲಕ ಒಕ್ಕೂಟ ತತ್ವದ ಮೇಲೆ ಪರಿಣಾಮ ಬೀರುತ್ತದೆ. ಕಬ್ಬು ಬೆಳೆಗಾರರ ಪ್ರತಿನಿಧಿಗಳನ್ನು ಆಹ್ವಾನಿಸಬೇಕು, ಸದ್ಯಕ್ಕೆ ಈ ಆದೇಶದ ಜಾರಿಗೆ ಮುಂದಾಗಬಾರದು ಎಂದು ಅಖಿಲ ಭಾರತ ಕಬ್ಬು ರೈತರ ಒಕ್ಕೂಟ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

## ಮಾಧ್ಯಮ ಪರಿಸ್ಥಿತಿ.... ಪುಟ 6 ರಿಂದ

ಪೂರ್ಣವಾಗಿ ಪ್ರಸಾರದಿಂದಲೇ ಅಥವಾ ಹಣ ಪಾವತಿಯಿಂದ ಬ್ಲಾಕ್ ಆದ 15 ಯೂಟ್ಯೂಬ್ ಚಾನೆಲಿಗರು ಚುನಾವಣಾ ಕಮಿಶನ್‌ಗೆ ದೂರು ಕೊಟ್ಟರು. ಆದರೆ ಯಾವ ಕ್ರಮವನ್ನೂ ಕಮಿಶನ್ ತೆಗೆದುಕೊಳ್ಳಲಿಲ್ಲ.

ಮಾಧ್ಯಮಗಳ ಮೇಲೆ ದಾಳಿ ಮಾಡುವುದರಲ್ಲಿ ಸರಕಾರ ಮಾತ್ರವಲ್ಲ, ಹಲವು ಖಾಸಗಿ ಪಟ್ಟಭದ್ರ ಹಿತಾಸಕ್ತಿಗಳು ಸೇರಿವೆ. ಕರ್ನಾಟಕದಲ್ಲಿ ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣ ಮತ್ತು ಯಲಹಂಕ ಕ್ರಿಮಿನಲ್ ಪ್ರಕರಣವೊಂದರಲ್ಲಿ ಅದರಲ್ಲಿ ಸಾರ್ವಜನಿಕ ಆರೋಪಕ್ಕೆ ಗುರಿಯಾದ ವ್ಯಕ್ತಿಗಳು ಕೋರ್ಟಿನಿಂದ ಎಲ್ಲ ಮಾಧ್ಯಮಗಳ ಮೇಲೆ ಇಂಜಕ್ಶನ್ ತಂದು, ಆ ಪ್ರಕರಣದ ಕುರಿತು ಯಾವುದೇ ವರದಿ ಪ್ರಕಟಿಸದಂತೆ ನಿರ್ಬಂಧ ಹೇರಿದವು. ಇದೇ ರೀತಿಯಲ್ಲಿ ಇತ್ತೀಚಿನ ಕರ್ನಾಟಕ ವಿಧಾನಸಭೆ ಮತ್ತು ಲೋಕಸಬಾ ಚುನಾವಣೆಗಳ ಮೊದಲು ಹಲವು ಅಭ್ಯರ್ಥಿಗಳು ಅದರಲ್ಲೂ ವಿಶೇಷವಾಗಿ ದಕ್ಷಿಣಕನ್ನಡ ಜಿಲ್ಲೆಯ ಬಿಜೆಪಿ ಅಭ್ಯರ್ಥಿಗಳು ತಮ್ಮ ಯಾವುದೇ 'ಸಿಡಿ' ಕುರಿತು ವರದಿ ಮಾಡದಂತೆ ಮಾಧ್ಯಮಗಳ ಮೇಲೆ ಕೋರ್ಟಿನ ನಿರ್ಬಂಧ ತಂದಿದ್ದರು. ತಮ್ಮ ವಿರುದ್ಧ ಯಾವುದೇ ಮಾನಹಾನಿಕರ ಸುದ್ದಿಗಳನ್ನು ಪ್ರಸಾರ ಮಾಡದಂತೆ ನಿರ್ಬಂಧಕಾಜ್ಞೆ ಕೋರಿ ಮಾಜಿ ಸಿಎಂ, ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಕೋರ್ಟಿನ ನಿರ್ಬಂಧ ತಂದಿದ್ದರು. ಇವೆಲ್ಲದಕ್ಕೆ 'ಕುಂಬಳಕಾಯಿ ಕಳ್ಳ ಅಂತ ಹೇಳುವ ಮೊದಲೇ ಹೆಗಲು ಮುಟ್ಟಿಕೊಳ್ಳುವುದು' ಎನ್ನಬಹುದೇ?

**ಪತ್ರಕರ್ತರ ಮೇಲೆ ದಾಳಿ**

ಪತ್ರಕರ್ತರ ಮೇಲೆ ಪೋಲಿಸರಿಂದ ಅಥವಾ ಇತರ ಪಟ್ಟಭದ್ರ ಹಿತಾಸಕ್ತಿಗಳಿಂದ ದೈಹಿಕ ಹಲ್ಲೆಗಳೂ, ಪೋಲಿಸ್ ಪ್ರಕರಣಗಳೂ ಹೆಚ್ಚುತ್ತಿವೆ. 2022ರಲ್ಲಿ 194 (7 ಮಹಿಳೆಯರು ಸೇರಿದಂತೆ) ಪತ್ರಕರ್ತರು ಇಂತಹ ದಾಳಿಗಳಿಗೆ ತುತ್ತಾಗಿ 8 ಪತ್ರಕರ್ತರು ಕೊಲೆಯಾದರೆ, 2023ರಲ್ಲಿ ಇಂತಹ ದಾಳಿಗಳ ಸಂಖ್ಯೆ 226ಕ್ಕೇರಿದೆ. ದಾಳಿಗೆ ಗುರಿಯಾದವರಲ್ಲಿ 30 ಮಹಿಳೆಯರಿದ್ದು, 5 ಪತ್ರಕರ್ತರು ಕೊಲೆಯಾಗಿದ್ದಾರೆ. 2023ರಲ್ಲಿ ಅತಿ ಹೆಚ್ಚು ದಾಳಿಗಳು ನಡೆದ ರಾಜ್ಯಗಳೆಂದರೆ– ದೆಹಲಿ (54), ಪ.ಬಂಗಾಳ(25), ಮಣಿಪುರ (22). ಇಂತಹ ದಾಳಿಗಳಲ್ಲಿ 148 ದಾಳಿಗಳು ಪೋಲಿಸ್ ಮುಂತಾದ ಸರಕಾರಿ ಸಿಬ್ಬಂದಿಯಿಂದ ಬಂದರೆ, ಉಳಿದ 78 ರಾಜಕೀಯ ನಾಯಕರು/ ಕಾರ್ಯಕರ್ತರು, ಕ್ರಿಮಿನಲ್ ಶಕ್ತಿಗಳಿಂದ ಬಂದಿದೆ. ಸರಕಾರಿ ದಾಳಿಗಳಲ್ಲಿ ದೈಹಿಕ ದಾಳಿ, ಬಂಧನ, ವರದಿಯ ಮೂಲ ತಿಳಿಸಲು ಬೆದರಿಕೆ, ಕಿರುಕುಳ, ಪಾಸ್‌ಪೋರ್ಟ್ ಜಪ್ತಿ, ತನಿಖೆ, ತನಿಖೆಗೆ ಸಮನ್ಸ್, ಎಫ್‌ಐಆರ್ ಸೇರಿವೆ. 78 ಸರಕಾರೇತರ ದಾಳಿಗಳಲ್ಲಿ 56 ಕ್ರಿಮಿನಲ್‌ಗಳಿಂದ ಮತ್ತು 22 ರಾಜಕೀಯ ನಾಯಕರು/ಕಾರ್ಯಕರ್ತರಿಂದ ನಡೆದವು. ಸರಕಾರೇತರ ದಾಳಿಗಳಲ್ಲಿ ಅತಿ ಹೆಚ್ಚು ದಾಳಿಗಳು ನಡೆದ ರಾಜ್ಯಗಳೆಂದರೆ–ಉತ್ತರ ಪ್ರದೇಶ (11), ಜಾರ್ಖಂಡ್ (8).

2022ರಲ್ಲಿ ಅತಿ ಹೆಚ್ಚು ದಾಳಿಗಳು ನಡೆದ ರಾಜ್ಯಗಳೆಂದರೆ, ಜಮ್ಮು–ಕಾಶ್ಮೀರ(48), ತೆಲಂಗಾಣ(40), ಒಡಿಶಾ (14). 103 ದಾಳಿಗಳು ಸರಕಾರಿ ಸಿಬ್ಬಂದಿಯಿಂದ ಮತ್ತು ಉಳಿದ 91 ಸರಕಾರೇತರ ಮೂಲಗಳಿಂದ ಬಂದಿದೆ. ಇವರಲ್ಲಿ ಪ್ರಸಿದ್ಧ ಪತ್ರಕರ್ತರಾದ ರಾಣಾ ಅಯ್ಯುಬ್ ಸೇರಿದಂತೆ ಮೂರು ಪತ್ರಕರ್ತರು ವಿದೇಶಕ್ಕೆ ಹೋಗುವುದನ್ನು ವಿಮಾನ ನಿಲ್ದಾಣದ ವಲಸೆ ಅಧಿಕಾರಿಗಳು ತಡೆದರು.

ಕರ್ನಾಟಕದಲ್ಲಿ 2022ರಲ್ಲಿ 4 ಮತ್ತು 2023ರಲ್ಲಿ 5 ಪತ್ರಕರ್ತರ ಮೇಲೆ ದಾಳಿಯ ಪ್ರಕರಣಗಳು ವರದಿಯಾಗಿವೆ.

**ಇಂಟರ್ನೆಟ್ ಕಡಿತದಲ್ಲಿ ನಂಬರ್ 1**

ಸರಕಾರ ಮತ್ತು ಸ್ಥಳೀಯ ಆಡಳಿತಗಳಿಂದ (ಹೆಚ್ಚಾಗಿ ಕೇಂದ್ರ ಅಥವಾ ರಾಜ್ಯ ಸರಕಾರದ ಆಜ್ಞೆ ಮೇಲೆ) ಮಾಧ್ಯಮ ಪರಿಸ್ಥಿತಿಯ ಇನ್ನೊಂದು ಕರಾಳ ಮುಖವಾದ ಇಂಟರ್ನೆಟ್ ಕಡಿತದ ಬೇಕಾಬಿಟ್ಟಿ ದುರ್ಬಳಕೆ ಈ ಅವಧಿಯಲ್ಲಿ ಸಹ ಮುಂದುವರೆದಿದೆ. ಇಂಟರ್ನೆಟ್ ಕಡಿತಗಳ ಸಂಖ್ಯೆಯಲ್ಲಿ ಕಳೆದ ಒಂದು ದಶಕದಿಂದ ಹಲವು ದಮನಕಾರಿ ಸರ್ವಾಧಿಕಾರಿ ದೇಶಗಳನ್ನು ಹಿಂದಿಕ್ಕಿ ಜಗತ್ತಿನಲ್ಲಿ ಭಾರತ ಮೊದಲ ಸ್ಥಾನ ಪಡೆದಿದೆ. ಇಂಟರ್ನೆಟ್ ಕಡಿತವು ಎಲ್ಲ ಮಾಧ್ಯಮಗಳನ್ನು ತೀವ್ರವಾಗಿ ಬಾಧಿಸುವುದಲ್ಲದೆ, ವೆಬ್ ಆಧಾರಿತ ಮಾಧ್ಯಮಗಳನ್ನು ಪೂರ್ಣವಾಗಿ ತಡೆಯುತ್ತದೆ.

2014ರವರೆಗೆ ಒಂದಂಕಿಯಲ್ಲಿದ್ದ ವಾರ್ಷಿಕ ಇಂಟರ್ನೆಟ್ ಕಡಿತಗಳ ಸಂಖ್ಯೆ, 2016–23ರ ಅವಧಿಯಲ್ಲಿಯೇ ಮೂರಂಕಿಗೆ ಬಂದಿದ್ದು, ಒಟ್ಟು 771 ಆಗಿತ್ತು. ಕಳೆದ ಎರಡು ವರ್ಷಗಳಲ್ಲಿ 77 (2022) ಮತ್ತು 96 (2023) ಕಡಿತಗಳಾಗಿದ್ದವು. 2024ರಲ್ಲಿ ಈ ವರೆಗೆ 51 ಕಡಿತಗಳಾಗಿವೆ. ಈ ಅವಧಿಯಲ್ಲಿ ಅತ್ಯಂತ ದೀರ್ಘ ಕಡಿತವೆಂದರೆ ಇಡೀ ಮಣಿಪುರದಲ್ಲಿ ಹೇರಲಾದ 2023ರ ಏಪ್ರಿಲ್ 17ರಿಂದ ಅಕ್ಟೋಬರ್ 18ರ ವರೆಗಿದ್ದ 200 ದಿನಗಳದ್ದು.

ಸಾರ್ವಜನಿಕ ಭದ್ರತೆ, ಸಾರ್ವಜನಿಕ ಶಾಂತಿಭಂಗ, ದ್ವೇಷ ಪ್ರಚಾರ ತಡೆ, ಅಪಾಯಕಾರಿ ಸುಳ್ಳು ಸುದ್ದಿ ತಡೆಗಳು ಈ ಕಡಿತಗಳಿಗೆ ಕಾರಣಗಳು ಎಂದು ಸರಕಾರಗಳು ಹೇಳುತ್ತಾ ಬಂದಿವೆ. ಸರಕಾರದ ದಮನಕಾರಿ ಕ್ರಮಗಳ ಸುದ್ದಿ ಹರಡದಂತೆ ಮತ್ತು ಇತರ ಗಂಭೀರ ವೈಫಲ್ಯಗಳನ್ನು ಮುಚ್ಚಿಡಲು, ಭಿನ್ನಮತೀಯರು ಅಭಿವ್ಯಕ್ತಿಯನ್ನು ಮತ್ತು ಸರಕಾರಕ್ಕೆ ವಿರುದ್ಧವಾದ ಅಭಿಪ್ರಾಯಗಳ ಪ್ರಚಾರವನ್ನು ತಡೆಗಟ್ಟಲು, ಇಂಟರ್ನೆಟ್ ಕಡಿತವನ್ನು ಸರಕಾರಗಳು ಸೆಕ್ಷನ್ 144 ರಷ್ಟು ಸಲೀಸಾಗಿ ಬಳಸುತ್ತಿವೆ ಎಂಬುದು ಸ್ಪಷ್ಟ.

**ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ 159/180**


"ಗಡಿಗಳಿಲ್ಲದ ವರದಿಗಾರರು" (ರಿಪೋರ್ಟರ್ಸ್ ಸಾನ್ಸ್‌ಫ್ರಾಂಟಿಯರ್–ಆರ್‌ಎಸ್‌ಎಫ್) ಎಂಬ ಫ್ರಾನ್ಸ್ ನಲ್ಲಿ ಮುಖ್ಯನೆಲೆ ಹೊಂದಿರುವ ಅಂತರಾಷ್ಟ್ರೀಯ ಪತ್ರಕಾರಿತೆಯ ಲಾಭರಹಿತ ಸಂಸ್ಥೆಯು, ಜಗತ್ತಿನ ಎಲ್ಲ ದೇಶಗಳ ಮಾಧ್ಯಮ ಸ್ವಾತಂತ್ರ್ಯದ ಕುರಿತು ಮಾಹಿತಿ ಸಂಗ್ರಹಿಸಿ, ಪರೀಶೀಲಿಸಿ ಹಲವು ವರ್ಷಗಳಿಂದ ಪ್ರಕಟಿಸುತ್ತಿದೆ.

ಕಳೆದ ಮತ್ತು ಈ ವರ್ಷ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ ಗಳಲ್ಲಿ 180 ದೇಶಗಳಲ್ಲಿ 159ನೇ ಸ್ಥಾನ ಗಳಿಸಿದೆ. 2021ರಲ್ಲಿ 142 ಇದ್ದಿದ್ದು 2022ರಲ್ಲಿ 150ಕ್ಕೆ, 2023ರಲ್ಲಿ 161ಕ್ಕೆ ಕುಸಿದಿತ್ತು. ಈ ವರ್ಷ ಸ್ವಲ್ಪ ಚೇತರಿಸಿಕೊಂಡಿದೆ. ಆರ್‌ಎಸ್‌ಎಫ್ ತನ್ನ ವರದಿಯಲ್ಲಿ ಭಾರತ "ಪತ್ರಕರ್ತರಿಗೆ ಅತ್ಯಂತ ಅಪಾಯಕಾರಿಯಾದ ದೇಶಗಳಲ್ಲಿ ಒಂದು" ಎಂದು ಹೇಳಿದೆ. ಇದು ಜಗತ್ತಿನಾದ್ಯಂತ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದ್ದು ಸರಕಾರಕ್ಕೆ ಇರಿಸು ಮುರುಸಾಗಿದೆ. ಆದರೆ ಮೇಲೆ (1.3ರಿಂದ 1.5 ಪಾರಾಗಳಲ್ಲಿ) ಕೊಟ್ಟ ಅಂಶಗಳನ್ನು ಗಮನಿಸಿದರೆ, ಇದು ಆಶ್ಚರ್ಯಕರವೇನಲ್ಲ ಮತ್ತು ಸರಿಯಾಗಿಯೇ ಇದೆ. ಮಾತ್ರವಲ್ಲ, 2006ರಲ್ಲಿ 106 ಇದ್ದ ಈ ರ್‍ಯಾಂಕ್ ಸತತವಾಗಿ ಕುಸಿಯುತ್ತಾ ಬಂದಿತ್ತು.

ವಿಶೇಷವಾಗಿ ಪತ್ರಕರ್ತರ ಮೇಲೆ ಸರಕಾರದ ದಮನ, ದೈಹಿಕ ದಾಳಿ, ಬೇಕಾಬಿಟ್ಟಿ ಇಂಟರ್ನೆಟ್ ಕಡಿತ ಮತ್ತು ಅಗಾಧವಾಗಿ ಹೆಚ್ಚಿದ ಏಕಸ್ವಾಮ್ಯ – ಇವುಗಳಿಂದಾಗಿ ಭಾರತದ 'ಮಾಧ್ಯಮ ಸ್ವಾತಂತ್ರ್ಯ' ರ್‍ಯಾಂಕ್ 159ಕ್ಕೆ ಕುಸಿದಿದೆ.

(ಮುಂದುವರೆಯುತ್ತದೆ)

# ಇದು ಬಡತನದ ಅಳತೆಯೋ ಅಥವ ನವ–ಉದಾರವಾದವನ್ನು 'ಚಂದಗೊಳಿಸುವ' ಕೆಲಸವೋ?




**ಬಡತನವನ್ನು ಅಳೆಯಲು ವಿಶ್ವ ಬ್ಯಾಂಕ್ ಅನುಸರಿಸುತ್ತಿರುವ ವಿಧಾನದಲ್ಲಿ ಮೂರು ಮೂಲಭೂತ ಸಮಸ್ಯೆಗಳಿವೆ: ಮೊದಲನೆಯದು, ಈ ಲೆಕ್ಕಾಚಾರವು ಒಬ್ಬ ವ್ಯಕ್ತಿಯು ಹೊಂದಿರುವ ಆಸ್ತಿ–ಪಾಸ್ತಿಗಳ ಬಗ್ಗೆ ಮಾತನಾಡುವುದಿಲ್ಲ; ವ್ಯಕ್ತಿಯ ಆದಾಯದ ಬಗ್ಗೆ ಮಾತ್ರ ಗಮನ ಹರಿಸುತ್ತದೆ. ಎರಡನೆಯದು, ಈ ಆದಾಯವನ್ನು ವ್ಯಕ್ತಿಯ ವೆಚ್ಚಗಳ ಮೂಲಕ ಲೆಕ್ಕಹಾಕಲಾಗುತ್ತದೆ ಎಂಬುದು. ಮೂರನೆಯದು, ವ್ಯಕ್ತಿಯ ನಿಜ ವೆಚ್ಚಗಳನ್ನು ಬೆಲೆ–ಸೂಚ್ಯಂಕದ ಮೂಲಕ ಲೆಕ್ಕಹಾಕುವ ಕ್ರಮವು ಜೀವನ ನಿರ್ವಹಣೆಯ ನಿಜ ವೆಚ್ಚಗಳನ್ನು ಗಮನಾರ್ಹವಾಗಿ ತಗ್ಗಿಸುವುದರಿಂದ ಈ ಮೂಲಕ ಪಡೆಯುವ ಅಂಕಿಅಂಶಗಳು ಸಂಪೂರ್ಣವಾಗಿ ತಪ್ಪಾಗಿರುತ್ತವೆ. ಹೀಗಿರುವಾಗ, "ಲಕ್ಷಾಂತರ ಮಂದಿಯನ್ನು ಬಡತನದಿಂದ ಮೇಲೆತ್ತಲಾಗಿದೆ" ಎಂಬ ಎಲ್ಲ ಮಾತುಗಳೂ ಒಂದು ಕ್ರೂರ ತಮಾಷೆಯೆಂದೇ ಹೇಳಬೇಕಾಗುತ್ತದೆ. ದುರದೃಷ್ಟವಶಾತ್, ಅಂತಹ ಮಾತುಗಳು ಮುಂಬರುವ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಕೇಳಬರಬಹುದು.**

**ಪ್ರೊ.ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

"ಬಡತನ"ವನ್ನು ಅಳೆಯುವ ವ್ಯವಹಾರದಲ್ಲಿ ಈಗ ಹಲವಾರು ಅಂತಾರಾಷ್ಟ್ರೀಯ ಸಂಸ್ಥೆಗಳು ತೊಡಗಿಕೊಂಡಿವೆ. ಈ ಕೆಲಸವನ್ನು ಕಳೆದ ಹಲವು ವರ್ಷಗಳಿಂದಲೂ ವಿಶ್ವ ಬ್ಯಾಂಕ್ ಮಾಡುತ್ತಾ ಬಂದಿದೆ. ಆದರೆ, 'ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ' (ಯುಎನ್‌ಡಿಪಿ) ಮತ್ತು 'ಆಕ್ಸ್‌ಫರ್ಡ್ ಬಡತನ ಮತ್ತು ಮಾನವ ಅಭಿವೃದ್ಧಿ ಉಪಕ್ರಮ; (ಒಪಿಹೆಚ್‌ಐ) ಸಂಸ್ಥೆಗಳು "ಬಹು ಆಯಾಮದ ಬಡತನ" ಎಂಬ ಒಂದು ಹೊಸ ಅಳತೆಯ ಪರಿಕಲ್ಪನೆಯನ್ನು ಬಳಕೆಗೆ ತಂದಿವೆ. ಇವೆರಡೂ ನಿಜಕ್ಕೂ ಮಾಡುವುದು ಬಡತನದ ಅಳತೆಯಲ್ಲ. ಅವರು ಕೊನೆಗೂ ನವ–ಉದಾರವಾದಿ ಬಂಡವಾಳಶಾಹಿಯನ್ನು "ಚಂದಗೊಳಿಸುವ" ಕೆಲಸ ಮಾಡುತ್ತಿದ್ದಾರಷ್ಟೇ. ವಿಶ್ವಬ್ಯಾಂಕ್‌ನ ಒಂದು ಅಂದಾಜಿನ ಪ್ರಕಾರ, 1990ರ ದಶಕದ ಉತ್ತರಾರ್ಧದಲ್ಲಿ "ತೀವ್ರ ಬಡತನ"ದಲ್ಲಿ (ಅಂದರೆ, 2011ರ ಕೊಳ್ಳುವ ಶಕ್ತಿಯ ಅನುರೂಪ ವಿನಿಮಯ ದರ–purchasing power parity exchange rate–ದಲ್ಲಿ ದೈನಿಕ ತಲಾ $1.90ಕ್ಕಿಂತಲೂ ಕಡಿಮೆ ವೆಚ್ಚ ಮಾಡುವವರು) ಬದುಕುತ್ತಿದ್ದ ವಿಶ್ವದ ಜನರ ಸಂಖ್ಯೆಯು ಶೇ.30 ರಿಂದ 2022ರ ವೇಳೆಗೆ ಶೇ. 10ಕ್ಕಿಂತಲೂ ಕೆಳಗಿತ್ತು. ಈ ಹೇಳಿಕೆಯು ನವ–ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ "ಲಕ್ಷಾಂತರ ಮಂದಿಯನ್ನು ಬಡತನದಿಂದ ಮೇಲೆತ್ತಲಾಗಿದೆ" ಎಂಬುದನ್ನು ಸೂಚಿಸುತ್ತದೆ. ಬಹಳವಾಗಿ ಉಲ್ಲೇಖಿಸಲಾಗುವ ವಿಶ್ವಬ್ಯಾಂಕ್‌ನ ಈ ಅಳತೆಯ ಪರಿಕಲ್ಪನೆಯೇ ಏಕೆ ದೋಷಪೂರಿತವಾಗಿದೆ ಎಂಬುದನ್ನು ನೋಡೋಣ.

ಬಡತನವನ್ನು ಅಳೆಯಲು ವಿಶ್ವ ಬ್ಯಾಂಕ್ ಅನುಸರಿಸುತ್ತಿರುವ ವಿಧಾನದಲ್ಲಿ ಮೂರು ಮೂಲಭೂತ ಸಮಸ್ಯೆಗಳಿವೆ: ಮೊದಲನೆಯದು, ಈ ಲೆಕ್ಕಾಚಾರವು ಒಬ್ಬ ವ್ಯಕ್ತಿಯು ಹೊಂದಿರುವ ಆಸ್ತಿ–ಪಾಸ್ತಿಗಳ ಬಗ್ಗೆ ಮಾತನಾಡುವುದಿಲ್ಲ; ವ್ಯಕ್ತಿಯ ಆದಾಯದ ಬಗ್ಗೆ ಮಾತ್ರ ಗಮನ ಹರಿಸುತ್ತದೆ. ಎರಡನೆಯದು, ಈ ಆದಾಯವನ್ನು ವ್ಯಕ್ತಿಯ ವೆಚ್ಚಗಳ ಮೂಲಕ ಲೆಕ್ಕಹಾಕಲಾಗುತ್ತದೆ ಎಂಬುದು. ಮೂರನೆಯದು, ವ್ಯಕ್ತಿಯ ನಿಜ ವೆಚ್ಚಗಳನ್ನು ಬೆಲೆ–ಸೂಚ್ಯಂಕದ ಮೂಲಕ ಲೆಕ್ಕಹಾಕುವ ಕ್ರಮವು ಜೀವನ ನಿರ್ವಹಣೆಯ ನಿಜ ವೆಚ್ಚಗಳನ್ನು ಗಮನಾರ್ಹವಾಗಿ ತಗ್ಗಿಸುವುದರಿಂದ ಈ ಮೂಲಕ ಪಡೆಯುವ ಅಂಕಿಅಂಶಗಳು ಸಂಪೂರ್ಣವಾಗಿ ತಪ್ಪಾಗಿರುತ್ತವೆ. ಈ ಪ್ರತಿಯೊಂದು ಅಂಶವನ್ನೂ ವಿವರವಾಗಿ ಪರಿಶೀಲಿಸೋಣ.

**ದೋಷಭರಿತ ವಿಧಾನ**

ಬಡತನವನ್ನು ಅರ್ಥಪೂರ್ಣವಾಗಿ ಅಳೆಯುವ ಯಾವುದೇ ವಿಧಾನವು ವ್ಯಕ್ತಿಯ ಆದಾಯದ "ಹರಿವಿನ" ಆಯಾಮವನ್ನು ಮತ್ತು ವ್ಯಕ್ತಿಯು ಹೊಂದಿರುವ ಆಸ್ತಿಯ "ದಾಸ್ತಾನು" ಆಯಾಮವನ್ನು ಒಳಗೊಂಡಿರಬೇಕು. ಈ ಎರಡೂ ಆಯಾಮಗಳೂ ಮುಖ್ಯವಾಗುತ್ತವೆ. ಉದಾಹರಣೆಗೆ, ವ್ಯಕ್ತಿಯೊಬ್ಬರು ಎರಡು ದಿನಾಂಕಗಳ ಕಾಲಾವಧಿಯಲ್ಲಿ ಅದೇ ನಿಜ ಆದಾಯವನ್ನು ಹೊಂದಿದ್ದರೂ ಎರಡನೆಯ ದಿನಾಂಕದ ಅವಧಿಯೊಳಗೆ ತಮ್ಮ ಎಲ್ಲ ಆಸ್ತಿಗಳನ್ನೂ ಕಳೆದುಕೊಂಡಿದ್ದರೆ, ಅವರು ಬಡವರಾಗಿದ್ದಾರೆ ಎಂದು ಪರಿಗಣಿಸದಿರುವುದು ಪರಿಸ್ಥಿತಿಯ ಅಣಕವಾಗುತ್ತದೆ. ಬಂಡವಾಳದ ಆದಿಮ ಕ್ರೋಢೀಕರಣದ ಪ್ರಕ್ರಿಯೆಯು ಅಂದರೆ, ತಮ್ಮ ಆಸ್ತಿಗಳಿಂದ ವ್ಯಕ್ತಿಗಳನ್ನು ಹೊರಹಾಕುವ ಪ್ರಕ್ರಿಯೆಯು ವಿಪರೀತವಾಗಿರುವ ನವ–ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ ವ್ಯಕ್ತಿಗಳ ಆಸ್ತಿಯ ಪರಿಸ್ಥಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ವಿಶ್ವಬ್ಯಾಂಕ್‌ನ ಕ್ರಮವು ಎದ್ದುಕಾಣುವ ಒಂದು ಲೋಪವಾಗಿದೆ. ಆಸ್ತಿಗಳು ವ್ಯಕ್ತಿಗಳ ಸ್ವಾಧೀನದಿಂದ ಹೊರಹಾಕುವುದು ಅತಿಯಾಗಿ ಸಂಭವಿಸುತ್ತಿರುವ ಸನ್ನಿವೇಶದಲ್ಲಿ "ಲಕ್ಷಾಂತರ ಮಂದಿಯನ್ನು ಬಡತನದಿಂದ ಮೇಲೆತ್ತಲಾಗಿದೆ" ಎಂದು ಹೇಳುವುದು ವಾಸ್ತವದ ಒಂದು ಪರಮ ವಿಡಂಬನೆಯಾಗುತ್ತದೆ.

ಎರಡನೆಯದು, ಭಾರತವೂ ಸೇರಿದಂತೆ ಅನೇಕ ದೇಶಗಳಲ್ಲಿ ಆದಾಯದ ಮಾಹಿತಿಯು ಲಭ್ಯವಿಲ್ಲದ ಕಾರಣ, ನಿಜ ಆದಾಯವೂ ಸಹ ಈ ಅಳತೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಜೊತೆಗೆ, "ಆದಾಯ" ಎಂಬುದರ ಪರಿಕಲ್ಪನೆ ಒಂದು ಸಂಕೀರ್ಣ ವಿಷಯವೇ ಸರಿ. ಆದ್ದರಿಂದ, ವೆಚ್ಚದ ದತ್ತಾಂಶವು ಸಾಮಾನ್ಯವಾಗಿ ಸುಲಭವಾಗಿ ಲಭ್ಯವಾಗುವುದರಿಂದ ಮತ್ತು ಅದರ ಪರಿಕಲ್ಪನೆ ಸರಳವಾಗಿರುವುದರಿಂದ ಅದನ್ನು ಆದಾಯಕ್ಕೆ ಒಂದು ಬದಲಿಯಾಗಿ ತೆಗೆದುಕೊಳ್ಳಲಾಗುತ್ತದೆ.

ಆದರೆ, ಮಾಹಿತಿ ಲಭ್ಯವಿಲ್ಲದ್ದರಿಂದ ಆದಾಯಕ್ಕೆ ಒಂದು ಬದಲಿಯಾಗಿ ವೆಚ್ಚವನ್ನು ತೆಗೆದುಕೊಳ್ಳುವ ಈ ಕ್ರಮವು ವ್ಯಕ್ತಿಯ ನಿವ್ವಳ ಆಸ್ತಿಯ ಪರಿಸ್ಥಿತಿಯನ್ನು ನಿರ್ಲಕ್ಷಿಸುವ ಕ್ರಮವನ್ನು ಇನ್ನಷ್ಟು ಅಕ್ಷಮ್ಯಗೊಳಿಸುತ್ತದೆ. ವ್ಯಕ್ತಿಗಳ ಆದಾಯವು ಇಳಿಕೆಯಾದ ಪರಿಸ್ಥಿತಿಯಲ್ಲೂ ಅವರು ತಮ್ಮ ಆಸ್ತಿಗಳನ್ನು ಮಾರಾಟ ಮಾಡುವುದರಿಂದಾಗಿಯೋ ಅಥವಾ ಸಾಲ ಪಡೆಯುವುದರಿಂದಾಗಿಯೋ ಅವರ ಖರ್ಚು–ವೆಚ್ಚಗಳು ಹಿಂದಿನ ಮಟ್ಟದಲ್ಲೇ ಇರುತ್ತವೆ. ಅವರ ಖರ್ಚುಗಳು ಬದಲಾಗದೆ ಉಳಿದಿರುವುದರಿಂದ ಆ ವ್ಯಕ್ತಿಗಳು ಬಡವರಾಗಿಲ್ಲ ಎಂದು ತೀರ್ಮಾನಿಸುವುದು ಒಂದು ಅಸಂಬದ್ಧವೇ ಸರಿ. ಹರಿವಿನ ಪರಿಭಾಷೆಯಲ್ಲಿ, ಅಂದರೆ ಆದಾಯದ ರೀತ್ಯಾ ಮತ್ತು ದಾಸ್ತಾನು ಪರಿಭಾಷೆಯಲ್ಲಿ, ಅಂದರೆ ನಿವ್ವಳ ಆಸ್ತಿಗಳ ರೀತ್ಯಾ, ಈ ವ್ಯಕ್ತಿಗಳು ನಿಸ್ಸಂದಿಗ್ಧವಾಗಿ ಬಡವರೇ ಹೌದು. ಆದರೆ, ವೆಚ್ಚ ಆಧರಿತ ಅಳತೆಯು ವ್ಯಕ್ತಿಗಳು ಅವರು ಮೊದಲಿದ್ದ ಆರ್ಥಿಕ ಪರಿಸ್ಥಿತಿಯಲ್ಲೇ ಇದ್ದಾರೆ ಎನ್ನುವ ರೀತಿಯಲ್ಲೇ ತೋರಿಸುತ್ತದೆ.

ಮೂರನೆಯದಾಗಿ, ನಿಯತಕಾಲಿಕವಾಗಿ ನಡೆಸುವ ಜಾಗರೂಕ ಮಾದರಿ ಸಮೀಕ್ಷೆಗಳ ಮೂಲಕ ಕುಟುಂಬಗಳ ಹಣ ವೆಚ್ಚದ ಅಂಕಿಅಂಶಗಳನ್ನು ಹೊಂದಿರುವ ಭಾರತದಂತಹ ದೇಶಗಳ ನಿಜ ವೆಚ್ಚದ ಅಳತೆಯೂ ಸಹ ಸಂಪೂರ್ಣವಾಗಿ ತಪ್ಪಾಗಿರುತ್ತದೆ. ಏಕೆಂದರೆ, ಈ ವೆಚ್ಚಗಳನ್ನು ಲೆಕ್ಕಹಾಕಲು ಬಳಸುವ ಹೆಸರಿಗೆ ಮಾತ್ರದ ಬೆಲೆ–ಸೂಚ್ಯಂಕವು ಜೀವನ ನಿರ್ವಹಣೆ ವೆಚ್ಚಗಳಲ್ಲಿ ಉಂಟಾದ ನೈಜ ಏರಿಕೆಯನ್ನು ತಗ್ಗಿಸಿ ತೋರಿಸುತ್ತದೆ. ಮತ್ತು ಈ ಬೆಲೆ–ಸೂಚ್ಯಂಕವು ಮೂಲ ವರ್ಷದಲ್ಲಿ ಜೀವನ ನಿರ್ವಹಣೆಗಾಗಿ ಬಳಸಲಾದ ಒಟ್ಟು ಸರಕುಗಳ ವೈಯಕ್ತಿಕ ಬೆಲೆಗಳ ಪ್ರಮಾಣಾನುಸಾರ ಸರಾಸರಿಯಾಗಿರುತ್ತದೆ. ಮೂಲ ವರ್ಷದಲ್ಲಿ ಬಳಸಿದ ಸರಕುಗಳ ಅಲಭ್ಯತೆಯ ಕಾರಣದಿಂದಾಗಿ ಕಾಲಕ್ರಮದಲ್ಲಿ ಬಳಕೆಯ ಬುಟ್ಟಿಯಲ್ಲಿನ ವಸ್ತುಗಳಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಅಂತಹ ಬದಲಾವಣೆಗಳನ್ನು ಬೆಲೆ ಸೂಚ್ಯಂಕವು ಗುರುತಿಸುವುದಿಲ್ಲ.

**'ಜೀವನಮಟ್ಟ ಸುಧಾರಣೆ'ಯ ಉತ್ಪ್ರೇಕ್ಷೆ**

ಉದಾಹರಣೆಗೆ, ನವ–ಉದಾರವಾದದ ಅಡಿಯಲ್ಲಿ ಸಾರ್ವಜನಿಕ ಸಂಸ್ಥೆಗಳು ಈ ಹಿಂದೆ ಒದಗಿಸುತ್ತಿದ್ದ ಶಿಕ್ಷಣ ಮತ್ತು ಆರೋಗ್ಯದಂತಹ




ಒಂದಿಡೀ ಶ್ರೇಣಿಯ ಸೇವೆಗಳ ಖಾಸಗೀಕರಣವು ಒಂದು ಸಾಮಾನ್ಯ ವಿದ್ಯಮಾನವಾಗಿದೆ. ಈ ಖಾಸಗೀಕರಣದಿಂದಾಗಿ ಜನರು ಈ ಸೇವೆಗಳಿಗಾಗಿ ಮಾಡುವ ವೆಚ್ಚಗಳು ಹೆಚ್ಚುತ್ತವೆ. ಆದರೆ ಈ ಹೆಚ್ಚಳವನ್ನು ಬೆಲೆ–ಸೂಚ್ಯಂಕವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ, ಒಂದು ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂಲ ವರ್ಷದಲ್ಲಿ ರೂ 1,000 ವೆಚ್ಚ ತಗುಲುತ್ತಿದ್ದ ಶಸ್ತ್ರಚಿಕಿತ್ಸೆಗೆ ಈಗ ರೂ 2,000 ವೆಚ್ಚ ತಗುಲಿದರೆ, ಬೆಲೆ–ಸೂಚ್ಯಂಕವು ಆರೋಗ್ಯದ ವೆಚ್ಚವನ್ನು ಎರಡು ಪಟ್ಟು ಏರಿಕೆಯಾಗಿದೆ ಎಂದು ತೆಗೆದುಕೊಳ್ಳುತ್ತದೆ. ಆದರೆ, ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯುತ್ತಿದ್ದ ಶಸ್ತ್ರಚಿಕಿತ್ಸೆಗಳ ಸೌಲಭ್ಯವು ಅಷ್ಟೇ ಇರುತ್ತದೆ ಅಥವಾ ಇಳಿಮುಖವಾಗಿರುತ್ತದೆ. ಹಾಗಾಗಿ ಜನರು ಈಗ ಖಾಸಗಿ ಆಸ್ಪತ್ರೆಗಳಿಗೆ ಹೋಗಲೇಬೇಕಾದ ಅನಿವಾರ್ಯತೆ ಇದೆ. ಈಗ ಅದೇ ಶಸ್ತ್ರಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಲ್ಲಿ 10,000 ರೂ. ತೆರಬೇಕಾಗುತ್ತದೆ. ಈ ಹೆಚ್ಚಳವನ್ನು ಬೆಲೆ–ಸೂಚ್ಯಂಕವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗಾಗಿ, ಬೆಲೆ–ಸೂಚ್ಯಂಕವು ತೋರಿಸುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜೀವನ ನಿರ್ವಹಣೆಯ ವೆಚ್ಚವು ಹೆಚ್ಚಾಗಿರುತ್ತದೆ ಮಾತ್ರವಲ್ಲ, ಅಧಿಕೃತ ಬೆಲೆ–ಸೂಚ್ಯಂಕವು ಜೀವನಮಟ್ಟದ ಸುಧಾರಣೆಯನ್ನು ಉತ್ಪ್ರೇಕ್ಷೆಗೊಳಿಸುತ್ತದೆ ಮತ್ತು ಆ ಮೂಲಕ ಬಡತನವನ್ನು ಬಹಳವಾಗಿ ಕೀಳಂದಾಜು ಮಾಡುತ್ತದೆ.

ಜೀವನ ನಿರ್ವಹಣೆಯ ವೆಚ್ಚಗಳ ಏರಿಕೆಯಿಂದ ಹಿಂಡಿ ಹಿಪ್ಪೆಯಾದ ಜನರಿಗೆ ತಮ್ಮ ನಿತ್ಯ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಕಷ್ಟವಾಗುತ್ತದೆ. ಈ ಕಷ್ಟಗಳಿಂದ ಹೊರಬರಲು ಅವರು ಕನಿಷ್ಟ ಎರಡು ವಿಭಿನ್ನ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ: ಮೊದಲನೆಯದು, ತಮ್ಮ ಆಸ್ತಿಯನ್ನು ಅಥವಾ ತಮ್ಮ ಸ್ವತ್ತುಗಳನ್ನು ಮಾರಾಟ ಮಾಡುವ ಮೂಲಕ ಅಥವಾ ಸಾಲಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ. ಎರಡನೆಯದು, ತಮ್ಮ ಬಳಕೆಯ ವಸ್ತುಗಳ ಸಂಯೋಜನೆಯನ್ನು ಬದಲಾಯಿಸಿಕೊಳ್ಳುತ್ತಾರೆ. ಹೆಚ್ಚು "ಅಗತ್ಯ" ಇರುವ ವಸ್ತುಗಳಿಗೆ ಆದ್ಯತೆ ನೀಡುತ್ತಾರೆ. ಅಗತ್ಯ ಕಡಿಮೆ ಇರುವ ವಸ್ತುಗಳ ಬಳಕೆಯನ್ನು ಬಿಟ್ಟುಬಿಡುತ್ತಾರೆ. ಆರೋಗ್ಯ ರಕ್ಷಣೆಯ ಅಥವಾ ಮಕ್ಕಳ ಶಿಕ್ಷಣದ ವೆಚ್ಚಗಳ ಏರಿಕೆಯಿಂದಾಗಿ ಭಾರತದಲ್ಲಿ ಈ ಎರಡೂ ರೀತಿಯ ಹೊಂದಾಣಿಕೆಗಳನ್ನು ಜನರು ಮಾಡಿಕೊಂಡಿದ್ದಾರೆ; ಭಾರತೀಯ ಕುಟುಂಬಗಳು–ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ–ಹೊಂದಿದ್ದ ನಿವ್ವಳ ಆಸ್ತಿಗಳು ಇಳಿಕೆಯಾಗಿವೆ; ಮತ್ತು ಪೌಷ್ಟಿಕಾಂಶದ ಸೇವನೆಯು ಮುಖ್ಯವಲ್ಲ ಎಂಬ (ತಪ್ಪಾದ) ನಂಬಿಕೆಯಲ್ಲಿ ಕುಟುಂಬಗಳು ಪೌಷ್ಟಿಕಾಂಶದ ಸೇವನೆಯನ್ನು ಇಳಿಕೆ ಮಾಡಿಕೊಂಡಿವೆ.



2019ರ ಅಖಿಲ ಭಾರತ ಸಾಲ ಮತ್ತು ಹೂಡಿಕೆ ಸಮೀಕ್ಷೆಯ (ಇದು ಜೂನ್ 2018ರ ಅಂತ್ಯದ ವರೆಗಿನ ಮಾಹಿತಿಯನ್ನು ನೀಡುತ್ತದೆ) ಅಂಕಿಅಂಶಗಳನ್ನು 2013ರ ಸಮೀಕ್ಷೆಯೊಂದಿಗೆ ಪುಟ 14 ಕ್ಕೆ

## ಇದು ಬಡತನದ ಅಳತೆಯೋ....

ಪುಟ 13 ರಿಂದ

(ಇದು ಜೂನ್ 2012ರ ಅಂತ್ಯದ ವರೆಗಿನ ಮಾಹಿತಿಯನ್ನು ನೀಡುತ್ತದೆ) ಹೋಲಿಸಿದಾಗ (ಈ ಹೋಲಿಕೆಗಳು ಸಗಟು ಬೆಲೆ ಸೂಚ್ಯಂಕದೊಂದಿಗೆ ಸಂಬಂಧಿಸಿ ಸರಿಹೊಂದಿಸಿದ "ನಿಜ" ಅಂಕಿ ಅಂಶಗಳು), ಕಂಡುಬಂದ ಅಂಶಗಳು ಹೀಗಿವೆ: ಮೊದಲನೆಯದು, 2019ರಲ್ಲಿ ಶೇ. 11ರಷ್ಟು ಅಧಿಕ ಗ್ರಾಮೀಣ ಕುಟುಂಬಗಳು ಸಾಲದ ಸುಳಿಗೆ ಸಿಲುಕಿಕೊಂಡಿದ್ದವು. ಎರಡನೆಯದು, ಋಣಭಾರದಲ್ಲಿರುವ ಗ್ರಾಮೀಣ ಕುಟುಂಬದ ಪ್ರತಿ ಸಾಲದ ಸರಾಸರಿ ಮೊತ್ತವು 2019ರ ವೇಳೆಗೆ ಶೇ.43ರಷ್ಟು ಹೆಚ್ಚಾಗಿತ್ತು. ಮೂರನೆಯದು, 2013 ಮತ್ತು 2019ರ ನಡುವೆ ಪ್ರತಿ ಸಾಗುವಳಿದಾರ ಕುಟುಂಬದ ಆಸ್ತಿಗಳ ಸರಾಸರಿ ಮೌಲ್ಯವು ಶೇ.33 ರಷ್ಟು ಕಡಿಮೆಯಾಗಿತ್ತು ಮತ್ತು ಕೃಷಿಕರಲ್ಲದ ಕುಟುಂಬಗಳ ಆಸ್ತಿಗಳ ಸರಾಸರಿ ಮೌಲ್ಯವು ಶೇ.1 ರಷ್ಟು ಕಡಿಮೆಯಾಗಿತ್ತು.

ಈ ಚಿತ್ರವು ನಗರ ಭಾರತದೊಂದಿಗೆ ಒಂದು ಸ್ಥೂಲ ಸಾಮ್ಯತೆ ಹೊಂದಿದೆ. ಪ್ರತಿ ಕುಟುಂಬದ ಆಸ್ತಿಯ ಸರಾಸರಿ ಮೌಲ್ಯದಲ್ಲಿ ಇಳಿಕೆ ಕಂಡುಬಂದಿದೆ (ಸ್ವಯಂ ಉದ್ಯೋಗಿ ಕುಟುಂಬಗಳಿಗೆ ಶೇ.29 ಮತ್ತು ಇತರರಿಗೆ ಶೇ.3). ಋಣಭಾರದ ಕುಟುಂಬಗಳ ಶೇಕಡಾವಾರು ಪ್ರಮಾಣವು ಹೆಚ್ಚು ಕಡಿಮೆ ಮೊದಲಿನಂತೆಯೇ ಇದೆ. ಋಣಭಾರದಲ್ಲಿರುವ ಪ್ರತಿ ಕುಟುಂಬದ ಸಾಲದ ಸರಾಸರಿ ಮೊತ್ತವು 2013 ಮತ್ತು 2019ರ ನಡುವೆ ಶೇ.24ರಷ್ಟು ವೃದ್ಧಿಸಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಭಾರತದ ಬಹುತೇಕ ಕುಟುಂಬಗಳ ನಿವ್ವಳ ಆಸ್ತಿಯ ಮೌಲ್ಯವು ಗಣನೀಯವಾಗಿ ಕುಸಿದಿದೆ ಎಂಬುದು ಒಂದು ನಿರ್ವಿವಾದ ಸತ್ಯ.

**ಕ್ರೂರ ತಮಾಷೆ**

ಪೌಷ್ಟಿಕಾಂಶದ ಸೇವನೆಯಲ್ಲೂ ಕೂಡ ಹೊಂದಾಣಿಕೆ ಸಂಭವಿಸುತ್ತಿದೆ. 1993-94 ಮತ್ತು 2011-12ರ ನಡುವಿನ ಅವಧಿಯಲ್ಲಿ ತಲಾ ದೈನಿಕ 2200 ಕ್ಯಾಲೋರಿ ಪ್ರಮಾಣದ ಆಹಾರವನ್ನು ಸೇವಿಸಲಾಗದ ಗ್ರಾಮೀಣ ಭಾರತದ ಜನಸಂಖ್ಯೆಯ ಪ್ರಮಾಣವು ಶೇ. 58ರಿಂದ ಶೇ.68ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ನಗರ ಭಾರತದಲ್ಲಿ 2100 ಕ್ಯಾಲೋರಿ (ಹಿಂದಿನ ಯೋಜನಾ ಆಯೋಗವು ಬಳಸುತ್ತಿದ್ದ ಮಾನದಂಡದ ಅನುಗುಣವಾಗಿ) ಪ್ರಮಾಣದ ಆಹಾರವನ್ನು ಸೇವಿಸಲಾಗದ ಜನಸಂಖ್ಯೆಯ ಪ್ರಮಾಣವು ಶೇ.57 ರಿಂದ ಶೇ.65ಕ್ಕೆ ಏರಿಕೆಯಾಗಿದೆ. ತರುವಾಯ ನಡೆದ 2017-18ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಫಲಿತಾಂಶಗಳು ತುಂಬಾ ನಿರಾಶಾದಾಯಕವಾಗಿದ್ದವು. ಎಲ್ಲ ಸರಕುಗಳು ಮತ್ತು ಸೇವೆಗಳ ಮೇಲಿನ ನಿಜ ಖರ್ಚುಗಳು ಕುಸಿದಿದ್ದವು ಎಂಬುದನ್ನು ಈ ಸಮೀಕ್ಷೆಯು ಬಯಲು ಮಾಡಿತು. ಮೋದಿ ಸರ್ಕಾರವು ಈ ಸಮೀಕ್ಷೆಯ ವರದಿಯನ್ನು ಸಾರ್ವಜನಿಕರ ದೃಷ್ಟಿಗೆ ಬೀಳದಂತೆ ತ್ವರಿತವಾಗಿ ಹಿಂತೆಗೆದುಕೊಂಡಿತು. ವರದಿಯನ್ನು ಹಿಂತೆಗೆದುಕೊಳ್ಳುವ ಮೊದಲು ಲಭ್ಯವಿದ್ದ ಅಂಕಿ ಅಂಶಗಳಿಂದ (ಪ್ರತಿ ಯೂನಿಟ್ ಪೋಷಕಾಂಶ ಆಹಾರದ ನೈಜ ವೆಚ್ಚವು ಬದಲಾಗದೆ ಉಳಿದಿದೆ ಎಂದು ಊಹಿಸಿಕೊಳ್ಳಲಾಗಿದೆ) ತಿಳಿದುಬರುವುದು ಏನೆಂದರೆ, ನಗರ ಭಾರತದಲ್ಲಿ 2100 ಕ್ಯಾಲೋರಿ ಪ್ರಮಾಣದ ಆಹಾರವನ್ನು ಸೇವಿಸಲಾಗದ ಜನಸಂಖ್ಯೆಯ ಶೇಕಡಾವಾರು ಪ್ರಮಾಣವು ಹೆಚ್ಚು ಕಡಿಮೆ ಅದೇ ಮಟ್ಟದಲ್ಲಿತ್ತು ಮತ್ತು ಗ್ರಾಮೀಣದ ಶೇಕಡಾವಾರು ಪ್ರಮಾಣವು ಶೇ.80ಕ್ಕಿಂತಲೂ ಮೇಲಿನ ಮಟ್ಟದಲ್ಲಿತ್ತು. (ಈ ಅಂಕಿಅಂಶಗಳನ್ನು ಬಡತನ ಕುರಿತು ಉತ್ಸಾ ಪಟ್ನಾಯಕ್ ಅವರ ಮುಂಬರುವ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ).

ಈ ಕಠೋರ ವಾಸ್ತವಕ್ಕೆ ವ್ಯತಿರಿಕ್ತವಾಗಿ, ಭಾರತದಲ್ಲಿ ಬಡತನ ಕುಸಿದಿದೆ ಎಂದು ವಿಶ್ವ ಬ್ಯಾಂಕ್ ಹೇಳುತ್ತದೆ. 2011-12ರಲ್ಲಿ ಸುಮಾರು ಶೇ.12ರಷ್ಟಿದ್ದ (ಇದೊಂದು ಕೀಳಂದಾಜು ಎಂಬುದರಲ್ಲಿ ಅನುಮಾನವಿಲ್ಲ) ಬಡತನದ ಪ್ರಮಾಣವು 2022-23ರ ವೇಳೆಗೆ ಕೇವಲ ಶೇ.2ರ ಮಟ್ಟಕ್ಕೆ ಇಳಿದಿದೆ ಎಂದು ವಿಶ್ವ ಬ್ಯಾಂಕ್ ಹೇಳುತ್ತದೆ. ಈಗಾಗಲೇ ಹೇಳಿರುವಂತೆ, 2011ರ ಕೊಳ್ಳುವ ಶಕ್ತಿಯ ಅನುರೂಪ ವಿನಿಮಯ ದರದಲ್ಲಿ ದೈನಿಕ ತಲಾ $1.90ಕ್ಕಿಂತಲೂ ಕಡಿಮೆ ವೆಚ್ಚವನ್ನು "ತೀವ್ರ ಬಡತನ" ಎಂದು ವಿಶ್ವಬ್ಯಾಂಕ್ ವ್ಯಾಖ್ಯಾನಿಸಿದೆ. ಈ $1.90 ಮಾನದಂಡದ ಪ್ರಕಾರ, ಎಲ್ಲ ಖರ್ಚುಗಳೂ ಸೇರಿದಂತೆ ರೂಪಾಯಿ ಲೆಕ್ಕದಲ್ಲಿ ದಿನಕ್ಕೆ ಸುಮಾರು 53 ರೂಪಾಯಿಗಳ ಖರ್ಚಿನ ಮಟ್ಟವು ಬಡತನ ರೇಖೆಯ ಮಟ್ಟವನ್ನು ಸೂಚಿಸುತ್ತದೆ. ಇದು ಸ್ವತಂತ್ರವಾಗಿ ಲೆಕ್ಕಾಚಾರ ಮಾಡಿದ ಒಂದು ಪ್ರತ್ಯೇಕ ಮಾನದಂಡವಲ್ಲ. ಸ್ವತಃ ಹಲವಾರು ಬಡ ದೇಶಗಳ ಸರ್ಕಾರಗಳು ಬಳಸುವ ಬಡತನ ರೇಖೆಯ ಅಂದಾಜಿನ (ಅನಿವಾರ್ಯವಾಗಿ ವಿಶ್ವ ಬ್ಯಾಂಕ್ ಮಾರ್ಗದರ್ಶನದಲ್ಲಿ) ಸರಾಸರಿಯ ಮೂಲಕ ವಿಶ್ವ ಬ್ಯಾಂಕ್‌ನ ಈ ಮಾನದಂಡವನ್ನು ರೂಪಿಸಲಾಗಿದೆ. ಜೀವನ ನಿರ್ವಹಣೆಯ ವೆಚ್ಚದ ಹೆಚ್ಚಳವನ್ನು ಕೀಳಂದಾಜು ಮಾಡುವಂತಹ ಬೆಲೆ-ಸೂಚ್ಯಂಕವನ್ನು ಆಧರಿಸಿದ ಎಲ್ಲ ದೇಶಗಳ ಅಧಿಕೃತ ಬಡತನದ ಅಂದಾಜುಗಳು ಯಾವ ದೋಷಗಳಿಂದ ಬಳಲುತ್ತಿವೆಯೋ ಅದೇ ದೋಷಗಳಿಂದ ವಿಶ್ವ ಬ್ಯಾಂಕ್‌ನ ಮಾನದಂಡವೂ ಬಳಲುತ್ತಿದೆ. ಹಾಗಾಗಿ, ಇದರ ಪರಿಣಾಮವಾಗಿ, ಬಡತನವನ್ನು ಹೇಗೆ ಕಡಿಮೆ ಮಾಡಲಾಗಿದೆ ಅಥವಾ ತೊಡೆದುಹಾಕಲಾಗಿದೆ ಎಂಬುದರ ಕುರಿತು ಹಲವಾರು ಮೂರನೆಯ ಜಗತ್ತಿನ ಸರ್ಕಾರಗಳ ಅಪ್ರಾಮಾಣಿಕ ಪ್ರಚಾರಗಳಿಗೆ ವಿಶ್ವ ಬ್ಯಾಂಕ್ ತನ್ನ ಮೌನ ಮುದ್ರೆಯನ್ನು ಒತ್ತುತ್ತದೆ.

"ಲಕ್ಷಾಂತರ ಮಂದಿಯನ್ನು ಬಡತನದಿಂದ ಮೇಲೆತ್ತಲಾಗಿದೆ" ಎಂಬ ಎಲ್ಲ ಮಾತುಗಳೂ ಒಂದು ಕ್ರೂರ ತಮಾಷೆಯೆಂದೇ ಹೇಳಬೇಕಾಗುತ್ತದೆ. ದುರದೃಷ್ಟವಶಾತ್, ಅಂತಹ ಮಾತುಗಳು, ವಿಶ್ವಸಂಸ್ಥೆಯು ನಿಗದಿಪಡಿಸಿದ 'ಸುಸ್ಥಿರ ಅಭಿವೃದ್ಧಿ ಗುರಿ'ಗಳನ್ನು (ಎಸ್‌ಡಿಜಿ) ಹೇಗೆ ತಲುಪಲಾಗುತ್ತಿದೆ ಎಂಬುದನ್ನು ಪ್ರದರ್ಶಿಸಲು ದೇಶ-ದೇಶಗಳು ಪರಸ್ಪರ ಪೈಪೋಟಿಯಲ್ಲಿ ತೊಡಗಿರುವುದರಿಂದ, ಮುಂಬರುವ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಕೇಳ ಬರಬಹುದು. ❍

## ಕೋಮುವಾದಿ ಬಿಜೆಪಿ-ಜೆಡಿ(ಎಸ್) ಕೂಟವನ್ನು...

ಪುಟ 5 ರಿಂದ

ಯೇತರ ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜಕೀಯ ಶಕ್ತಿಗಳು ತೀರ ದುರ್ಬಲವಾಗಿರುವುದರಿಂದ ಇವುಗಳಿಗೆ ಪರ್ಯಾಯ ರೂಪುಗೊಳ್ಳಬೇಕಿದೆ. ಮತದಾರನಿಗೆ ಇಷ್ಟವಿಲ್ಲದಿದ್ದರೂ ಮತ್ತು ಅದೂ ಕೂಡ ಜನಪರವಾಗಿಲ್ಲವೆಂಬ ಸತ್ಯ ಗೊತ್ತಿದ್ದರೂ ಪ್ರಜಾಪ್ರಭುತ್ವ ವಿರೋಧಿ ಕೋಮುವಾದಿ ಬಿಜೆಪಿ ಹಾಗೂ ಅದರ ಮಿತ್ರರನ್ನು ಸೋಲಿಸಲು ಸಾಧನವಾಗಿ ಕಾಂಗ್ರೆಸ್ ಪಕ್ಷಕ್ಕೆ ಮತನೀಡಬೇಕಾದ ಅನಿವಾರ್ಯ ಮತ್ತು ಸಂಕಷ್ಟಕರ ಒತ್ತಡದಲ್ಲಿ ಮತದಾರನಿದ್ದಾನೆ. ನಿಜ ಅದನ್ನು ಮಾಡಲೇ ಬೇಕಿದೆ.

ಆದರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ, ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ ಅದಕ್ಕೆ ಅಧಿಕಾರ ನೀಡಿದ ಮತದಾರರು ಕಾಂಗ್ರೆಸ್ ಸರಕಾರದ ಜನವಿರೋಧಿ ಆಡಳಿತದಿಂದ ಹಾಗೂ ಭ್ರಷ್ಟಾಚಾರದಿಂದ ಮತ್ತೊಮ್ಮೆ ಬಹುತೇಕ ಭ್ರಮನಿರಸನಗೊಳ್ಳುತ್ತಿದ್ದಾರೆ.

ಐದು ಗ್ಯಾರಂಟಿಗಳನ್ನು ತೋರಿ ಜನತೆಯ ಮೇಲೆ ದಾಳಿಮಾಡುವ ಆರ್ಥಿಕ ನೀತಿಗಳನ್ನು ಕಾಂಗ್ರೆಸ್ ಜಾರಿಗೊಳಿಸುತ್ತಿದೆ. ರೈತಾಪಿ ಕೃಷಿಯನ್ನು ಉಳಿಸಲು ಲೂಟಿಕೋರ ಕಂಪನಿಪರ ಕೃಷಿ ಕಾಯ್ದೆಗಳನ್ನು ಇನ್ನೂ ವಾಪಾಸು ಪಡೆಯದೆ ಮೀನಾ ಮೇಷ ಮಾಡಲಾಗುತ್ತಿದೆ. ಕಾರ್ಮಿಕ ವಿರೋಧಿಯಾದ ಹತ್ತು-ಹನ್ನೆರಡು ತಾಸುಗಳ ದುಡಿಮೆ ಅವಧಿಯ ನಿಗದಿ ಮಾಡುವ ತಿದ್ದುಪಡಿ ಕಾಯ್ದೆ ಜಾರಿಗೊಳಿಸಲಾಗುತ್ತಿದೆ. ಲೂಟಿಕೋರ ವಿದ್ಯುತ್ ತಿದ್ದುಪಡಿ ಕಾಯ್ದೆಗೆ ಮೌನಸಮ್ಮತಿ ನೀಡಿ ಜಾರಿಗೊಳಿಸಲಾಗುತ್ತಿದೆ. ದಲಿತರ ಅಭಿವೃದ್ಧಿಗೆ ಬಳಕೆಯಾಗಬೇಕಾದ ಉಪಯೋಜನೆ ಹಣವನ್ನು ದುರ್ಬಳಕೆ ಮಾಡಲಾಗುತ್ತಿದೆ. ಸಂಕಷ್ಟದಲ್ಲಿರುವ ರೈತರು, ಕೂಲಿಕಾರರು, ದಲಿತರು, ಮಹಿಳೆಯರ ಸಾಲದ ಬಾಧೆಯ ಕುರಿತಂತೆ ಮೌನ ವಹಿಸುವ ಸರಕಾರ ಲಕ್ಷಾಂತರ ಕೋಟಿ ರೂ. ಸಾಲದ ಹೊರೆಯನ್ನು ರಾಜ್ಯದ ಜನತೆಯ ತಲೆಯ ಮೇಲೆ ಹೇರಿ ಕೈಗಾರಿಕೋದ್ಯಮಿಗಳಿಗಾಗಿ ಸಾವಿರಾರು ಕೋಟಿ ರೂ. ಸಹಾಯಧನ ಹಾಗು ಭೂಮಿ ಮತ್ತು ಗಣಿ, ಹಣಕಾಸು ಸಂಪನ್ಮೂಲಗಳನ್ನು ಬಹುತೇಕ ಉಚಿತವಾಗಿ ಒದಗಿಸಲಾಗುತ್ತಿದೆ.

**ಚಳುವಳಿಯಿಂದಲೇ ಪರ್ಯಾಯ ರಾಜಕೀಯ ಹಾಗೂ ನೈಜ ಅಭಿವೃದ್ಧಿ ಸಾಧ್ಯ**

ನೈಜ ಅಭಿವೃದ್ಧಿ ಹಾಗು ಪರ್ಯಾಯ ಜನಪರ ರಾಜಕೀಯ ಶಕ್ತಿಯ ಬೆಳವಣಿಗೆ ಜನ ಚಳುವಳಿಯ ಬೆಳವಣಿಗೆಯಿಂದ ಸಾಧ್ಯ ಎಂಬುದನ್ನು ನಾವು ಮರೆಯುವಂತಿಲ್ಲ. ಇಲ್ಲಿ ಮತದಾರರು ಮತ್ತು ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಗಮನಿಸಬೇಕಾದ ಅಂಶ ಒಂದಿದೆ. ಈ ಹಿಂದೆಯು, ಹಲವು ದಶಕಗಳ ಕಾಲ ಕೇಂದ್ರ ಹಾಗು ರಾಜ್ಯದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷದ ಜನ ವಿರೋಧಿ ಆಡಳಿತದ ಅನುಭವ ಹೊಂದಿದ ಮತದಾರ ಮತ್ತೆ ತನ್ನ ನೈಜ ಅಭಿವೃದ್ಧಿಗಾಗಿ ಅದರ ಮೇಲೆ ವಿಶ್ವಾಸವಿಟ್ಟು ಕಣ್ಣು ಮುಚ್ಚಿ ಕುಳಿತುಕೊಳ್ಳುವುದು ತನಗೆ ತಾನು ಅನ್ಯಾಯ ಮಾಡಿಕೊಂಡಂತೆಯೆ ಸರಿ. ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ಶ್ರಮಿಸಿದಂತೆಯೆ, ಜನತೆಯ ನೈಜ ಅಭಿವೃದ್ಧಿಗಾಗಿ ಕಾಂಗ್ರೆಸ್‌ನ ಜನವಿರೋಧಿ ನೀತಿಗಳ ವಿರುದ್ದವೂ ಬಲವಾದ ಚಳುವಳಿಯಲ್ಲಿ ತೊಡಗುವುದೊಂದೆ ಸರಿದಾರಿಯಾಗಿದೆ.

ದಲಿತರು, ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ, ರೈತಾಪಿ ಕೃಷಿ ಉಳಿಸಿ ಬೆಳೆಸಲು, ಕೃಷಿ ಕೂಲಿಕಾರರು ಹಾಗೂ ಕಾರ್ಮಿಕರ ಉದ್ಯೋಗ ಭದ್ರತೆ ಮತ್ತು 36,000 ರೂ.ಗಳ ಕನಿಷ್ಠ ವೇತನಕ್ಕಾಗಿ, ಸಾರ್ವಜನಿಕ ರಂಗದ ಉದ್ದಿಮೆಗಳ ಉಳಿವು ಮತ್ತು ಬೆಳವಣಿಗೆಗಾಗಿ, ಸಾರ್ವಜನಿಕ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ, ಸಾಮಾಜಿಕ ದಮನದ ವಿರುದ್ದದ ಚಳುವಳಿಗಳು ವಿಶಾಲವಾಗಿ ಬೆಳೆಯುವುದರಿಂದ ಮಾತ್ರವೇ ತನಗನುಕೂಲವಾದ ರಾಜಕೀಯ ಪರ್ಯಾಯವನ್ನು ರೂಪಿಸಬಲ್ಲದೆಂಬ ಸತ್ಯದ ಕಡೆ ಮತದಾರ ಮತ್ತು ಪ್ರಗತಿಪರರು ಗಮನ ಹರಿಸಬೇಕಿದೆ.

ಪರ್ಯಾಯ ಜನಪರ ರಾಜಕೀಯ ಶಕ್ತಿ ತಾನಾಗಿಯೆ ತನ್ನ ರಕ್ಷಣೆಗಾಗಿ ಬೆಳೆದು ಬರುವುದೆಂದು ನಿರೀಕ್ಷಿಸಿ ತೂಕಡಿಸುವುದು ಸರಿಯಲ್ಲ. ಅದು, ದೇವರೆ ಬಂದು ರಕ್ಷಿಸಬಲ್ಲನೆಂದು ಕಾಯುವ ಭಕ್ತನಂತೆಯೆ ಮತದಾರನು ಕಾಯುವಂತಹ ನಂಬಿಕೆಯಾಗುತ್ತದೆ ಮತ್ತು ಭಕ್ತನು ನಿರಾಶೆ ಅನುಭವಿಸಿದಂತೆ, ಆತನಿಗಾದ ಗತಿಯೆ ಮತದಾರನಿಗೆ ಆಗುತ್ತದೆಂಬುದನ್ನು ಗಮನಿಸಬೇಕಾಗಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮತದಾರನ ಗಮನವನ್ನು ಜನಪರ ರಾಜಕೀಯ ಶಕ್ತಿಯ ಗುರಿಯ ಕಡೆ ಸೆಳೆಯ ಬೇಕಿದೆ.

ಆದ್ದರಿಂದ ಬನ್ನಿ, ಈ ಉಪ ಚುನಾವಣೆಯಲ್ಲಿಯೂ ಪ್ರಜಾಪ್ರಭುತ್ವ ವಿರೋಧಿ ಬಿಜೆಪಿ ಹಾಗು ಅದರ ಮಿತ್ರರನ್ನು ಗೆಲ್ಲಿಸಿ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದನ್ನು ತಡೆಯೋಣ! ನೈಜ ಜನಾಭಿವೃದ್ಧಿಗಾಗಿ ಜನಾಂದೋಲನದಲ್ಲಿ ತೊಡಗೋಣ! ❍

## ದೇಶಭಕ್ತಿ ಅನ್ನೋದು.......

ಪುಟ 16 ರಿಂದ

ಆವರಿಸಿ ನಿಲ್ಲುವ ನಾಟಕ 'ರಕ್ತ ವಿಲಾಪ'. ಪದವಿ ಕಲಿಕಾ ಹಂತದ ದಿನಗಳಿಂದಲೂ ಗಮನ ಸೆಳೆದಿದ್ದ ಕುತೂಹಲ, ಅಚ್ಚರಿ, ಅಪಾರ ಗೌರವನೀಯ ವ್ಯಕ್ತಿ, ನನ್ನ ನೇರ, ಮಾನಸ ಗುರುಗಳನೇಕರ ವಿದ್ಯಾಗುರುಗಳಾಗಿದ್ದ ಡಾ.ಎಂ.ಎಂ. ಕಲಬುರಗಿ ಅವರ ಸಾಮಾಜಿಕ ಕಳಕಳಿ, ಅಲ್ಪವಿರಾಮ, ಅರ್ಧವಿರಾಮದಿಂದ ಪೂರ್ಣವಿರಾಮದತ್ತ ಸಾಗುವ ಸಂಶೋಧನೆಯ ಸತ್ವ, ಜನಪರ ಜೀವಧ್ವನಿ, ಸೈದ್ಧಾಂತಿಕ ಸ್ಪಷ್ಟತೆ ಮೊದಲಾದ ಹಲವು ಮಜಲುಗಳು ಚಿತ್ರವತ್ತಾಗಿ ಮೂಡಿ, ಆ ನೆನಪಿನಲೆಗಳಿನ್ನು ನವಿರಾಗಿ ನೇವರಿಸಿ, ಅಗಲಿಕೆಯ ನೋವು - ಒಡನಾಟದ ನಲಿವಿನ - ಜವಾಬ್ದಾರಿಕೆಯ ಜಂಜಡದ ಭಾವಗಳಲ್ಲಿ ಹೊಯ್ದಾಡಿಸಿ ತೇಲಿಸಿ ಮುಳುಗಿಸುತ್ತಿವೆ; ಮನವ ಆರ್ದ್ರ, ಗಂಭೀರಗೊಳಿಸುತ್ತಿವೆ.

ನಾಟಕದ ಪ್ರತಿ ದೃಶ್ಯದಲ್ಲಿ ಇಂತಹ ಹಲವು ಚಿಂತನೆಗಳು ವ್ಯಕ್ತವಾಗಿವೆ.

"ನ್ಯಾಯಕ್ಕಾಗಿ ಮಾಡೋದು ಹೋರಾಟ; ಸ್ವಾರ್ಥಕ್ಕಾಗಿ ಮಾಡೋದು ಕಾದಾಟ."

"ಪ್ರಶ್ನೆಗಳಿಂದ ಯಾವುದೇ ಧರ್ಮ ನಾಶ ಆಗೋದಿಲ್ಲ, ಹಂಗಾಗ್ತದ ಅಂದ್ರ ಅದು ಧರ್ಮ ಆಗಿರೋಕೆ ಸಾಧ್ಯವಿಲ್ಲ."

"ಜಾಗತೀಕರಣವೆಂದರೆ ಸ್ಥಳೀಯತೆಯ ವಿನಾಶವಲ್ಲ."

"ಸಂಶೋಧಕ ತಪ್ಪು ಹೇಳಿರಬಹುದು; ಸುಳ್ಳು ಹೇಳಿರಲಾರ"

"ಸಾಮಾಜಿಕ ಕ್ರಿಯಾಶೀಲತೆ ಇಲ್ಲದ ಆತ್ಮೋದ್ಧಾರಕ್ಕೆ ಅರ್ಥವಿಲ್ಲ."

"ಎಲಿಜಬೆತ್ ರಾಣಿಗಿಂತ ನಮ್ಮವ್ವ ನಮಗೆ ಶ್ರೇಷ್ಠ ಅಲ್ಲೇನು."

"ದೇಶಭಕ್ತಿಯನ್ನೋದು ರಕ್ತದ ಕುದಿತದಲ್ಲಲ್ಲ, ಬೆವರಿನೊಳಗಿರ್ತದ."

"ಸಾಮಾನ್ಯ ಜನ ಶ್ರಮವಹಿಸಿ ದುಡಿದು, ಹೋರಾಡಿ ದೇಶ ಕಟ್ಟಿದಾರ, ಇವತ್ತಿಗೂ ದೇಶ ಉಳಿಸಿದಾರ." ಹೀಗೆ ಹತ್ತು ಹಲವು ಕಲಬುರ್ಗಿಯವರ ಪಡೆಮಾತಿನ ಸರಣಿಯನ್ನೇ ಕೇಳಬಹುದು.

ರಾಯಚೂರಿನ 'ಸಮುದಾಯ' ಕಲಾವಿದರು ಅಭಿನಯಿಸಿದ ನಾಟಕ ಅಲ್ಲಿಯ ರಣ ಬಿಸಿಲುಂಡು ಬಸಿದ ಬೆವರ ಬನಿಯನ್ನು ದೃಶ್ಯ ದೃಶ್ಯದಲ್ಲಿ ನಾಟಕೀಯ ನಾವಿನ್ಯತೆಯಲ್ಲಿ ಹರಳುಗಟ್ಟಿಸಿ 90 ನಿಮಿಷಗಳ ಕಾಲ ಬಿಟ್ಟೂ ಬಿಡದಂತೆ ಸೆಳೆದಿಟ್ಟುಕೊಂಡು ನೋಡಿಸಿಕೊಳ್ಳುವಂತೆ ಸೃಜನ, ಸೂಕ್ಷ್ಮ ನೇಯ್ಗೆಯುಳ್ಳಂತ ಅಭಿನಯ ಸರಣಿ ಇದು.

ಈ ನಾಟಕದ ಮತ್ತೊಂದು ಕೇಂದ್ರಸ್ಥ ನೆಲೆಗಟ್ಟಿನ ಪಾತ್ರ, ವಿಕ್ಷಿಪ್ತ ವಿದ್ಯಾರ್ಥಿ ಪೂರ್ವಾಗ್ರಹ ಪೀಡಿತ ಸಮಕಾಲೀನ ಧಾರ್ಮಿಕ ಹೇರಿಕೆಗಳಿಂದ ಆವೃತವಾಗಿ, ಸಂಶೋಧನೆಯ ಸಾರಗ್ರಹಿಕೆಯಲ್ಲಿ ಸೋತು ತನ್ನೊಳತೋಟಿಯನ್ನು ಸಾಂತ್ವನಿಸಲಾಗದ, ವ್ಯವದಾನದಿಂದ ಅಧ್ಯಯನವನ್ನೂ ಮಾಡಲು ಸಿದ್ಧವಿರದ ಆದರೆ ನೀವು ಹೇಳುತ್ತಿರುವುದು ಸುಳ್ಳೆಂದು ವಾದಿಸಲೆಳಸುವ ಉಡಾಫೆ-ಭಂಡತನದಿಂದ ತೀವ್ರತರವಾಗಿ, ಸಿಡಿದೇಳುವ ➚

# ನರೇಗಾ ಯೋಜನೆಯಿಂದ 6 ತಿಂಗಳಲ್ಲಿ 84 ಲಕ್ಷ ಜನರನ್ನು ತೆಗೆದುಹಾಕಲಾಗಿದೆ!

* **ಆರು ತಿಂಗಳಲ್ಲಿ 84.8 ಲಕ್ಷ ಜನರನ್ನು ತೆಗೆದುಹಾಕಲಾಗಿದೆ.**
* **2022–23 ಮತ್ತು 2023–24 ರ ಆರ್ಥಿಕ ವರ್ಷಗಳಲ್ಲಿ ಒಟ್ಟು 8 ಕೋಟಿ ಜನರನ್ನು ತೆಗೆದುಹಾಕಲಾಗಿದೆ.**
* **ವೈಯಕ್ತಿಕ ಕೆಲಸದ ದಿನಗಳನ್ನು ಕಡಿಮೆ ಮಾಡಲಾಗಿದೆ**
* **ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯಲ್ಲಿ ಹೆಚ್ಚಿನ ಸಮಸ್ಯೆಗಳು**
* **ಲಿಬ್ ಟೆಕ್ ವರದಿಯಿಂದ ಬಹಿರಂಗ**

ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಉದ್ಯೋಗ ಖಾತ್ರಿ ಯೋಜನೆ ಮೇಲೆ ದಾಳಿ ನಡೆಯುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA)ಯಲ್ಲಿ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ABPS) ಮತ್ತು ಮುಖ ದೃಢೀಕರಣ ಹಾಜರಾತಿಯಂತಹ ಹೊಸ ವಿಧಾನಗಳನ್ನು ಪರಿಚಯಿಸಲಾಗುತ್ತಿದೆ. ಇಂತಹ ವಿಧಾನಗಳ ಮೂಲಕ ಬಡವರನ್ನು ಉದ್ಯೋಗದ ಖಾತರಿಯಿಂದ ಹೊರಗಿಡಲಾಗುತ್ತಿದೆ. ಕಡ್ಡಾಯ ಆಧಾರ್ ಸೀಡಿಂಗ್ ಅನ್ನು ಅನುಸರಿಸದ ಕಾರಣ 6.7 ಕೋಟಿ ಕಾರ್ಮಿಕರು ಗ್ರಾಮೀಣ ಉದ್ಯೋಗ ಯೋಜನೆಯಡಿ ಕೆಲಸ ಪಡೆಯಲು ಅನರ್ಹರಾಗಿದ್ದಾರೆ ಎಂದು ಡೇಟಾ ತೋರಿಸುತ್ತದೆ. ದೇಶದ ಒಟ್ಟು 24.6 ಕೋಟಿ ನೋಂದಾಯಿತ ಕಾರ್ಮಿಕರಲ್ಲಿ, 2024ರ ಏಪ್ರಿಲ್ ನಿಂದ ಸೆಪ್ಟೆಂಬರ್ ವರೆಗಿನ 6 ತಿಂಗಳ ಅವಧಿಯಲ್ಲಿ 84 ಲಕ್ಷದ 80 ಸಾವಿರ ಕಾರ್ಮಿಕರನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ (ಎಂಜಿಎನ್‌ಆರ್‌ಇಜಿಎಸ್) ರಿಜಿಸ್ಟರ್‌ನಿಂದ ತೆಗೆದುಹಾಕಲಾಗಿದೆ.

'ಲಿಬ್ ಟೆಕ್' ಇಂಡಿಯಾ (LibTech India–ಸಾಮಾಜಿಕ ಕಾರ್ಯಕರ್ತರು ಮತ್ತು ಸಮಾಜ ವಿಜ್ಞಾನಿಗಳ ಸಂಘಟನೆ) ಶುಕ್ರವಾರ (ಅಕ್ಟೋಬರ್ 25, 2024) ಬಿಡುಗಡೆ ಮಾಡಿದ ಸಮೀಕ್ಷೆಯ ವರದಿಯಿಂದ ಈ ಮಾಹಿತಿ ಬಹಿರಂಗವಾಗಿದೆ. "ಈ ರೀತಿ ನಡೆಯುತ್ತಿರುವ ಪ್ರವೃತ್ತಿಯು ಕಳೆದ ಎರಡೂವರೆ ವರ್ಷಗಳಲ್ಲಿ ಅಂದರೆ, ಏಪ್ರಿಲ್ 2022 ರಿಂದ ಸೆಪ್ಟೆಂಬರ್ 2024 ರವರೆಗೆ ಹೊರಹಾಕಲ್ಪಟ್ಟ ಎಂಟು ಕೋಟಿ ಜನರಲ್ಲಿ ನಿಜವಾದ ಬಡವರ ಭವಿಷ್ಯದ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ" ಎಂದು ವರದಿ ಹೇಳಿದೆ. ವರದಿಯು ಸಚಿವಾಲಯದ ವೆಬ್ ಸೈಟ್‌ನಿಂದ ಡೇಟಾವನ್ನು ಪಡೆದುಕೊಂಡಿದೆ.

ಕಳೆದ ಆರು ತಿಂಗಳಲ್ಲಿ 45.4 ಲಕ್ಷ ಹೊಸ ಕಾರ್ಮಿಕರು ಸೇರ್ಪಡೆಗೊಂಡಿದ್ದಾರೆ, ಅಂದರೆ, 84.80 ಲಕ್ಷ ಕಾರ್ಮಿಕರ ಜಾಬ್ ಕಾರ್ಡ್‌ಗಳನ್ನು ತೆಗೆದುಹಾಕಿದ ನಂತರವೂ ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ 39.3 ಲಕ್ಷ ಕಡಿಮೆಯಾಗಿದೆ ಎಂದು ವರದಿ ಹೇಳಿದೆ. ತಮಿಳುನಾಡು (ಶೇ.14.7) ಮತ್ತು ಛತ್ತೀಸ್‌ಗಢ (ಶೇ.14.6) ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ಯೋಜನೆಯಿಂದ ತೆಗೆದುಹಾಕಿರುವ ರಾಜ್ಯಗಳಾಗಿವೆ. ಹಲವಾರು ವರ್ಷಗಳಿಂದ ವಜಾಗೊಳಿಸುವಿಕೆಗಳು ನಡೆಯುತ್ತಿವೆ. 2022–23 ಮತ್ತು 2023–24 ರ ಆರ್ಥಿಕ ವರ್ಷಗಳಲ್ಲಿ ಒಟ್ಟು 8 ಕೋಟಿ ಕಾರ್ಮಿಕರನ್ನು ವಜಾಗೊಳಿಸಲಾಗಿದೆ ಎಂದು ಲಿಬ್ ಟೆಕ್ ವರದಿ ಹೇಳಿದೆ.

ಪ್ರತಿ ಗ್ರಾಮೀಣ ಕುಟುಂಬಕ್ಕೆ ವರ್ಷಕ್ಕೆ 100 ದಿನಗಳವರೆಗೆ ಉದ್ಯೋಗವನ್ನು ಒದಗಿಸುವ ಈ ಕಾಯಿದೆಯಡಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ರಾಜ್ಯ ಸರ್ಕಾರಗಳು ಜಾಬ್ ಕಾರ್ಡ್‌ಗಳನ್ನು ಬೃಹತ್ ಪ್ರಮಾಣದಲ್ಲಿ ಹಿಂತೆಗೆದುಕೊಳ್ಳುತ್ತಿವೆ. ನಕಲಿ ಕಾರ್ಡ್‌ಗಳು, ಸಾವುಗಳು, ಕಾರ್ಡ್ ಹೊಂದಿರುವವರು ಯೋಜನೆಯಡಿ ಕೆಲಸ ಮಾಡಲು ಇಷ್ಟವಿಲ್ಲದಿರುವುದು ಇತ್ಯಾದಿಗಳ ಕಾರಣಗಳಿಂದಾಗಿ ಕಾರ್ಡ್‌ಗಳನ್ನು ತೆಗೆದುಹಾಕಲಾಗುತ್ತಿದೆ ಎಂದು ಸರ್ಕಾರ ಸಂಸತ್ತಿಗೆ ತಿಳಿಸಿದೆ. ಇದರ ಜೊತೆಗೆ ಇದು ಹೆಚ್ಚುವರಿಯಾಗಿದೆ. ಲಿಬ್ ಟೆಕ್ ಇಂಡಿಯಾ ನಡೆಸಿದ ಅಧ್ಯಯನದಲ್ಲಿ ಬಹಳಷ್ಟು ಅಳಿಸುವಿಕೆಗಳು ತಪ್ಪಾಗಿವೆ ಎಂಬುದನ್ನು ಪತ್ತೆಮಾಡಿದೆ.

**ಕಡಿಮೆಯಾಗುತ್ತಿರುವ ಕೆಲಸದ ದಿನಗಳು**

ಉದ್ಯೋಗ ಖಾತ್ರಿ ಯೋಜನೆಯಡಿ ವೈಯಕ್ತಿಕ ಕೆಲಸದ ದಿನಗಳು ಕಡಿಮೆಯಾಗುತ್ತಿವೆ ಎಂದು ಸಂಸ್ಥೆ ಹೇಳಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಒದಗಿಸಲಾದ ಕೆಲಸದ ದಿನಗಳ ಸರಾಸರಿ ಸಂಖ್ಯೆಯಲ್ಲಿ (ಒಂದು ಹಣಕಾಸು ವರ್ಷದಲ್ಲಿ ಯೋಜನೆಯಡಿ ನೋಂದಾಯಿಸಲಾದ ಪ್ರತಿ ವ್ಯಕ್ತಿಗೆ ಒಟ್ಟು ಕೆಲಸದ ದಿನಗಳು) ಗಮನಾರ್ಹ ಇಳಿಕೆ ಕಂಡುಬಂದಿದೆ ಎಂದು ಅದು ಹೇಳಿದೆ. ಈ ವರ್ಷದ ಏಪ್ರಿಲ್ ಮತ್ತು ಸೆಪ್ಟೆಂಬರ್ ನಡುವೆ 154 ಕೋಟಿ ವೈಯಕ್ತಿಕ ಕೆಲಸದ ದಿನಗಳಿಗೆ ಗಣನೀಯವಾಗಿ ಕುಸಿದಿವೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಸಂಖ್ಯೆ 184 ಕೋಟಿ ವೈಯಕ್ತಿಕ ಕೆಲಸದ ದಿನಗಳಿದ್ದವು. 2023–24ರ ಅವಧಿಗೆ ಹೋಲಿಸಿದರೆ, 2024–25ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಆರು ರಾಜ್ಯಗಳು ಕೆಲಸದ ದಿನಗಳಲ್ಲಿ ಹೆಚ್ಚಳವನ್ನು ಕಂಡಿವೆ, ಆದರೆ 14 ರಾಜ್ಯಗಳು ವೈಯಕ್ತಿಕ ಕೆಲಸದ ದಿನಗಳ ಸಂಖ್ಯೆಯಲ್ಲಿ ಕುಸಿತವನ್ನು ಕಂಡಿವೆ.

"ಈ ಕುಸಿತವು ಕುಗ್ಗುತ್ತಿರುವ ಭಾಗವಹಿಸುವಿಕೆಯ ನೆಲೆಯನ್ನು ಮಾತ್ರವಲ್ಲದೆ ಹೆಚ್ಚು ಅಗತ್ಯವಿರುವವರಿಗೆ ಉದ್ಯೋಗಾವಕಾಶಗಳ ವಿತರಣೆಯಲ್ಲಿ ಸಂಭಾವ್ಯ ಕೊರತೆಯನ್ನು ಸೂಚಿಸುತ್ತದೆ. ನಿರಂತರ ಅನುಷ್ಠಾನ ಸವಾಲುಗಳು, ನಿರ್ದಿಷ್ಟವಾಗಿ ಆಧಾರ್ ಆಧಾರಿತ ಪಾವತಿಗಳು ಮತ್ತು ABPS ಗಾಗಿ ಕೆಲಸಗಾರರ ಅರ್ಹತೆ, ಈ ಸಮಸ್ಯೆಗಳನ್ನು ಉಲ್ಬಣಗೊಳಿಸುವುದನ್ನು ಮುಂದುವರೆಸಿದೆ" ಎಂದು ವರದಿಯು ಗಮನಸೆಳೆದಿದೆ.

**ಕಡ್ಡಾಯ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ**

ಕಡ್ಡಾಯ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ಎಬಿಪಿಎಸ್) ಕಾರ್ಮಿಕರಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಇದಕ್ಕಾಗಿ ಕಾರ್ಮಿಕರ ಜಾಬ್ ಕಾರ್ಡ್ ಗೆ ಆಧಾರ್ ಲಿಂಕ್ ಮಾಡಬೇಕು. ಆಧಾರ್ ಮತ್ತು ಜಾಬ್ ಕಾರ್ಡ್ ನಲ್ಲಿರುವ ಹೆಸರು ಸರಿಯಾಗಿ ಹೊಂದಿಕೆಯಾಗಬೇಕು. ಆಧಾರ್ ಅನ್ನು ಬ್ಯಾಂಕ್ ಖಾತೆಗೆ ಲಿಂಕ್ ಮಾಡಬೇಕು ಮತ್ತು NPCI ನಲ್ಲಿ ನೋಂದಾಯಿಸಿಕೊಳ್ಳಬೇಕು. ಇವುಗಳಲ್ಲಿ ಯಾವುದಾದರೂ ಸಾಧ್ಯವಾಗದಿದ್ದಲ್ಲಿ, ಕಾರ್ಮಿಕರು ABPS ಗೆ ಅನರ್ಹರಾಗುತ್ತಾರೆ, ಈ ಕಾರಣದಿಂದಾಗಿಯೇ ತಾವು ಅನರ್ಹರಾಗಿದ್ದೇವೆ ಎಂದು 27.4 ಪ್ರತಿಶತದಷ್ಟು ಕಾರ್ಮಿಕರು ಹೇಳಿಕೊಳ್ಳುತ್ತಾರೆ ಎಂದು ಲಿಬ್ ಟೆಕ್ ವಿವರಿಸಿದೆ. ಕಡ್ಡಾಯ ಆಧಾರ್ ಸೀಡಿಂಗ್ ಅನ್ನು ಅನುಸರಿಸದ ಕಾರಣ ದೇಶಾದ್ಯಂತ 6.7 ಕೋಟಿಗೂ ಹೆಚ್ಚು ಕಾರ್ಮಿಕರು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಪಡೆಯಲು ಅನರ್ಹರಾಗಿದ್ದಾರೆ ಎಂದು ಡೇಟಾ ತೋರಿಸುತ್ತದೆ.

ಕೇಂದ್ರವು ಜನವರಿ 2023 ರಲ್ಲಿ ರಾಷ್ಟ್ರವ್ಯಾಪಿ ABPS ಅನುಷ್ಠಾನವನ್ನು ಕಡ್ಡಾಯಗೊಳಿಸಿತು. ಆದಾಗ್ಯೂ, ಸಾರ್ವಜನಿಕ ಆಕ್ರೋಶ ಮತ್ತು ಕಾರ್ಮಿಕ ಸಂಘಟನೆಗಳ ಒತ್ತಡಕ್ಕೆ ಪ್ರತಿಕ್ರಿಯೆಯಾಗಿ, ABPS ಅನುಷ್ಠಾನದ ಗಡುವನ್ನು ಹಲವಾರು ಬಾರಿ ವಿಸ್ತರಿಸಲಾಯಿತು. ಆದಾಗ್ಯೂ, ಜನವರಿ 1, 2024 ರಿಂದ ABPS ಅನ್ನು ಕಡ್ಡಾಯಗೊಳಿಸಲಾಗಿದೆ. ಅಂತಿಮ ಗಡುವುಗಳ ಹಲವಾರು ವಿಸ್ತರಣೆಗಳ ಹೊರತಾಗಿಯೂ, ಎಲ್ಲಾ ನರೇಗಾ ಕೆಲಸಗಾರರಲ್ಲಿ ಶೇ.27.4 ಮತ್ತು ಸಕ್ರಿಯ ಕೆಲಸಗಾರರಲ್ಲಿ ಶೇ.4.2ರಷ್ಟು ಕಾರ್ಮಿಕರು ಪ್ರಸ್ತುತ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ABPS) ಪ್ರಯೋಜನಗಳಿಗೆ ಅನರ್ಹರಾಗಿದ್ದಾರೆ. ABPS ಅನುಸರಣೆಯಲ್ಲಿ ಗಮನಾರ್ಹ ರಾಜ್ಯ ಮಟ್ಟದ ಅಸಮಾನತೆಗಳನ್ನು ಈ ವರದಿ ಬಹಿರಂಗಪಡಿಸಿದೆ. ಅಸ್ಸಾಂನಲ್ಲಿ ಎಬಿಪಿಎಸ್‌ಗೆ ಅನರ್ಹವಾಗಿರುವ ಸಕ್ರಿಯ ಕಾರ್ಯಕರ್ತರ ಹೆಚ್ಚಿನ ಶೇಕಡಾವಾರು ಪ್ರಮಾಣವನ್ನು ಹೊಂದಿದ್ದರೆ, ಕೇರಳವು ಕಡಿಮೆ ಪ್ರಮಾಣವನ್ನು ಹೊಂದಿದೆ.

2005 ರಲ್ಲಿ, ಅಂದಿನ ಯುಪಿಎ–1ರ ಸರ್ಕಾರವು (60 ಸಂಸದರಿದ್ದ ಎಡಪಕ್ಷಗಳು 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ದ ಆಧಾರದ ಮೇಲೆ ಆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಟ್ಟಿದ್ದವು.) ಗ್ರಾಮೀಣ ಭಾರತದ ಕೋಟಿಗಟ್ಟಲೆ ಜನರಿಗೆ 'ಕೆಲಸದ ಹಕ್ಕು' ಖಾತ್ರಿಪಡಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (MGNREGA) ಜಾರಿಗೆ ತಂದಿತು.

**ಹಳ್ಳಿಗಳಿಂದ ನಗರಗಳತ್ತ ಹೆಚ್ಚುತ್ತಿರುವ ವಲಸೆ**

ಕಳೆದ ವರ್ಷದ ವರದಿಯಲ್ಲಿ, 2022–23 ಮತ್ತು 2023–24 ರ ಹಣಕಾಸು ವರ್ಷಗಳಲ್ಲಿ 8 ಕೋಟಿ ಜನರನ್ನು 100 ದಿನಗಳ ಉದ್ಯೋಗ ಖಾತರಿ ಯೋಜನೆಯ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಲಿಬ್ ಟೆಕ್ ಗಮನಸೆಳೆದಿದೆ. ಅಲ್ಲದೆ, ಆಂಧ್ರಪ್ರದೇಶದಲ್ಲಿ ಲಿಬ್ ಟೆಕ್ ಇಂಡಿಯಾ ನಡೆಸಿದ ಸಮೀಕ್ಷೆಯ ಪ್ರಕಾರ, ಸುಮಾರು 15 ಪ್ರತಿಶತದಷ್ಟು ಅಳಿಸುವಿಕೆಗಳು ತಪ್ಪಾಗಿವೆ ಮತ್ತು ಈ ಅಳಿಸುವಿಕೆಗಳು ಆಧಾರ್ ಆಧಾರಿತ ಪಾವತಿ ವ್ಯವಸ್ಥೆಗೆ ಹೊಂದಿಕೆಯಾಗುತ್ತವೆ ಎಂದು ಕಂಡುಕೊಂಡಿದೆ. ಶೇ. 27.4 ರಷ್ಟು ನೋಂದಾಯಿತ ಕಾರ್ಮಿಕರು (6.7 ಕೋಟಿ ಕಾರ್ಮಿಕರು) ಮತ್ತು ಶೇ. 4.2 ಸಕ್ರಿಯ ಕೆಲಸಗಾರರು (54 ಲಕ್ಷ ಕಾರ್ಮಿಕರು) ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯ (ABPS) ಫಲಾನುಭವಿಗಳಲ್ಲ. ತಂತ್ರಜ್ಞಾನ ಮತ್ತು ಆಧಾರ್ ಬಳಸುವ ನೆಪದಲ್ಲಿ ಮೋದಿ ಸರ್ಕಾರ 100 ದಿನದ ನರೇಗಾ ಯೋಜನೆಯಿಂದ ಕೋಟ್ಯಾಂತರ ಜನರನ್ನು ಹೊರಹಾಕುತ್ತಿದೆ. ಇದರಿಂದಾಗಿ, ಗ್ರಾಮೀಣ ಕಾರ್ಮಿಕರು ಉದ್ಯೋಗ ಸಿಗುವ ಭರವಸೆ ಕಳೆದುಕೊಂಡಿದ್ದು, ಹಳ್ಳಿಗಳಿಂದ ನಗರಗಳತ್ತ ವಲಸೆಯೂ ಹೆಚ್ಚಿದೆ.

–ಸಿಡಿ

---

➔ ಕಿತ್ತಾಟಕ್ಕಿಳಿವ ವ್ಯವಸ್ಥೆಯ ಪ್ರತಿನಿಧಿ. ದೀರ್ಘಕಾಲೀನ ಆರಾಧಿಸುವ ಶಿಷ್ಯರ ಅನಾದರ, ಗುಣಗ್ರಾಹಿತ್ವವಿರದ ಅಸೂಯಾಪರ ವಿರೋಧಿಗಳ ಸಂವಾದರಾಹಿತ್ಯ ಪರಿಸ್ಥಿತಿ. ಇಂತವರು ಸುಳಿಯಲು ಕಾರಣವಾಯಿತೇನೋ... ಗದ್ಗದಿಕೆಯಿಂದ, ಅತಂತ್ರತೆಯ, ತನ್ನ ನಂಬುಗೆಯ ಅಸ್ಥಿರತೆ–ಅಭದ್ರತೆಯ ಆತಂಕದಿಂದ ಕಂಪಿಸುತ್ತ ಕೂಗುವ ನುಡಿ

"ಸಾವಿರಾರು ವರ್ಷದಿಂದ ಬಂದದ್ದು ಸುಳ್ಳು ಹೆಂಗ್ ಆಗ್ತದ..."

ಇಂದಿನ ಹದಿಹರೆಯದ ಯುವಕರನ್ನು ಆವಾಹಿಸಿರುವ ಪ್ರಶ್ನೆಯೂ ಹೌದಾದ್ದರಿಂದ

ಇದು ಸಾಮಾಜಿಕ ವ್ಯವಸ್ಥೆ ರೂಪಿಸಿದ ಕೊಲೆ... ಈ ಪಾತ್ರವನ್ನು ಸಾಗರ ಇಟೇಕರ ಅವರು ಅಪ್ಯಾಯಮಾನವಾಗಿ ಅಭಿನಯಿಸಿದ್ದಾರೆ. ಕೊಲ್ಲುವ ಮನಸ್ಸು ಇನ್ನೂ ಜೀವಂತವಾಗಿದೆ. ಅದರ ಮುಖಾಮುಖಿಗೆ ಈ ನಾಟಕ ವರ್ತಮಾನದ ತುರ್ತಿನ ಅಗತ್ಯವೂ ಹೌದು.

ಬಿಸಿರಕ್ತದ ಆವೇಶವನ್ನೇ ದೇಶಭಕ್ತಿ ಎಂದುಕೊಳ್ಳುವ ಪ್ರವೃತ್ತಿ, ಜಾಹೀರಾತು ಬಲದಿಂದ ಬಿಡಿಗಾಸಿಗೆ ಲಭ್ಯವಿರೋ ಪತ್ರಿಕೆಗಳು ಹಾಗೂ ವಾಟ್ಸ್ ಆಪ್ ಮುಂತಾದ ಸಾಮಾಜಿಕ ಮಾಧ್ಯಮ–ಜಾಲತಾಣದ ಹಂಚಿಕೆಗಳನ್ನೇ ಸತ್ಯವೆಂದುಕೊಂಡ, ಜನರ ಶ್ರಮದ ಪ್ರಜ್ಞೆಯಿರದ, ಐತಿಹಾಸಿಕ ಘಟನೆಗಳ ಸೂಕ್ತ ಗ್ರಹಿಕೆಯಿರದ, ಸಂಗತಿಗಳ ಸ್ಪಷ್ಟತೆಯಿರದ, ಧಾರ್ಮಿಕ ಅಮಲು, ಹುಸಿ ರಾಷ್ಟ್ರೀಯತೆ ರೊಚ್ಚಿನಲ್ಲಿ ಭಾವೋದ್ರೇಕಕ್ಕೆಳಸಿ ಸ್ತಿಮಿತ ಕಳೆದುಕೊಳ್ಳುವ, ಆವೇಶದಿಂದ ಪರಿಹಾರ ಕಂಡುಕೊಳ್ಳುವ ಹಪಹಪಿಯ ದಾರಿ. ಅದು ಉಂಟು ಮಾಡುವುದು ದಂಡಸಂಹಿತೆ/ಸೆಕ್ಷನ್ ಮೀರಿದ ಪರಿಣಾಮಗಳನ್ನಷ್ಟೇ. ಈ ಅಂಶಗಳನ್ನು ನಾಟಕದಲ್ಲಿ ಕುಸುರಿಗೊಳಿಸಲಾಗಿದೆ. ಹದಿಹರೆಯದ ಯುವ– ಜನತೆ ಮರೆಯದೆ ನೋಡಬೇಕಾದ ನಾಟಕವಿದು.

–ಸೋಮಶೇಖರ ಕನಕಾಚಲ

(ಮೂಲ : ಫೇಸ್‌ಬುಕ್ ಪೋಸ್ಟ್‌ಗಳು)

## 'ರಕ್ತ ವಿಲಾಪ'ದ ಭೈರವಿಯ ಆಲಾಪನೆ

ಬಸವಾದಿ ಶರಣರ ವಚನಗಳ ಮತ್ತು ಅವರ ಬದುಕು ಸಂಶೋಧನೆಗೆ ತಮ್ಮ ಇಡೀ ಜೀವನವನ್ನೆ ಮೀಸಲಾಗಿರಿಸಿ ಅದಕ್ಕಾಗಿಯೇ ಹುತಾತ್ಮರಾದ ಎಂ.ಎಂ ಕಲಬುರ್ಗಿಯವರ ಜೀವನ ಹಾಗು ಚಿಂತನಕ್ರಮಗಳನ್ನು ಅಳವಡಿಸಿ ರಚಿಸಿದ ಈ ನಾಟಕ ಕನ್ನಡದ ಮಟ್ಟಿಗೆ ಬಹು ಅಪರೂಪದ್ದು ಹಾಗು ರಚನೆಕಾರರ ಶ್ರಮ ಮೆಚ್ಚವಂತಹದ್ದು.

ರಚನೆಕಾರ ವಿಕ್ರಮ ವಿಸಾಜಿ ಈ ನಾಟಕವನ್ನು ಬಹು ಬೌದ್ಧಿಕ ಎತ್ತರದಲ್ಲಿ ಕಟ್ಟಿಕೊಟ್ಟಿದ್ದಾರೆ. ನಾಟಕದಲ್ಲಿನ ಸಂಭಾಷಣೆಗಳನ್ನು ಕಿವಿಗೆ ಕೇಳಿಸಿಕೊಳ್ಳುವುದೆ ಒಂದು ಹಬ್ಬ. ಇಲ್ಲಿಯ ಸಂಭಾಷಣೆಗಳು ಸ್ಫಟಿಕದ ಸಲಾಕೆ. ಆರಂಭದಿಂದ ಅಂತ್ಯದವರೆಗೂ ರಾಗ ಭೈರವಿಯ ಆಲಾಪದಂತೆ ಸಾಗುವ ನಾಟಕ ಮನದಾಳದಲ್ಲಿ ಚಿಂತನೆ ಆರ್ದ್ರತೆ ಮತ್ತು ವಿಶಾದದ ಮಡುವನ್ನೆ ಸೃಷ್ಟಿಸುತ್ತದೆ.

ನ್ಯಾಯಾಲಯದ ಸನ್ನಿವೇಶದಲ್ಲಿ ನ್ಯಾಧೀಶರು ವ್ಯಕ್ತಪಡಿಸುವ ಆ ಮಾತುಗಳು ಹೀಗಿವೆ 'ನ್ಯಾಯಂಗಕ್ಕೆ ಇಂತಹ ಪ್ರಬುದ್ಧ ಮಾತುಗಳು ಎಷ್ಟರ ಮಟ್ಟಿಗೆ ಅರ್ಥವಾಗುತ್ತವೆ ಎನ್ನುವದು ವರ್ತಮಾನದಲ್ಲಿ ನ್ಯಾಯಾಲಯ ಎದುರಿಸುತ್ತಿರುವ ಸಂಕೀರ್ಣ ಭಾಷಾ ಅರ್ಥೈಸುವಿಕೆಯ ಸಮಸ್ಯೆ." ಕೋರ್ಟಿನ ಸಂವಹನಕ್ಕೆ ಪ್ರಬುದ್ಧ ಪರಿಣಾಮ ಭಾಷೆ ನಿಲುಕಲಾರದು ಎಂದು ಹೇಳಿಸಿರುವುದು ನಾಟಕಕಾರರ ಪ್ರಭುದ್ಧತೆಗೆ ಸಾಕ್ಷಿಯಾಗಿದೆ.

ಕೊಲ್ಲಲು ಬಂದವನಿಗೆ ಜಡಿಮಳೆಯಂತೆ ತಮ್ಮ ಅಂತಃಕರಣದ ತಾತ್ವಿಕ ಅಭಿವ್ಯಕ್ತಿಯಿಂದ ತಂಪೆರೆಯುವ ಸಂಶೋಧಕ ಕೆಲವೊಂದು ಸಲ ಸತ್ಯದ ಸುಂದರ ಹಾದಿಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿ ಕೊಂಚ ಯಶಸ್ವಿಯಾದಂತೆನಿಸಿದರೂ ಆ ಹುಡುಗನ ಮನದಾಳದಲ್ಲಿ ಬೇರೂರಿದ ರಾಕ್ಷಸ ತತ್ವಗಳ ಪ್ರಚೋದಕ ದಾಳಿಗೆ ಬಲಿಯಾಗುತ್ತಾರೆ.

ಒಂದುವರೆ ಗಂಟೆ ನಮ್ಮನ್ನು ಬಿಗಿಯಾದ ನಿರೂಪಣೆಯಿಂದ ಕಟ್ಟಿಹಾಕುವ " ರಕ್ತವಿಲಾಪ" ಪ್ರವೀಣರೆಡ್ಡಿ ಗುಂಜಹಳ್ಳಿಯವರ ಅದ್ಭುತ ಅಭಿನಯ ಹಾಗು ನಿರ್ದೇಶನ ಲಕ್ಷ್ಮಣ ಮಂಡಲಗೆರೆಯವರ ಬೆಳಕು ಇನ್ನಾಫ್ ಅವರ ಸಂಗೀತದಿಂದ ನಮ್ಮನ್ನು ಬಹುವಾಗಿ ಕಾಡುತ್ತದೆ.

–ಮಹಾಂತೇಶ್ ನವಲಕಲ್

(ಮೂಲ: ಫೇಸ್‌ಬುಕ್ ಪೋಸ್ಟ್‌ಗಳು)


NEW No. MAG(3)/NPP/205/2021-2022
JANASHAKTHI KANNADA VARA PATRIKE October 28-November 3, 2024 Price: Rs. 10/- Date of Publication: 25 October 2024 RNI No. KARKAN /2006/17926 Posted on 29-10-2024
Posted at BG PSO, BG - 560026 **Posted at Periodical Rate -** Rs. 2

ಚರಿತ್ರೆಯಲ್ಲಿ ಮತಾಂಧ ಶಕ್ತಿಗಳ ಕ್ರೌರ್ಯಕ್ಕೆ ಬಲಿಯಾದ ಸಂಶೋಧಕ, ವಿದ್ವಾಂಸ ಡಾ. ಎಂ.ಎಂ. ಕಲ್ಬುರ್ಗಿಯವರಂತವರು ಎಷ್ಟೋ ಮಂದಿ. ನೇರವಾಗಿ ಕಲ್ಬುರ್ಗಿಯವರ ಹೆಸರನ್ನು ಉಲ್ಲೇಖಿಸದೆಯೂ, ಕಲ್ಬುರ್ಗಿಯವರಂತಹ ಸತ್ಯಶೋಧಕರ ಬದುಕು–ವಿಚಾರಗಳ ಕುರಿತ ನಾಟಕ 'ರಕ್ತ ವಿಲಾಪ' ಬಿಜಾಪುರದಲ್ಲಿ ನಡೆದ ಜನಕಲಾ ಸಾಂಸ್ಕೃತಿಕ ಮೇಳದಲ್ಲಿ ಅಕ್ಟೊಬರ್ 6, 2024 ರಂದು ಪ್ರದರ್ಶನಗೊಂಡಿದೆ. ಈ ನಾಟಕದ ಬಗ್ಗೆ ಚಿಂತಕಿ–ಬರಹಗಾರ್ತಿ ಪಿ. ಭಾರತಿದೇವಿ ಮತ್ತು ಸೋಮಶೇಖರ ಕನಕಾಚಲ ಹಾಗೂ ಮಹಾಂತೇಶ್ ನವಲಕಲ್ ಅವರು ಕಟ್ಟಿಕೊಟ್ಟಿರುವ ಚಿತ್ರಣ ಇಲ್ಲಿದೆ.



## ಸತ್ಯಶೋಧಕರ–ಬದುಕು–ವಿಚಾರ ಕುರಿತ ನಾಟಕ–ರಕ್ತ ವಿಲಾಪ

# ವೈಚಾರಿಕತೆ ಮತ್ತು ಮೌಢ್ಯ ಇಲ್ಲಿ ಎದುರು ಬದುರು ಸತ್ಯಶೋಧಕರನ್ನೇ ಬೇಟೆಯಾಡುವ, ಇಲ್ಲವಾಗಿಸುವ ಕತೆ..




ಬಿಜಾಪುರದ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ಪ್ರವೀಣ ರೆಡ್ಡಿ ಗುಂಜಹಳ್ಳಿ ಅವರ ನಿರ್ದೇಶನದಲ್ಲಿ ರಾಯಚೂರು ಸಮುದಾಯ ಅಭಿನಯಿಸಿದ 'ರಕ್ತ ವಿಲಾಪ' ನಾಟಕ ಇಡೀ ರಂಗಮಂದಿರದ ನೋಡುಗರು ಉಸಿರು ಬಿಗಿಹಿಡಿದು ನೋಡುವಂತೆ ಮಾಡಿತು. ಮೇ ಸಾಹಿತ್ಯ ಮೇಳ ಬಳಗ, ವಿಜಯಪುರ ಹಾಗೂ ಲಡಾಯಿ ಪ್ರಕಾಶನ ವಿವಿಧ ಸಂಘಟನೆಗಳ ಜೊತೆಗೆ ಆಯೋಜಿಸಿದ್ದ 'ಜನಕಲಾ ಸಾಂಸ್ಕೃತಿಕ ಮೇಳ'ದ ಭಾಗವಾಗಿ ಈ ಪ್ರದರ್ಶನ ನಡೆಯಿತು. ಡಾ.ವಿಕ್ರಮ ವಿಸಾಜಿಯವರು ಬರೆದ ಈ ನಾಟಕ ಇಂದು ಸತ್ಯಶೋಧನೆ, ಬೌದ್ಧಿಕತೆಯನ್ನು ಹೇಗೆ ಫ್ಯಾಸಿಸ್ಟ್ ಕರಾಳ ಹಸ್ತಗಳು ಬೇಟೆಯಾಡುತ್ತಿವೆ ಎಂಬುದನ್ನು ಮತಾಂಧರ ಗುಂಡಿಗೆ ಬಲಿಯಾದ ಕನ್ನಡದ ಮಹತ್ವದ ವಿದ್ವಾಸರಾದ ಡಾ.ಎಂ. ಎಂ.ಕಲ್ಬುರ್ಗಿ ಅವರ ಬದುಕಿನ ಮೂಲಕ ಅನಾವರಣಗೊಳಿಸುತ್ತದೆ.

ಇಡೀ ನಾಟಕ ಸಂಶೋಧಕನ ಸತ್ಯದ ಹುಡುಕಾಟವನ್ನು ಫ್ಯಾಸಿಸಂನ ಮೌಢ್ಯ, ಕುತರ್ಕದ ಜೊತೆಗೆ ಢಿಕ್ಕಿ ಹೊಡೆಸುವುದರ ಮೂಲಕ ನಿಜದ ದಾರಿ ಕಾಣಿಸುತ್ತಾ ಹೋಗುತ್ತದೆ. ಕೋಮುವಾದಿ ಕಾರ್ಯಾಚರಣೆಯಲ್ಲಿ ದಾಳವಾದ ಯುವಕ ತನ್ನ ತಲೆಯಲ್ಲಿ ತುಂಬಲಾದ ಮಾತುಗಳನ್ನು ಕಲ್ಬುರ್ಗಿಯವರ ಮುಂದಿಡುತ್ತಾ ಹೋಗುತ್ತಾನೆ. ಅವನ ಪ್ರತಿ ಮಾತನ್ನೂ ಪ್ರೀತಿಯಿಂದ ಕೇಳಿ ಚಿಕಿತ್ಸಕನ ರೀತಿಯಲ್ಲಿ ಉತ್ತರಿಸುವ ಕಲ್ಬುರ್ಗಿಯವರ ಮಾತುಗಳಿಗೆ ಪ್ರತಿಯಾಗಿ ಉತ್ತರಿಸುವ ಬೌದ್ಧಿಕ ಸಾಮರ್ಥ್ಯವಾಗಲೀ ವೈಚಾರಿಕತೆಯಾಗಲೀ ಇಲ್ಲದ ಯುವಕ ಪ್ರತಿ ಮಾತಿನಿಂದ ವ್ಯಗ್ರನಾಗುತ್ತಾ ಹೋಗುತ್ತಾನೆ. ವೈಚಾರಿಕವಾಗಿ ಎದುರಾಗೋದು ಸಾಧ್ಯವಿಲ್ಲದಾಗ, ಸತ್ಯದ ಝಳ ಎದುರಿಸಲು ಸಾಧ್ಯವಾಗದಿರುವಾಗ ಕೊನೆಗೆ ಪಿಸ್ತೂಲೇ ಸತ್ಯದ ಬಾಯಿ ಮುಚ್ಚಿಸುವ ಸಾಧನವಾಗುತ್ತದೆ.

**ಯಥಾಸ್ಥಿತಿ ವಾದಿಗಳಿಗೆ ಕಸಿವಿಸಿ**

ಎಂ.ಎಂ.ಕಲ್ಬುರ್ಗಿಯವರು ವಚನಗಳ ನಿಕಟ ಓದಿನ ಮೂಲಕ ಕಂಡುಕೊಂಡ ಸತ್ಯಗಳು, ಅವರ ವೈಚಾರಿಕ ನಿಲುವು ಯಥಾಸ್ಥಿತಿ ವಾದಿಗಳಿಗೆ ಕಸಿವಿಸಿಯುಂಟು ಮಾಡಿರುವುದು ಇಡೀ ನಾಡಿಗೆ ತಿಳಿದಿರುವ ಸಂಗತಿ. ಆದರೆ ಈ ವಿಚಾರಗಳನ್ನು ವಾಗ್ವಾದದ ಮೂಲಕ ಎದುರಾಗುವ ಛಾತಿ ಕೋಮುವಾದಿ ಮನಸ್ಥಿತಿಗೆ ಇಲ್ಲ. ಅದು ಸಾವಿರಾರು ವರ್ಷಗಳಿಂದ ತಾನು ಬಿತ್ತಿದ ಸುಳ್ಳನ್ನು ಯಾರಾದರೂ ಹುಡುಕಿ ಬಯಲು ಮಾಡಲು ಹೊರಟರೆ ಅಂಥವರನ್ನೇ ಇಲ್ಲವಾಗಿಸಿದ್ದು ಜಗತ್ತಿನ ಇತಿಹಾಸ ತಿಳಿದವರಿಗೆ ಗೊತ್ತು. ಜೊತೆಗೆ ಇಂಥ ಮನಸ್ಥಿತಿ ಬಿತ್ತಿ ಬೆಳೆಯುವ ಮೂಲಕ ಅಬಾಧಿತವಾಗಿ ಅಧಿಕಾರವನ್ನು ಚಲಾಯಿಸುತ್ತಿರುವವರು ಸದಾ ತೆರೆಯ ಮರೆಯಲ್ಲಿದ್ದು ನಾಟಕದಲ್ಲಿ ಕಾಣುವ ಯುವಕನಂಥ ಮಗ್ಧ, ಅಮಾಯಕರನ್ನು ದಾಳಗಳಂತೆ ಬಳಸಿ ಕಾರ್ಯ ಸಾಧಿಸುತ್ತಿರುತ್ತಾರೆ. ಹೊಸ ವಿಚಾರಗಳನ್ನು ಬೌದ್ಧಿಕ ತಯಾರಿಯೊಂದಿಗೆ ಎದುರಾಗುವುದು ಯಾರಿಗೂ ಬೇಕಿಲ್ಲ. ಇದನ್ನು ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ರಂಗದ ಮೇಲೆ ತಂದಿರುವುದು ಸವಾಲೂ ಹೌದು ಆಗಬೇಕಾಗಿರುವ ಕೆಲಸವೂ ಹೌದು.

ನಾಟಕಕಾರರು ಇಡೀ ನಾಟಕದುದ್ದಕ್ಕೂ ಎಂ.ಎಂ.ಕಲ್ಬುರ್ಗಿಯವರ ಬರಹ, ಮಾತುಗಳಲ್ಲಿನ ಸಾಲುಗಳನ್ನು ಸೊಗಸಾಗಿ, ಸಹಜವಾಗಿ ಹೆಣೆದಿದ್ದಾರೆ. ಕಲ್ಬುರ್ಗಿಯವರ ಬರಹಗಳ ಓದು, ಅವರ ನಿಕಟ ಒಡನಾಟ ಹೊಂದಿದ್ದ ಬಿಜಾಪುರದ ನೋಡುಗರು ಪ್ರತಿ ಮಾತಿಗೂ ತಲೆ ತೂಗುತ್ತಿದ್ದುದು ವಿಶಿಷ್ಟವಾಗಿತ್ತು. ಇನ್ನೊಂದು ವಿಶೇಷವೆಂದರೆ ಬಿಜಾಪುರ ಜಿಲ್ಲೆಯ ಸಿಂದಗಿ ಕಲ್ಬುರ್ಗಿಯವರ ಹುಟ್ಟೂರು. ಹೀಗಾಗಿ ಇಲ್ಲಿನ ಪ್ರದರ್ಶನ ವಿಶೇಷವಾಗಿತ್ತು.

**ದಾಳವಾದ ಯುವಕ**

ಇಡೀ ಜಗತ್ತಿನಾದ್ಯಂತ ವೈಚಾರಿಕತೆ, ಸತ್ಯದ ಹುಡುಕಾಟದ ಕಡೆಗೆ ಮೊದಲಿಗೆ ಅವಜ್ಞೆ, ನಂತರ ದ್ವೇಷ ಹೊಗೆಯಾಡುತ್ತಿದೆ. ಇಲ್ಲಿ ಸತ್ಯದ ದಾರಿಯಲ್ಲಿ ಸಾಗುವುದು ಬೇಕಿಲ್ಲ. ಈ ದ್ವೇಷ ತನ್ನ ಅಧಿಕಾರ ಮುಂದುವರೆಸಿಕೊಂಡು ಹೋಗುವ ಉದ್ದೇಶದಿಂದ ಸತ್ಯಶೋಧಕರನ್ನೇ ಬೇಟೆಯಾಡಲು, ಇಲ್ಲವಾಗಿಸಲು ಹೊರಟಿದೆ. ಪ್ರತಿದಿನದ ಬದುಕನ್ನು ನಡೆಸಲು ಹೋರಾಟ ನಡೆಸುತ್ತಿರುವ ಮಂದಿ ತಮ್ಮ ಬದುಕು ಛಿದ್ರವಾಗುವುದೆಂಬ ಅರಿವಿಲ್ಲದೇ ಇದರ ಕಾಲಾಳುಗಳಾಗಿರುವುದು ವ್ಯಂಗ್ಯ. ಈ ನಾಟಕ ಮೊದಲಿನಿಂದ ಕೊನೆಯವರೆಗೆ ಹೀಗೆ ದಾಳವಾದ ಯುವಕನನ್ನು ಕಲ್ಬುರ್ಗಿಯವರ ಎದುರು ತಂದು ವಾಗ್ವಾದ ಹೆಣೆದಿದೆ. ಆದರೆ ಕಣ್ಣಿಗೆ ಕಾಣದ ಇದರ ಹಿಂದಿನ ಸೂತ್ರಧಾರಿಗಳು ಇಲ್ಲೂ ಅವ್ಯಕ್ತವಾಗೇ ಇದ್ದಾರೆ. ಯುವಕನ ಹತಾಶೆ, ದಿಕ್ಕೆಟ್ಟ ಸ್ಥಿತಿಯಷ್ಟೇ ಚಿತ್ರಣಗೊಂಡು ಹೀಗೆ ತನ್ನ ಬದುಕೂ ಕಳೆದುಕೊಂಡ ಅವನ ಬಗ್ಗೆ ವಿಷಾದ ಮೂಡುತ್ತದೆ.

ವೈಚಾರಿಕತೆ ಮತ್ತು ಮೌಢ್ಯ ಇಲ್ಲಿ ಎದುರು ಬದುರಾಗುತ್ತದೆ. ಒಂದು ಕ್ಷಣ ಮೈಮರೆತರೂ ಸಂಭಾಷಣೆಯ ಎಳೆ ತಪ್ಪಿಹೋಗುವಂತೆ ನಾಟಕಕಾರರು ಮಾತುಗಳನ್ನು ಹೆಣೆದಿದ್ದಾರೆ. ಸಂಗೀತವೂ ನಾಟಕದ ಓಘಕ್ಕೆ ಪೂರಕವಾಗಿ ಬಂದಿದೆ. ಇಡೀ ನಾಟಕವೇ ಸಂಭಾಷಣೆಯಿಂದ ಕಿಕ್ಕಿರಿದಿದೆ. ಇದು ನಮ್ಮನ್ನು ಆವರಿಸಿಕೊಳ್ಳುವುದಾದರೂ ದೃಶ್ಯಮಾಧ್ಯಮದ ವಿವಿಧ ಸಾಧ್ಯತೆಗಳನ್ನು ಬಳಸಿಕೊಂಡಿದ್ದಲ್ಲಿ ನಾಟಕ ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿರುತ್ತಿತ್ತು.

**'ನಾವೆಲ್ಲರೂ ಒಂದರ್ಥದಲ್ಲಿ ಕೊಲೆಗಾರರೇ'**

ದೃಶ್ಯವೊಂದರಲ್ಲಿ ಅನೇಕ ವಿದ್ವಾಂಸರು ಪಾನಗೋಷ್ಠಿ ಮಾಡುತ್ತಾ ತಮ್ಮೊಳಗನ್ನೇ ಬಗೆದುಕೊಳ್ಳುವ ದೃಶ್ಯ ಮಾರ್ಮಿಕವಾಗಿದೆ. ಸ್ವಹಿತಾಸಕ್ತಿ, ಅಸೂಯೆ, ನಿರ್ಲಕ್ಷ್ಯ, ಜಡತ್ವ ಹೇಗೆ ಬೌದ್ಧಿಕ ವಲಯವನ್ನು ಭ್ರಷ್ಟಗೊಳಿಸುತ್ತದೆ ಎಂಬುದರ ಸುತ್ತ ಮಾತು ಬೆಳೆದು ಕೊನೆಗೆ 'ನಾವೆಲ್ಲರೂ ಒಂದರ್ಥದಲ್ಲಿ ಕೊಲೆಗಾರರೇ' ಎಂಬ ಮಾತು ಆತ್ಮನಿರೀಕ್ಷೆಗೆ ಹಚ್ಚುತ್ತದೆ. ನಮ್ಮ ನಾಡಿನಲ್ಲಿ ಕಲ್ಬುರ್ಗಿಯವರ ಪರಂಪರೆಯ ಸತ್ಯಶೋಧಕರಿರುವಂತೆಯೇ ಯಥಾಸ್ಥಿತಿವಾದವನ್ನು ವರ್ಣರಂಜಿತವಾಗಿ ಮುಂದಿಡುವವರೂ ಇದ್ದಾರೆ. ಕೆಲವೊಮ್ಮೆ ಸತ್ಯ ಯಾವುದು ತಿಳಿದಿದ್ದೂ ತಮಗೆ ತೊಂದರೆಯಾದೀತೆಂದು ಮಾತಾಡದವರಿದ್ದಾರೆ. ಇವೆಲ್ಲವನ್ನೂ ತೋರುವುದರ ಮೂಲಕ ನಾಟಕ ಹಲವು ಮಜಲುಗಳಲ್ಲಿ ಚಿಂತನೆಗೆ ಹಚ್ಚುತ್ತದೆ.

**ಬರೆಯುವುದು ಸವಾಲೆ**

ಇಂಥದ್ದೊಂದು ನಾಟಕ ಬರೆಯುವುದು ಮತ್ತು ಪ್ರದರ್ಶಿಸುವುದು ಎರಡೂ ಸವಾಲೆನಿಸುವ ಕಾಲದಲ್ಲಿ ನಾವಿದ್ದೇವೆ. ಹೀಗಿದ್ದೂ ಸತ್ಯಕ್ಕೆ ಮುಖಾಮುಖಿಯಾಗುವುದು ಕಲೆಯ ಜವಾಬ್ದಾರಿ ಎಂದು ಭಾವಿಸಿ ಇದನ್ನು ಬರೆದ ಮತ್ತು ರಂಗದ ಮೇಲೆ ತಂದ ಎಲ್ಲರಿಗೂ ನಾಡು ಋಣಿಯಾಗಿರುತ್ತದೆ.

***–ಭಾರತಿ ದೇವಿ ಪಿ.***

(ಮೂಲ : ಫೇಸ್‌ಬುಕ್ ಪೋಸ್ಟ್‌ಗಳು)

## 'ದೇಶಭಕ್ತಿ ಅನ್ನೋದು ರಕ್ತದ ಕುದಿತದಲ್ಲಲ್ಲ, ಬೆವರಿನೊಳಗಿರ್ತದ.'

ಸಮಕಾಲೀನ ಸಾಮಾಜಿಕ ಸಂಘರ್ಷ ಒಂದರ ಭಾಗವಾಗಿ ಬೌದ್ಧಿಕವಾಗಿ ಸೆಣಸುವಲ್ಲಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟ ಸಂಶೋಧಕರ ಮುಖಾಮುಖಿಯಾದೆ ಎಂಬಷ್ಟು

ಪುಟ 14 ಕ್ಕೆ

**JANASHAKTHI KANNADA VARA PATRIKE:** Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**